# ಸಂಕ್ರಮಣದ ಸಮಯಗಳು

## ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರ ಬರಹಗಳಿಂದ ಆಯ್ದುಕೊಂಡದ್ದು

ಅಖಿಲ ಭಾರತ ಪತ್ರಿಕೆ

ಫೆಬ್ರವರಿ 2016

ಬೆಲೆ : 15/–



*Shake off all narrowness,*
*selfishness, limitations, and wake up*
*to the consciousness of Human Unity.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
(ರಿ) ಜೆ.ಪಿ. ನಗರ, ಮೊದಲನೇ
ಹಂತ, ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
(ರಿ) ಜೆ.ಪಿ. ನಗರ, ಮೊದಲನೇ
ಹಂತ, ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
(ರಿ) ಜೆ.ಪಿ. ನಗರ, ಮೊದಲನೇ
ಹಂತ, ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಸಂಕ್ರಮಣದ ಸಮಯಗಳು"

**ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರ ಬರಹಗಳಿಂದ ಆಯ್ದುಕೊಂಡದ್ದು**

**ಅನು : ಡಾ. ಕೆ.ಎಸ್. ಆಮೂರ**

AIM ಸಂಪಾದಕರ ಟಿಪ್ಪಣಿ 2
ದೇವ ಮುಹೂರ್ತ 4
ಹೊಸ ಜಗತ್ತಿನ ಬೀಜಗಳು 12
ಹೊಸ ಸಮಾಜ ಶಾಸ್ತ್ರ: ಸಮಾನತೆಯ ಆಧಾರ 14
ಬದಲಾವಣೆಯ ಗಾಳಿಗಳು 22
ಹೊಸ ಸೃಷ್ಟಿಯ ಅರಳಿಕೊಳ್ಳುವಿಕೆ 36

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಭವಿಷ್ಯತ್ತನ್ನು ರಕ್ಷಿಸುವುದು 46

**ಅನು : ಶ್ರೀ ವೀರೇಂದ್ರ ಸಿಂಪಿ**

ಹೊಸ ಪೃಥ್ವಿ 52

**ವಾರ್ತಾಪತ್ರ** 63

## All India Magazine ಸಂಪಾದಕರ ಟಿಪ್ಪಣಿ:


“ದೈವೀ ಗಳಿಗೆಗಳು ಎಂದು ಕರೆಯಬಹುದಾದ ಒಂದು ಗಳಿಗೆಯಲ್ಲಿ ನಾವಿದ್ದೇವೆ, ಈಗ ಹಳೆಯ ಆಧಾರಗಳೆಲ್ಲ ಅಲುಗಾಡುತ್ತಿವೆ, ಮತ್ತು ಅಲ್ಲಿ ದೊಡ್ಡ ಗೊಂದಲವಿದೆ, ಆದರೆ ಮುಂದೆ ನೆಗೆತ ಮಾಡಿ ಹೋಗಲು ಬಯಸುವವರಿಗೆ ಅದು ಅದ್ಭುತ ಅವಕಾಶವಾಗಿರುತ್ತದೆ, ಪ್ರಗತಿಗಾಗಿರುವ ಸಾಧ್ಯತೆ ಅಸಾಧಾರಣವಾಗಿರುತ್ತದೆ” ಎಂದು 1971 ರಲ್ಲಿ ಶ್ರೀಮಾತೆಯವರು ನಮಗೆ ಎಚ್ಚರಿಕೆ ನೀಡಿದ್ದಾರೆ. ನಿಜವಾಗಿ ಇವು ಗೊಂದಲವಿರುವ ಸಮಯಗಳು, ಇಲ್ಲವೆ ಸಂಕ್ರಮಣ ಕಾಲದ ಸಮಯಗಳೆಂದು ಹೇಳಬಹುದು. 1956 ರಲ್ಲಾದ ಅತಿಮಾನಸದ ಪ್ರಕಟಣೆಯ ನಂತರ ಮನುಕುಲ ಹೆಚ್ಚು ಹೆಚ್ಚಾಗಿ ಹೊಸ ಪ್ರಜ್ಞೆಯ ಒತ್ತಡದಡಿಯಲ್ಲಿ ಎರಕಗೊಳ್ಳುತ್ತಿದೆ, ಘಾತೀಯ(exponential) ರೀತಿಯಲ್ಲಿ ಒತ್ತಡ ಹೆಚ್ಚಾಗುತ್ತಿದೆ, ಮತ್ತು ಮನುಕುಲ ತನ್ನ ರೀತಿಗಳನ್ನು ದೈವೀ ರೀತಿಗಳನ್ನಾಗಿ ಬದಲಾಯಿಸಲು ಒತ್ತಡಕ್ಕೀಡಾಗಿದೆ. ಹೊಸ ಅಭೀಪ್ಸೆಗಳು ಮನುಕುಲದ ಮನಸ್ಸನ್ನು ಕ್ರಿಯಾಶೀಲವಾದದ್ದನ್ನಾಗಿ ಮಾಡಿವೆ ಮತ್ತು ಹೊಸ ಭರವಸೆಗಳು ಮಾನವ ನಿಶೆಯಾದ್ಯಂತ ಒಳಗೆ ನುಸುಳಿ ಬರುತ್ತಿವೆ. ಆದರೆ ಆ ನಿಶೆ ಇನ್ನೂ ತೊಲಗಿ ಹೋಗಿಲ್ಲ. ಪೌರಾಣಿಕ ಭಯಾನಕ ಪಕ್ಷಿ(dragon)ಯ ಹಾಗೆ ಅದು ತನ್ನ ಬಾಲದ ಪ್ರಹಾರ ನೀಡುತ್ತದೆ. ಹಳೆಯ ಜಗತ್ತು ಇನ್ನೂ ಪ್ರತಿರೋಧ ಒಡ್ಡುತ್ತಿದೆ ಮತ್ತು ಹೊಸದಾದದ್ದು ಇನ್ನೂ ಬಾಲ್ಯಾವಸ್ಥೆಯಲ್ಲಿದೆ, ನಿಧಾನವಾಗಿ ನುಸುಳುತ್ತಿದೆ, ಆದರೆ ನಿಶ್ಚಿತವಾಗಿ, ನಾವು ಪ್ರಜ್ಞೆಯಲ್ಲಿ ಕಂಡಿರದ ಖಾಲಿ ಜಾಗಗಳಲ್ಲಿ ಸರಿದು ಬರುತ್ತಿದೆ. ಶ್ರೀಮಾತೆಯವರ 138 ನೆಯ ಜನ್ಮದಿನಕ್ಕೆ ಹಾಗೂ ಅತಿಮಾನಸ ಅವತರಣದ 15 ನೆಯ ವಾರ್ಷಿಕ ದಿನಕ್ಕೆ ಈ ಸಂಚಿಕೆಯನ್ನು ಮುಡಿಪಾಗಿರಿಸಲಾಗಿದೆ, ಹಾಗೆಯೇ ಈ ಸಂಚಿಕೆ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ತಮ್ಮ ತಪಸ್ಸಿನ ಮೂಲಕ ಬದಲಾವಣೆಗಳ ಕೆಲವೊಂದು ರೀತಿಗಳನ್ನು ಪ್ರಾರಂಭಿಸಿ ಅವುಗಳ ನೆರವೇರಿಕೆಯತ್ತ ಕೊಂಡೊಯ್ಯುವುಗಳ ಮೇಲೆ ಕೇಂದ್ರೀಕರಿಸಿದೆ. ಫೆಬ್ರುವರಿ ತಿಂಗಳಿನ ಮಹತ್ವ ಭವ್ಯವಾಗಿದೆ, ಅದು ಹಾಗಿರುವಾಗ ಶ್ರೀಮಾತೆಯವರು ತಮ್ಮ 80 ನೆಯ ಜನ್ಮದಿನವಾಗಿದ್ದ ಫೆಬ್ರುವರಿ 21, 1958 ರಲ್ಲಿ ನೀಡಿದ್ದ ಸಂದೇಶವೊಂದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಉಪಯುಕ್ತವಾಗಬಹುದು:

“ಸಂಕ್ರಮಣಾವಸ್ಥೆಯಲ್ಲಿರುವ ದೇಹದ ಜನ್ಮದಿನವನ್ನು ವೈಭವದಿಂದ ಆಚರಿಸುವುದು ವಿಶ್ವಾಸಾರ್ಹವಾದ ಕೆಲವು ಭಾವನೆಗಳಿಗೆ ತೃಪ್ತಿ ತಂದುಕೊಡಬಹುದು.

ವಿಶ್ವದ ಇತಿಹಾಸದ ಪ್ರತಿಯೊಂದು ಕ್ಷಣದಲ್ಲಿ ಸನಾತನ ದೈವೀ ಪ್ರಜ್ಞೆಯ ಪ್ರಕಟಣೆಯನ್ನು ವೈಭವದಿಂದ ಆಚರಿಸಬಹುದು.

ಆದರೆ ಹೊಸ ಜಗತ್ತಿನ ಎಂದರೆ ಅತಿಮಾನಸ ಜಗತ್ತಿನ ಆಗಮನವನ್ನು ವೈಭವದಿಂದ ಆಚರಿಸುವುದು ವಿಶೇಷವಾದ ಅಸಾಧಾರಣ ಸುಯೋಗವಾಗಿರುತ್ತದೆ.”

*



"ನೀವು ಭವ್ಯ ಕೊನೆಯನ್ನು ನೋಡಿದಲ್ಲೆಲ್ಲ ಒಂದು ಶ್ರೇಷ್ಠ ರೀತಿಯ ಪ್ರಾರಂಭವಿರುತ್ತದೆ ಎಂಬುದರ ಬಗ್ಗೆ ನಿಶ್ಚಿತತೆಯಿಂದಿರಬೇಕು. ರಾಕ್ಷಸೀಯ ಹಾಗೂ ವೇದನಾಪೂರ್ಣ ವಿನಾಶ ನಿಮ್ಮ ಮನಸ್ಸಿಗೆ ಭೀತಿಯನ್ನುಂಟು ಮಾಡಿದಾಗೆಲ್ಲ ಭವ್ಯ ಹಾಗೂ ಶ್ರೇಷ್ಠ ಸೃಷ್ಟಿ ಬರಲಿದೆ ಎಂಬ ನಿಶ್ಚಿತತೆಯಿಂದ ಆ ಮನಸ್ಸಿಗೆ ಸಮಾಧಾನ ತಂದುಕೊಡಬೇಕು. ದೇವ ನಿಶ್ಚಲ, ಚಿಕ್ಕ ಧ್ವನಿಯಲ್ಲಿರುವನಷ್ಟೇ ಅಲ್ಲ, ಆದರೆ ಅಗ್ನಿಯಲ್ಲಿ, ಸುಂಟರಗಾಳಿಯಲ್ಲಿಯೂ ಕೂಡ ಇರುವನು."

"ವಿನಾಶ ಹೆಚ್ಚು ಭವ್ಯವಾದ ಹಾಗೆ ಸೃಷ್ಟಿಯ ಅವಕಾಶಗಳು ಹೆಚ್ಚು ಮುಕ್ತವಾಗಿರುತ್ತವೆ; ಆದರೆ ಬಹಳಷ್ಟು ಸಲ ವಿನಾಶ ದೀರ್ಘ ಕಾಲದವರೆಗೆ ಇರುತ್ತದೆ, ನಿಧಾನಗತಿಯದಾಗಿರುತ್ತದೆ, ಸಹಿಸಲು ಕಷ್ಟಕರವಾಗಿರುತ್ತದೆ, ಸೃಷ್ಟಿ ಅದರ ಬರುವಿಕೆಯಲ್ಲಿ ಮಂದಗತಿಯದಾಗಿರುತ್ತದೆ ಇಲ್ಲವೆ ಅದರ ವಿಜಯದಲ್ಲಿ ಅಡೆತಡೆ ಉಂಟಾಗುತ್ತಿರುತ್ತದೆ. ರಾತ್ರಿ ಮತ್ತೆ ಮತ್ತೆ ಮರಳಿ ಬರುತ್ತದೆ, ಆದರೆ ಹಗಲು ಕಾಲಹರಣ ಮಾಡುತ್ತದೆ, ಇಲ್ಲವೆ ಮಿಥ್ಯಾರೂಪದ ಅರುಣೋದಯದ ಹಾಗೆ ತೋರಿಬರುತ್ತದೆ. ಆದ್ದರಿಂದ ನಿರಾಶೆಗೊಳಗಾಗುವುದು ಬೇಡ, ಆದರೆ ಗಮನಿಸಬೇಕು ಹಾಗೂ ಕಾರ್ಯಕೈಕೊಳ್ಳಬೇಕು."

“ಯಾವ ಕಾರಣಕ್ಕಾಗಿ ದೇವ ಇಷ್ಟೊಂದು ಭಯಾನಕ ರೀತಿಯಲ್ಲಿ ತನ್ನ ಜಗತ್ತಿನ ಮೇಲೆ ಸುತ್ತಿಗೆ ಪೆಟ್ಟುಗಳನ್ನು ನೀಡುತ್ತಿದ್ದಾನೆ, ತುಳಿದು ಹಾಕುತ್ತಾನೆ, ಕಣಕವನ್ನು ನಾದಿದ ಹಾಗೆ ನಾದುತ್ತಾನೆ, ಅದನ್ನು ಎಷ್ಟೊಂದು ಸಲ ಕುಲುಮೆಯ ಕೆಂಪು ರಕ್ತ–ಶಾಖದಲ್ಲಿ ಎಸೆಯುತ್ತಾನೆ? ಏಕೆಂದರೆ ಮನುಕುಲ ಅದರ ಮೊತ್ತದಲ್ಲಿ, ಇನ್ನೂ ಬಿರುಸಾಗಿದೆ, ಒರಟಾಗಿದೆ ಹಾಗೂ ತುಚ್ಛ ಅದಿರಿನಂತಿದೆ, ಅದನ್ನು ಕುಲುಮೆಯಲ್ಲಿ ಹಾಕದಿದ್ದರೆ ಅದರಿಂದ ಲೋಹವನ್ನು ಹೊರತೆಗೆದು ಅದಕ್ಕೆ ಆಕಾರ ಕೊಡಲಾಗುವುದಿಲ್ಲ; ಅವನ ಮೂಲವಸ್ತು ಇದ್ದ ಹಾಗೆ ಅವನ ವಿಧಾನವಿರುತ್ತದೆ. ಆ ವಿಧಾನ ತನ್ನನ್ನು ಹೆಚ್ಚು ಉದಾರವಾದ ಮತ್ತು ಪರಿಶುದ್ಧವಾದ ಲೋಹವಾಗುವ ರೂಪ ಪರಿವರ್ತನೆಗೆ ಒಳಪಡಿಸಿಕೊಳ್ಳುವುದಕ್ಕೆ ಸಹಾಯಕವಾಗಲಿ, ಅದರೊಂದಿಗೆ ಅವನ ರೀತಿಗಳು ಹೆಚ್ಚು ಸೌಮ್ಯ ಹಾಗೂ ಮಧುರವಾಗಿರುತ್ತವೆ, ಅದರ ಉಪಯುಕ್ತತೆಗಳು ಹೆಚ್ಚು ಉನ್ನತವಾಗಿರುತ್ತವೆ ಹಾಗೂ ಹೆಚ್ಚು ಸೊಗಸಾದವುಗಳಾಗಿರುತ್ತವೆ:

**(SABCL, 16/392–93)** **– ಶ್ರೀ ಅರವಿಂದರು**

*

## ದೇವ ಮುಹೂರ್ತ

### ಹೊಸ ಜಗತ್ತಿನ ಹೆರಿಗೆ ನೋವುಗಳು

ಕಾಲದ ಮೇಲೆ ಬಹಳಷ್ಟು ಅವಲಂಬಿಸಿದೆ, ಮತ್ತು ನಮ್ಮವೇ ಅಚ್ಚು ಮೆಚ್ಚಿನ ಯೋಜನೆಗಳಿಗೆ ಅಂಟಿಕೊಳ್ಳುವುದಕ್ಕಿಂತ, ಕೂಡಲೆ ಅವಶ್ಯವಾದ ದೇವನ ಉದ್ದೇಶವನ್ನು ಅರಸುವುದು ಹೆಚ್ಚು ಮಹತ್ವದ್ದು. ಕಾಲಪುರುಷ, ಕಾಲಧರ್ಮ ಮತ್ತು ಮೃತ್ಯುದೇವತೆ ಎಂಬ ಹೆಸರುಗಳುಳ್ಳದ್ದು ತನ್ನ ಭೀತಿಕಾರಕ ಕಾರ್ಯಕ್ಕಾಗಿ ಮೇಲೆದ್ದು ನಿಂತಿದೆ – ‘ಲೋಕ ಕ್ಷಯ ಕೃತ್ ಪ್ರವರ್ಧಃ’ – ಜಗತ್ತನ್ನು ನಾಶ ಮಾಡಲು ಹೆಚ್ಚಿಕೊಳ್ಳುತ್ತಿದೆ – ಮತ್ತು ಕಾಲಪುರುಷನ ಭೀಕರತೆ, ಸರ್ವಶಕ್ತತೆ ಮತ್ತು ಅಪ್ರತಿರೋಧ್ಯತೆ ಇವುಗಳನ್ನು ಯಾರು ತಡೆಹಿಡಿದಿಡಬಲ್ಲರು? ಆದರೆ ಅವನು ಹಿಂದೆ ಇದ್ದ ಜಗತ್ತನ್ನು ನಾಶ ಮಾಡುತ್ತಾನಷ್ಟೇ ಅಲ್ಲ, ಆದರೆ ಮುಂದೆ ಇರಬಹುದಾದ ಜಗತ್ತನ್ನು ಸೃಷ್ಟಿಸುತ್ತಾನೆ; ಆದ್ದರಿಂದ ಅವನು ನಾಶ ಮಾಡುತ್ತಿರುವುದನ್ನು ನಮ್ಮ ತೋಳುಗಳಿಂದ ಅಪ್ಪಿಕೊಳ್ಳುವುದರ ಬದಲಾಗಿ, ಗೋಳಿಡುವುದರ ಬದಲಾಗಿ ಅವನು ನಿರ್ಮಾಣ ಮಾಡುತ್ತಿರುವುದನ್ನು ಶೋಧಿಸುವುದು, ಅದಕ್ಕೆ ಸಹಾಯ ಮಾಡುವುದು ಹೆಚ್ಚು ಲಾಭದಾಯಕವಾದದ್ದು.

ಅರಿವಿಗೆ ಬಾರದ ಅವನ ಪ್ರವೃತ್ತಿಯನ್ನು ಶೋಧಿಸುವುದು ಸುಲಭಸಾಧ್ಯವಲ್ಲ, ಬಹಳಷ್ಟು ಸಲ ನಾವು ತಾತ್ಕಾಲಿಕ ರಚನೆಗಳನ್ನು ಹೆಚ್ಚಿನ ರೀತಿಯಲ್ಲಿ ಹೊಗಳುತ್ತೇವೆ, ಆದರೆ ಅವು ಕೇವಲ ಈ ಕುರುಕ್ಷೇತ್ರದ ವೀರಯೋಧರರಿಗಾಗಿ ನಿರ್ಮಿಸಿದ ಗುಡಾರಗಳಾಗಿರುತ್ತವೆ, ಅವು ಭವಿಷ್ಯತ್ತಿನ ಶಾಶ್ವತ ಕಟ್ಟಡಗಳೆಂದು ನಾವು ಭಾವಿಸುತ್ತೇವೆ.

ಹಾಗಾಗಿ ಪಂಡಿತರು ಸತ್ಯಯುಗದ ಆಚರಣೆ ಹಾಗೂ ಕಲಿಯುಗದ ಆಚರಣೆ ಇವುಗಳಲ್ಲಿ ಭೇದವನ್ನುಂಟು ಮಾಡಿದಾಗ ಅದು ಸರಿಯಾಗಿಯೇ ಇರುತ್ತದೆ. ಆದರೆ ಈ ಜ್ಞಾನದ ಅನ್ವಯದಲ್ಲಿ ಅವರು ಯಾವಾಗಲೂ ಜಾಣರು ಪಾಂಡಿತ್ಯವುಳ್ಳವರು ಆಗಿರುತ್ತಾರೆ ಎಂದು ನನಗೆ ತೋರಿಬರುವುದಿಲ್ಲ. ಕಲಿಯುಗ ವಿನಾಶಕ್ಕಾಗಿ ಹಾಗೂ ಪುನರ್ಜನ್ಮ ತಾಳುವುದಕ್ಕಾಗಿ ಇದೆ, ಇನ್ನುಮುಂದೆ ಉಳಿಸಿಕೊಳ್ಳಲಾಗದ ಹಳೆಯದಕ್ಕೆ ನಿರಾಶೆಯಿಂದ ಯಾವುದಕ್ಕೂ ಹೇಸದೆ ಅಂಟಿಕೊಳ್ಳುವುದಕ್ಕಾಗಿ ಅಲ್ಲ ಎಂಬುದನ್ನು ಮರೆತಿರುತ್ತಾರೆ ಇಲ್ಲವೆ ತಿಳಿದು–ಕೊಂಡಿರುವುದಿಲ್ಲ. ಕಲಿವರ್ಜದ ಪದ್ಧತಿಯಲ್ಲಿ ಅವರು ತಮ್ಮನ್ನು ಬೇರೂರಿಸುತ್ತಾರೆ, ಆದರೆ ವರ್ಜನ ಕ್ರಿಯೆ ದೌರ್ಬಲ್ಯಗಳ ಮೇಲಲ್ಲ, ಆದರೆ ಹಳೆಯ ಕಾಲದ ಸಾಮರಸ್ಯವಿರುವ ಬಲಗಳು ವರ್ಜನ ಕ್ರಿಯೆಯ ಅಧೀನಕ್ಕೊಳಗಾಗಿರುತ್ತವೆ ಎಂಬುದನ್ನು ಮರೆತಿರುತ್ತಾರೆ. ಉಳಿಸಿಕೊಳ್ಳಲಾದದ್ದು ಕೇವಲ ತಾತ್ಕಾಲಿಕ ವೇದಿಕೆ, ಅದನ್ನು ನಾವು ಬದಲಾವಣೆಯ ಸಮುದ್ರದ ದಂಡೆಗಳ ಮೇಲೆ ರಚಿಸಿರುತ್ತೇವೆ, ಅದು ಹೆಚ್ಚು ಸ್ಥಿರತೆಯುಳ್ಳ ವಾಸ ಸ್ಥಳಕ್ಕಾಗಿ ಕಾದುಕೊಂಡಿರುತ್ತದೆ, ಅದೂ ಕೂಡ ಒಂದು ದಿನ ತರಂಗಗಳ ಹೊಡೆತದಿಂದ ಮುರಿದು ಬೀಳಬೇಕು, ಮುಳುಗಿಸುವ ನೀರಿನಲ್ಲಿ ಮಾಯವಾಗಬೇಕು. ವಿನಾಶಕ್ಕಾಗಿ ಕಾಲ ಸನ್ನಿಹಿತವಾಗಿದೆಯೆ? ಅದು ಬಂದಿದೆ ಎಂದು ನಮಗನಿಸುತ್ತದೆ. ಮೇಲೆರಗುವಿಕೆಯಿಂದ ಭೀತಿ ಹುಟ್ಟಿಸುವುದಕ್ಕಿಂತ ಹೆಚ್ಚಿನದಿರುವ ಆ ಜಲರಾಶಿಗಳ ಹೊಡೆತದ ಧ್ವನಿಗಳನ್ನು ಕೇಳಿರಿ; ನಿಧಾನಗತಿಯ ಮುನಿಸಿಕೊಂಡ ಕನಿಕರವಿಲ್ಲದ ನಿಸ್ಸತ್ವಗೊಳಿಸುವಿಕೆಯನ್ನು ಗುರುತಿಸಿರಿ – ನಮ್ಮ ತೇಪೆಗೊಳಗಾದ, ಅಸಂಬದ್ಧ, ಜರ್ಜರಿತ ಕಟ್ಟಡ ಗುಡ್ಡೆಯ ನಂತರ ಗುಡ್ಡೆಯ ಹಾಗೆ ಆಗಿರುವುದನ್ನು ಗಮನಿಸಿರಿ, ಆ ಕಟ್ಟಡ ಕೊರೆದುಕೊಂಡು ಹೋಗುತ್ತಿದೆ, ಕಿರುಗುಟ್ಟುತ್ತಿದೆ, ಹೊಡೆತಗಳಿಂದಾಗಿ ಅಲುಗಾಡುತ್ತಿದೆ, ಮುರಿದು ಹೋಗುತ್ತಿದೆ, ಮೌನದೊಂದಿಗೆ ಇಲ್ಲವೆ ಎರಚಾಟದೊಂದಿಗೆ ಒಮ್ಮೆಗೆ ಇಲ್ಲವೆ ಸ್ವಲ್ಪ ಸ್ವಲ್ಪವಾಗಿ ಆ ಹೆದ್ದೆರೆಗಳ ಹುದುಗಿನಲ್ಲಿ ಮುಳುಗುತ್ತಿದೆ, ಹೊಸ ರಚನೆಗಾಗಿ

ಕಾಲ ಸನ್ನಿಹಿತವಾಗಿದೆಯೆ? ಅದು ಬಂದಿದೆ ಎಂದು ನಾವು ಹೇಳುತ್ತೇವೆ. ಮನುಕುಲದ ಚಟುವಟಿಕೆಯನ್ನು, ಆತುರತೆಯನ್ನು, ಅತ್ತಿತ್ತ ಅವಸರದಿಂದ ಅಲೆದಾಡುತ್ತಿರುವುದನ್ನು, ತೀವ್ರಗತಿಯಿಂದ ಎದುರು ನೋಡುತ್ತಿರುವುದನ್ನು, ಅರಸುತ್ತಿರುವುದನ್ನು, ಅಗೆಯುತ್ತಿರುವುದನ್ನು, ತಳಹದಿ ಹಾಕುತ್ತಿರುವುದನ್ನು ಗುರುತಿಸಿರಿ; ಅವತಾರ ಪುರುಷರು, ಶ್ರೇಷ್ಠ ವಿಭೂತಿಗಳು, ಬರುತ್ತಿರುವುದನ್ನು, ದಟ್ಟವಾಗಿ ಮೇಲಕ್ಕೇರುತ್ತಿರುವುದನ್ನು, ಒಬ್ಬರು ಪ್ರತಿಯೊಬ್ಬರ ಹಿಂದೆ ಹೆಜ್ಜೆ ಇರಿಸುತ್ತಿರುವುದನ್ನು ನೋಡಿರಿ. ಇವು ಕುರುಹುಗಳಾಗಿರುವುದಿಲ್ಲವೆ, ಕಲಿಯ ಸತ್ಯಯುಗವನ್ನು ಸ್ಥಾಪಿಸುವುದಕ್ಕಾಗಿ ಎಲ್ಲದಕ್ಕಾಗಿ ಶ್ರೇಷ್ಠ ಅವತಾರ ಬರಲಿರುವುದನ್ನು ನಮಗೆ ಅವು ಹೇಳುತ್ತಿರುವುದಿಲ್ಲವೆ?

**(CWSA, 12/56–57)** **– ಶ್ರೀ ಅರವಿಂದರು**

*

**ಹೊಸ ಅರುಣೋದಯದ ಮೊದಲ ಏಕಾಏಕಿ ಆರಂಭ**

ಈಗಾಗಲೆ ಕಲಿಯುಗದ ಐದು ಸಾವಿರ ವರ್ಷಗಳು ಕಳೆದು ಹೋಗಿವೆ. ಪ್ರಾಚೀನ ಸತ್ಯಯುಗದ ಕೊನೆಯ ವಿನಾಶವನ್ನು, ಅವಶೇಷವನ್ನು ತಯಾರು ಮಾಡುವುದಕ್ಕಾಗಿ ಅವು ಅವಶ್ಯವಾಗಿದ್ದವು. ದೌರ್ಬಲ್ಯ ಹಾಗೂ ಹಿಂಸೆ, ದೋಷ ಹಾಗೂ ಅಜ್ಞಾನ, ಹೆಚ್ಚುತ್ತಿರುವ ವೇಗ ಹಾಗೂ ಲಯಬದ್ಧತೆ ಇವೆಲ್ಲವುಗಳೊಂದಿಗೆ ಪೃಥ್ವಿಯ ಮೇಲೆ ಭರದಿಂದ ಬರುತ್ತಿರುವ ವಿಸ್ಮೃತಿ ಇವು ನಮಗಾಗಿ ಆ ಕಾರ್ಯ ಕೈಕೊಂಡಿವೆ. ಕಲಿ–ಸತ್ಯಯುಗದ ಮೊದಲ ಮುಂಜಾವು ಆರಂಭಗೊಳ್ಳಲು ತಯಾರಾಗಿದೆ, ಮೊದಲ ಸ್ವಲ್ಪ ಎಳೆಗಳು ಮಬ್ಬಾಗಿ ಗೋಚರವಾಗುತ್ತಿವೆ. ...

ಹೌದು, ಹೊಸ ಸಾಮರಸ್ಯ, ಆದರೆ ಅದು ಯುರೋಪಿಯನ್ ಪ್ರಾಪಂಚಿಕತೆಯ ಭಕ್ಷ್ಯಭೋಜ್ಯಗಳ ಕೊಳವೆಗಳದ್ದಲ್ಲ, ಅರ್ಧ ಸತ್ಯಗಳ ಹಾಗೂ ಇಡಿಯಾದ ಮಿಥ್ಯೆಗಳ ಪೌರ್ವಾತ್ಯ ತಳಹದಿಯ ಮೇಲಾದುದಲ್ಲ. ವಿನಾಶವಾದಾಗ ನಾಶ ಹೊಂದುವುದು ರೂಪವಾಗಿರುತ್ತದೆ, ಆತ್ಮವಲ್ಲ. – ಏಕೆಂದರೆ ಜಗತ್ತು ಹಾಗೂ ಅದರ ರೀತಿಗಳು ಒಂದು ದೈವೀಸತ್ಯದ ರೂಪಗಳು, ಆ ದೈವೀ ಸತ್ಯ ಈ ಭೌತಿಕ ಜಗತ್ತಿನಲ್ಲಿ ಎಂದೆಂದಿಗೂ ಹೊಸದಾದ ದೇಹಗಳಲ್ಲಿ ಮತ್ತು ಸತತ ಬದಲಾಗುತ್ತಿರುವ ಉಡುಗೆ ತೊಡುಗೆಗಳಲ್ಲಿ ತೋರಿಬರುವಂತಹದು – ಅಂತರಂಗದಲ್ಲಿರುವ ಸನಾತನನು ಬಾಹ್ಯದಲ್ಲಿರುವ ಅಸ್ಥಿರತೆಯ ಸಂತೋಷ

ಪಡೆಯುತ್ತಾನೆ. ಮೃತವಾಗಿರುವ ಹಳೆಯ ಸತ್ಯಯುಗದ ಸತ್ಯ ಜನ್ಮ ತಾಳಲಿರುವ ಹೊಸ ಸತ್ಯಯುಗದ ಸತ್ಯಕ್ಕಿಂತ ಭಿನ್ನವಾಗಿರಲಿಲ್ಲ, ಏಕೆಂದರೆ ದೈವೀಸತ್ಯ ತನ್ನನ್ನೇ ಯಾವಾಗಲೂ ಪುನರುಜ್ಜೀವನಗೊಳಿಸುತ್ತದೆ, ಪಟ್ಟುಹಿಡಿದು ಉಳಿದುಕೊಳ್ಳುತ್ತದೆ. ದೈವಿಕವಾಗಿ ಆಯ್ದುಕೊಳ್ಳಲಾದ ಪ್ರದೇಶವಾದ ಭಾರತದಲ್ಲಿ ಅದನ್ನು ರಕ್ಷಿಸಲಾಗುತ್ತದೆ, ಭಾರತದ ಆತ್ಮದಲ್ಲಿ ಅದು ನಿದ್ರಿಸುತ್ತದೆ, ಆತ್ಮದ ಎಚ್ಚತ್ತುಕೊಳ್ಳುವಿಕೆಯನ್ನು ನಿರೀಕ್ಷಿಸುತ್ತಿರುತ್ತದೆ. ಭಾರತದ ಆತ್ಮ ಸಿಂಹ ಸದೃಶವಾಗಿದೆ, ಪ್ರಕಾಶಮಯವಾಗಿದೆ, ಬಲ ಹಾಗೂ ವಿವೇಕಗಳಿರುವ ಪ್ರಾಚೀನ ಕಾಲದ ಕಮಲದ ದಳಗಳಲ್ಲಿ ಮುಚ್ಚಿಹಾಕಿಕೊಂಡಿದೆ, ಬಾಹ್ಯದಲ್ಲಿರುವಂತಹ, ದುರ್ಬಲ ಕೀಳು ಬುದ್ಧಿಯ ನಶ್ವರ ದುಃಸ್ಥಿತಿಗಳಲ್ಲಲ್ಲ. ಮನುಕುಲದ ಭವಿಷ್ಯತ್ತನ್ನು ಭಾರತ ಮಾತ್ರ ನಿರ್ಮಾಣ ಮಾಡಬಲ್ಲದು, ಭಾರತದಲ್ಲಿ ಮಾತ್ರ ಪರಿಣಾಮಕಾರಿ ಅವತಾರ ಪುರುಷ ಎಲ್ಲ ದೇಶಗಳಿಗೆ ತೋರಿಬರಬಲ್ಲನು. ಅವನು ತೋರಿಬರುವವರೆಗೆ ಭಾರತ ತನ್ನ ಧೂಳು ಮತ್ತು ಕೀಳುಸ್ಥಿತಿ ಇವುಗಳಿಂದ ಹೊರಬಂದು ತನ್ನನ್ನು ಒಟ್ಟುಗೂಡಿಸಿಕೊಳ್ಳಬೇಕು – ಅವು ಪುಡಿಪುಡಿಯಾಗಿ ಹೋದ ಸತ್ಯಯುಗದ ಸಂಕೇತ ರೂಪಗಳಲ್ಲಿವೆ – ಯೋಗದಿಂದ ತನ್ನ ಆತ್ಮದ ಸಂಸರ್ಗದಲ್ಲಿರಬೇಕು, ಅದರಿಂದಾಗಿ ತನ್ನ ಗತಕಾಲ, ಭವಿಷ್ಯತ್ಕಾಲಗಳನ್ನು ಅರಿತುಕೊಳ್ಳುವಂತಾಗುವುದು.

**(CWSA, 12/57)** **– ಶ್ರೀ ಅರವಿಂದರು**

*

**ಕ್ರಾಂತಿಕಾರಕ ಬದಲಾವಣೆಗಳಿಗಾಗಿ ಇರುವ ಸಮಯ**

ಸ್ಪಷ್ಟವಾಗಿ ಭವಿಷ್ಯತ್ತು ಎಚ್ಚತ್ತುಕೊಳ್ಳುತ್ತಿದೆ ಮತ್ತು ಗತಕಾಲವನ್ನು ಹೊಡೆದೋಡಿಸುತ್ತಿದೆ.

ಉದಾಹರಣೆಗೆ ಎಲ್ಲ ವಿದ್ಯಾರ್ಥಿಗಳು ಹಾಗೂ ಇಡೀ ಶ್ರಮಿಕ ವರ್ಗದ ಜನರು ಶಕ್ತಿಗಳೊಡನೆ ಕೂಡಿಕೊಂಡಿದ್ದಾರೆ. ಮಾನಸಿಕ ಹಂತದಲ್ಲಿ, ಸ್ವಾಭಾವಿಕವಾಗಿ, ಎಲ್ಲ ಬಗೆಯ ವಿಚಾರಗಳ ಇಡೀ ಮಿಶ್ರಣವಿದೆ, ಆದರೆ ಅದರ ಹಿಂದೆ ದೈವೀಶಕ್ತಿಯಿದೆ. ... ಉದಾಹರಣೆಗೆ ಶಿಕ್ಷಣದ ವಿಧಾನ ಸಂಪೂರ್ಣವಾಗಿ ಬದಲಾಗಲೆಂದು ವಿದ್ಯಾರ್ಥಿಗಳು ಬಯಸುತ್ತಾರೆ, ಎಲ್ಲ ಪರೀಕ್ಷೆಗಳನ್ನು ನಿಲ್ಲಿಸಿಬಿಡಬೇಕೆಂದು ಅವರು ಭೀಕರವಾಗಿ ಒತ್ತಾಯದಿಂದ ಬೇಡುತ್ತಿದ್ದಾರೆ. ಮತ್ತು ಅವರೇ ಸ್ವತಃ ಅದರ ಬಗ್ಗೆ ಅರಿವಿಲ್ಲದವರಾಗಿದ್ದಾರೆ, ಆದರೆ ಹೆಚ್ಚು ನಿಜವಾದ ಸತ್ಯದ ಪ್ರಕಟಣೆಯನ್ನು ಬಯಸುವ ಶಕ್ತಿಯೊಂದರ ಎಳೆತಕ್ಕೆ ಅವರು ಒಳಗಾಗಿದ್ದಾರೆ.

ಉಚ್ಚತರ ದೈವೀ ಸಾಮರ್ಥ್ಯ ಕೈಕೊಳ್ಳಲೇಬೇಕಾದುದರತ್ತ ಜನರನ್ನು ಬಲವಂತಪಡಿಸುತ್ತದೆ.

ಅದು ಚಲನೆಯ ವಿವರದಲ್ಲಲ್ಲ, ಆದರೆ ಅದರ ದಿಶೆಯಲ್ಲಿ ಸ್ಪಷ್ಟವಾಗಿ ಒಂದು ಸಂಕಲ್ಪವಿದೆ, ಅದು ಗತಕಾಲವನ್ನು ಅಳಿಸಿ ಹಾಕಿ ಭವಿಷ್ಯತ್ತಿಗೆ ದ್ವಾರವನ್ನು ತೆರೆದಿರಿಸಬೇಕೆಂದು ಬಯಸುತ್ತದೆ.

ಅದು ನಿಶ್ಚಲತೆಯೊಂದಿಗೆ ಅಪಕರ್ಷಣ (revulsion) ಇದ್ದ ಹಾಗೆ. ಅದೇ ಅದು.

ಇನ್ನೂ ದೂರದಲ್ಲಿರುವ, ಹೆಚ್ಚು ಪ್ರಕಾಶಮಾನವಾದ, ಹೆಚ್ಚು ಒಳ್ಳೆಯದಾಗಿ ತೋರಿಬರುತ್ತಿರುವ ಏನೋ ಒಂದಕ್ಕಾಗಿ ದಾಹ(thirst)ವಿದೆ, ಮತ್ತು ನಿಜವಾಗಿ ಅಲ್ಲಿ ಏನೋ ಒಂದಿದೆ ... ಅದು ಕೇವಲ ಕಲ್ಪನೆಯಲ್ಲ, ಅಲ್ಲಿ ಏನೋ ಒಂದಿದೆ. ಅಲ್ಲಿ ಏನೋ ಒಂದಿರುವುದೇ ಅದರ ಸೌಂದರ್ಯವಾಗಿದೆ, ಅಲ್ಲಿ ದೈವೀ ಉತ್ತರವಿದೆ. ಅಲ್ಲಿ ತನ್ನನ್ನು ಅಭಿವ್ಯಕ್ತಪಡಿಸಲು ಕಾದುಕೊಂಡಿರುವ ದೈವೀಶಕ್ತಿಯೊಂದಿದೆ.

**(ಅನುಯಾಯಿಯೊಂದಿಗೆ ಮಾತುಕತೆ, May 22, 1968) – ಶ್ರೀಮಾತೆ**

*

## ನಮಗೆ ಕಲಿಸಿಕೊಡುವುದಕ್ಕಾಗಿ ಗೊಂದಲವಿದೆ

ಕೊನೆಯದಾಗಿ, ಹೇಳುವುದಾದರೆ ಗೊಂದಲವಿದೆ ಎಂಬುದರ ಬಗ್ಗೆ ನನಗೆ ಮನವರಿಕೆಯಾಗಿದೆ, ದಿನದಿಂದ ದಿನಕ್ಕೆ ಹೇಗೆ ಜೀವಿಸಬೇಕು, ಎಂದರೆ ಏನು ಸಂಭವಿಸಬಹುದು, ಏನು ಸಂಭವಿಸಲಿದೆ ಎಂಬುದರ ಬಗ್ಗೆ ಪೂರ್ವಮಗ್ನವಾಗದೆ ಇರುವುದನ್ನು, ಮನುಷ್ಯ ತಾನು ದೈನಂದಿನ ಕೈಕೊಳ್ಳಬೇಕಾದುದರಲ್ಲಿ ಪೂರ್ವ–ಮಗ್ನವಾಗಿರಬೇಕು ಎಂಬುದನ್ನು ಕಲಿಸಿಕೊಡುವುದಕ್ಕಾಗಿ ಆ ಗೊಂದಲವಿದೆ; ಅದರಲ್ಲಿ ಎಲ್ಲ ಯೋಚನೆಗಳು, ಪೂರ್ವ ಯೋಜನೆಗಳು, ವ್ಯವಸ್ಥೆಗಳು, ಮತ್ತು ಹೆಚ್ಚಿನ ಅವ್ಯವಸ್ಥೆಗೆ ಬಹಳ ಅನುಕೂಲಕರವಾದ ಎಲ್ಲ ವಿಷಯಗಳಿವೆ. ...

ಇಂತಹ ಅವ್ಯವಸ್ಥೆ ಹಾಗೂ ಗೊಂದಲಗಳು ನಿಮ್ಮ ಮೇಲೆ ಆಕ್ರಮಣ ಮಾಡಿದಾಗ ನೀವು ಒಂದೇ ಕಾರ್ಯವನ್ನು ಕೈಕೊಳ್ಳಬೇಕು, ಅದೆಂದರೆ ಕೇವಲ ಒಂದೇ ಪ್ರಜ್ಞೆ, ಒಂದೇ ದೈವೀ ಸತ್ತೆ, ಒಂದೇ ದೈವೀ ಸಾಮರ್ಥ್ಯ ಇರುವುದರಲ್ಲಿ

ಪ್ರವೇಶಿಸುವುದಾಗಿದೆ. ಅಲ್ಲಿ ಕೇವಲ ಒಂದೇ ದೈವೀ ಏಕತೆಯಿದೆ – ಮತ್ತು ಇದೆಲ್ಲವೂ ಆ ಏಕೈಕವಾದುದರಲ್ಲಿ ಸಂಭವಿಸುತ್ತಿರುತ್ತದೆ. ಪ್ರಾಮುಖ್ಯತೆಯಿಲ್ಲದ ನಮ್ಮ ಎಲ್ಲ ದರ್ಶನಗಳು, ಜ್ಞಾನ ಹಾಗೂ ತೀರ್ಮಾನಗಳು ಇವೆಲ್ಲವನ್ನು ಎಲ್ಲದರ ಮೇಲೆ ಅಧ್ಯಕ್ಷತೆ ವಹಿಸುವ ದೈವೀ ಪ್ರಜ್ಞೆಗೆ ಹೋಲಿಸಿದರೆ ಸೂಕ್ಷ್ಮ ದರ್ಶಕಕ್ಕೆ ಕಂಡುಬರುವಂತಹವಾಗಿರುತ್ತವೆ. ಹಾಗಾಗಿ ಮನುಷ್ಯನಲ್ಲಿ, ಪ್ರತ್ಯೇಕ ವ್ಯಕ್ತಿಗಳು ಅಸ್ತಿತ್ವದಲ್ಲಿ ಏಕೆ ಇರುವರು ಎಂಬುದರ ಬಗ್ಗೆ ಕನಿಷ್ಠ ಮಟ್ಟದ ಭಾವನೆ ಇದ್ದರೆ ಅವನು ಅದು ಕೇವಲ ಅಭೀಪ್ಸೆ ಪಡುವುದಕ್ಕಾಗಿ, ಅಭೀಪ್ಸೆಯ ಅಸ್ತಿತ್ವಕ್ಕಾಗಿ, ಸ್ವ–ಅರ್ಪಣೆಯ ಶರಣಾಗತಿಯ ಈ ಚಲನೆಗಾಗಿ, ವಿಶ್ವಾಸ – ನಂಬಿಕೆಗಳಿಗಾಗಿ ಇದೆ ಎಂಬುದನ್ನು ನೋಡಬಲ್ಲನು. ಮತ್ತು ಈ ಕಾರಣದಿಂದಾಗಿಯೇ ವ್ಯಕ್ತಿಗಳ ನಿರ್ಮಾಣವಾಯಿತು. ನೀವು ಎಲ್ಲ ನಿಷ್ಕಾಪಟ್ಯದಿಂದ ಹಾಗೂ ಗಾಢತೆಯಿಂದ ಅದಾಗಬೇಕಾಗಿದೆ. ಅವಶ್ಯವಾದದ್ದು ಅದಿಷ್ಟೇ. ಇರುವುದು ಅದೊಂದೇ ವಿಷಯ. ಉಳಿದದ್ದೆಲ್ಲ ಬದಲಾಯಿಸುವ ದೃಶ್ಯ.

**(CWM, 11/184–86)** **– ಶ್ರೀಮಾತೆ**

*

**ಅತಿಯಾದವುಗಳ ಇನ್ನೂ ಹೆಚ್ಚು ಅತಿಯಾದವುಗಳಾಗಿವೆ**

ಯಾವುದೇ ಬಗೆಯ ಭೌತಿಕ ಹೊಂದಾಣಿಕೆ ಇರದ, ಆದಾಗ್ಯೂ ಪ್ರಬಲ ಭಾರದ್ದೆನಿಸುವ, ಬಂಗಾರ ವರ್ಣದ ದೈವೀಶಕ್ತಿ ಕೆಳಗೆ ಒತ್ತಡ ಹೇರುತ್ತಿರುವಂತೆ ಕಂಡುಬರುತ್ತದೆ (ಶ್ರೀಮಾತೆಯವರು ಒತ್ತಡದ ಸಂಜ್ಞೆ ಮಾಡುತ್ತಾರೆ) ಎಂದು ನಾನೀಗಾಗಲೆ ಹೇಳಿದ್ದೇನೆ. ಅದು ಭೌತದ್ರವ್ಯದ ಮೇಲೆ ಒತ್ತಡ ಹೇರುತ್ತದೆ ಮತ್ತು ಈ ರೀತಿಯಲ್ಲಿ ಅದು ಆಂತರಿಕವಾಗಿ ಭಗವಂತನತ್ತ ಹೊರಳಲು ಒತ್ತಡ ತರುತ್ತದೆ, ಬಾಹ್ಯದತ್ತ ಪಾರಾಗಿ ಹೋಗುವುದಲ್ಲ (ಬಾಹ್ಯದತ್ತ ಸಂಜ್ಞೆ), ಆದರೆ ಆಂತರಿಕವಾಗಿ ಭಗವಂತನತ್ತ ಹೊರಳುವುದಕ್ಕಾಗಿರುತ್ತದೆ. ಮತ್ತು ಹಾಗಾಗಿ ತೋರಿಬರುವ ಪರಿಣಾಮ ಅನಾಹುತಗಳು ಅನಿವಾರ್ಯವಾಗಿವೆಯೇನೋ ಎಂಬಂತಿರುತ್ತವೆ, ಅಲ್ಲಿ ಅದೇ ಕಾಲಕ್ಕೆ ಆ ಪರಿಸ್ಥಿತಿಗಳಿಗೆ ಪರಿಹಾರಗಳೂ ಇರುತ್ತವೆ, ಸಂಭವಿಸುವ ಘಟನೆಗಳು ತಮ್ಮಲ್ಲಿಯೇ, ಒಟ್ಟಿನಲ್ಲಿ, ಅದ್ಭುತವಾಗಿರುತ್ತವೆ. ಅತಿಯಾಗಿರುವ ಅವೆರಡೂ ಇನ್ನೂ ಹೆಚ್ಚು ಅತಿಯಾಗಿರುವಂತೆ ಆಗುತ್ತಿರುವವೇನೋ ಎನ್ನುವಂತಿರುತ್ತದೆ, ಒಳ್ಳೆಯದಾದದ್ದು ಹೆಚ್ಚು ಒಳ್ಳೆಯದಾದ ಹಾಗೆ, ಕೆಟ್ಟದಾದುದು ಇನ್ನೂ ಹೆಚ್ಚು ಕೆಟ್ಟದಾಗಿರುವ ಹಾಗಿರುತ್ತದೆ. ಅದಿರುವುದು

ಹಾಗೆ. ಪ್ರಬಲ ದೈವೀ ಸಾಮರ್ಥ್ಯ ಜಗತ್ತಿನ ಮೇಲೆ ಒತ್ತಡ ಹೇರುತ್ತಿರುವುದರಿಂದಾಗಿ ಹಾಗಾಗುತ್ತದೆ – ಅದು ನನ್ನ ಭಾವನೆಯಾಗಿತ್ತು.

ಹೌದು, ಅದನ್ನು ಆ ರೀತಿಯಲ್ಲಿ ಭಾವನೆಗೆ ತಂದುಕೊಳ್ಳಲಾಗುತ್ತಿದೆ (ಶ್ರೀಮಾತೆಯವರು ಗಾಳಿಯಲ್ಲಿ ಕೈಯಾಡಿಸುತ್ತಾರೆ) ಮತ್ತು ನಂತರ ಪರಿಸ್ಥಿತಿಗಳಲ್ಲಿ ಉದಾಸೀನ ಭಾವದಿಂದ ಸಂಭವಿಸುವ ಹಲವಾರು ಸಂಗತಿಗಳು ತೀಕ್ಷ್ಣವಾಗುತ್ತವೆ; ದುಷ್ಟ ಸಂಕಲ್ಪಗಳು ತೀಕ್ಷ್ಣವಾಗುತ್ತವೆ ಮತ್ತು ಅದೇ ಕಾಲಕ್ಕೆ, ಅಸಾಧಾರಣ ಪವಾಡಗಳು – ಅಸಾಧಾರಣವಾಗಿರುತ್ತವೆ! ಸಾವನ್ನಪ್ಪಲಿರುವ ಜನರನ್ನು ರಕ್ಷಿಸಲಾಗುತ್ತದೆ. ಬಿಡಿಸಲು ಕಠಿಣವಾದ ವಿಷಯಗಳು ವ್ಯವಸ್ಥಿತ ರೂಪ ತಾಳುತ್ತವೆ.

ಮತ್ತು ನಂತರ ವ್ಯಕ್ತಿಗಳಿಗೂ ಕೂಡ ವಿಷಯ ಅದೇ ಆಗಿರುತ್ತದೆ. ಭಗವಂತನತ್ತ ನಿಷ್ಕಾಪಟ್ಯದಿಂದ ಹೇಗೆ ಹೊರಳಬೇಕು, ಅವನಿಗೆ ಹೇಗೆ ಕರೆ ಕೊಡಬೇಕು ಮತ್ತು ಹಾಗೆ ಹೊರಳುವುದು ಹಾಗೂ ಕರೆಕೊಡುವುದು ಮಾತ್ರ ಮುಕ್ತಿಗಾಗಿ ಇರುವ ಏಕೈಕ ಮಾರ್ಗ ಎಂಬ ಭಾವನೆ ತಂದುಕೊಂಡ ಜನರಿಗೆ (ಶ್ರೀಮಾತೆಯವರು ಆದ್ಯಂತವಾಗಿ ಹೊರಹರಿದು ಬರುತ್ತಿರುವುದರ ಚಿಹ್ನೆ ಮಾಡಿ ತೋರಿಸುತ್ತಾರೆ) ಕೆಲವೇ ನಿಮಿಷಗಳಲ್ಲಿ ಅದು ಅತ್ಯದ್ಭುತವಾಗುತ್ತದೆ. ಅತ್ಯಂತ ಚಿಕ್ಕ ವಿಷಯಗಳಿಗೂ ಕೂಡ – ಅಲ್ಲಿ ಚಿಕ್ಕದು, ದೊಡ್ಡದು ಎಂಬುದಿರುವುದಿಲ್ಲ, ಮಹತ್ವದ್ದು, ಮಹತ್ವವಿಲ್ಲದ್ದು ಎಂಬುದಿರುವುದಿಲ್ಲ – ಅದೆಲ್ಲ ಒಂದೇ ಆಗಿದೆ. ಮೌಲ್ಯಗಳು ಬದಲಾಗುತ್ತವೆ, ಜಗತ್ತನ್ನು ಕುರಿತಾದ ದೃಷ್ಟಿ ಬದಲಾದ ಹಾಗಿರುತ್ತದೆ.

*

**ಮೌಲ್ಯಗಳು ಗಾಢತೆಯನ್ನು ಪಡೆದಿವೆ**

ಅದು ಜಗತ್ತಿನಲ್ಲಿ ಅತಿಮಾನಸದ ಅವರೋಹಣದಿಂದಾದ ಬದಲಾವಣೆ ಕುರಿತು ಒಂದು ವಿಚಾರವನ್ನು ಕೊಡುವ ರೀತಿಯದಾಗಿದೆ. ತಟಸ್ಥವಾಗಿದ್ದ ವಿಷಯಗಳು ಪರಿಪೂರ್ಣವಾಗುತ್ತವೆ: ಚಿಕ್ಕ ದೋಷ ಅದರ ಪರಿಣಾಮಗಳಲ್ಲಿ ಖಂಡತುಂಡದ್ದಾಗುತ್ತದೆ ಮತ್ತು ಅಲ್ಪಮಟ್ಟದ ನಿಷ್ಕಾಪಟ್ಯ, ನಿಜವಾದ ಸ್ವಲ್ಪ ಅಭೀಪ್ಸೆ ಅದರ ಪರಿಣಾಮದಲ್ಲಿ ಪವಾಡ ಸದೃಶವಾಗುತ್ತದೆ. ಜನರಲ್ಲಿ ಮೌಲ್ಯಗಳು ಗಾಢತೆ ಪಡೆದಿವೆ ಮತ್ತು ಪ್ರಾಪಂಚಿಕ ದೃಷ್ಟಿಯಿಂದಲೂ ಕೂಡ ಅತಿ ಚಿಕ್ಕ ದೋಷ, ಅತ್ಯಂತ ಚಿಕ್ಕದಾದುದೂ ಕೂಡ ದೊಡ್ಡ ಪರಿಣಾಮ

ಹೊಂದಿರುತ್ತದೆ ಮತ್ತು ಅಭೀಪ್ಸೆಯಲ್ಲಿ ಕನಿಷ್ಠಮಟ್ಟದ ನಿಷ್ಕಾಪಟ್ಯ ಅದ್ಭುತ ಪರಿಣಾಮಗಳನ್ನು ಹೊಂದಿರುತ್ತದೆ, ಮೌಲ್ಯಗಳು ಗಾಢತೆ ಹೊಂದಿವೆ, ನಿಖರವಾಗಿವೆ, ...

ಜಗತ್ತಿನ ಪ್ರಜ್ಞಾಪೂರ್ಣ ಆರೋಹಣವನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರತಿಯೊಂದನ್ನು ಸಂಕಲ್ಪಿಸಲಾಗಿದೆ ಎನ್ನುವ ರೀತಿಯಲ್ಲಿ ಇಡಿಯಾದುದು ಗ್ರಹಿಕೆಗೆ ಬರುತ್ತದೆ. ಪ್ರಜ್ಞೆ ದೈವಿಕವಾಗಲು ತಯಾರಿ ನಡೆಸಿದೆ. ನಾವು ದೋಷಗಳೆಂದು ಪರಿಗಣಿಸುವವುಗಳೆಲ್ಲ, ಒಟ್ಟಿನಲ್ಲಿ, ಸರ್ವಸಾಧಾರಣ ಮಾನವ ಕಲ್ಪನೆಗಳ ಭಾಗಗಳಾಗಿವೆ.

ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ. ಹೆಚ್ಚು ಒಳ್ಳೆಯ ಶಬ್ದದ ಅಭಾವದಿಂದಾಗಿ ಅತಿಮಾನಸ ಎಂದು ನಾವು ಕರೆದ ಶಬ್ದ, ಉಚ್ಚತರ ಸಾಮರ್ಥ್ಯಕ್ಕೆ ಸೃಷ್ಟಿಯನ್ನು ಹೆಚ್ಚು ಸೂಕ್ಷ್ಮ ಸಂವೇದನೆಯುಳ್ಳದ್ದನ್ನಾಗಿ ಮಾಡುತ್ತದೆ ಎಂಬುದನ್ನು ನಾನು ನೋಡಿದ್ದೇನೆ, ಅವಲೋಕಿಸಿದ್ದೇನೆ.

ನಮ್ಮ ಎಲ್ಲ ಸಾಮಾನ್ಯ ಜ್ಞಾನ, ಎಲ್ಲ ತರ್ಕಮಾಡುವಿಕೆ, ನಮ್ಮ ಎಲ್ಲ ಪ್ರಾಯೋಗಿಕ ಬುದ್ಧಿ ಇವೆಲ್ಲವುಗಳನ್ನು ನೆಲಕ್ಕೆ ತುಳಿದು ಹಾಕಲಾಗುತ್ತದೆ! ಅದಕ್ಕೆ ಇನ್ನು ಮುಂದೆ ಯಾವ ಶಕ್ತಿಯೂ ಇರುವುದಿಲ್ಲ, ಈಗ ಇರುವುದಕ್ಕೆ ಅದು ಇನ್ನು ಮುಂದೆ ಅನುಗುಣವಾಗಿರುವುದಿಲ್ಲ. ಅದು ನಿಜವಾಗಿ ಹೊಸ ಜಗತ್ತು.

**– ಶ್ರೀಮಾತೆ**

*

**ಪ್ರಶ್ನೆ :** *1919 ರಲ್ಲಿ ಶ್ರೀ ಅರವಿಂದರು ಬರೆದಿದ್ದು ಹೀಗಿದೆ:* "ಎಲ್ಲ ಅವ್ಯವಸ್ಥೆಗಳು *ಮತ್ತು ಅನಾಹುತಗಳು ಬಹುಶಃ ಹೊಸ ಸೃಷ್ಟಿ ಜನ್ಮತಾಳುವಾಗ ಅನುಭವಿಸಬೇಕಾದ ನೋವುಗಳಾಗಿರಬಹುದು."* ಇದು ಎಷ್ಟು ಕಾಲದವರೆಗೆ *ಮುಂದುವರಿದುಕೊಂಡು ಹೋಗುತ್ತದೆ? ಆಶ್ರಮದಲ್ಲಿ, ಭಾರತದಲ್ಲಿ ಮತ್ತು ಕ್ರಮೇಣ ಜಗತ್ತಿನಲ್ಲಿ ಎಷ್ಟು ಕಾಲದವರೆಗೆ ಹೀಗಿರುತ್ತದೆ?*

**ಶ್ರೀಮಾತೆ :** ಜಗತ್ತು ಹೊಸ ಸೃಷ್ಟಿಯನ್ನು ಸ್ವೀಕರಿಸಲು ತಯಾರಾಗುವವರೆಗೆ, ಸಮ್ಮತಿಸುವವರೆಗೆ ಅದು ಮುಂದುವರಿದುಕೊಂಡು ಹೋಗುತ್ತದೆ; ಈ ಹೊಸ ಸೃಷ್ಟಿಯ ಪ್ರಜ್ಞೆ ಈಗಾಗಲೆ ಪೃಥ್ವಿಯ ಮೇಲೆ ಈ ವರ್ಷದ ಪ್ರಾರಂಭದಿಂದ ಕಾರ್ಯನಿರತವಾಗಿದೆ. ಜನರು ಪ್ರತಿರೋಧ ಒಡ್ಡುವುದರ ಬದಲಾಗಿ ಸಹಕಾರ

ನೀಡುತ್ತಿದ್ದರೆ ಅದು ತೀವ್ರಗತಿಯದಾಗುವುದು. ಆದರೆ ಹೆಡ್ಡತನ ಹಾಗೂ ಅಜ್ಞಾನ ಬಹಳ ಹಟಮಾರಿಯಾಗಿವೆ.

**(CWM, 15/106)** **– ಶ್ರೀಮಾತೆ**

*

## ಹೊಸ ಜಗತ್ತಿನ ಬೀಜಗಳು

### ಆಧ್ಯಾತ್ಮೀಕರಣಗೊಂಡ ಸಮಾಜದ ಗುರಿಗಳು ಹಾಗೂ ಧ್ಯೇಯ

ಆಧ್ಯಾತ್ಮೀಕರಣಗೊಂಡ ಸಮಾಜ, ಅದರ ಆಧ್ಯಾತ್ಮೀಕರಣಗೊಂಡ ವ್ಯಕ್ತಿಗಳ ಮನೋಭಾವದಲ್ಲಿ ಜೀವಿಸುತ್ತದೆ, ಅಹಂಕಾರದಲ್ಲಲ್ಲ, ಸಾಮೂಹಿಕ ಅಹಂಕಾರದಲ್ಲಲ್ಲ, ಆದರೆ ಸಾಮೂಹಿಕ ಆತ್ಮವೆಂದಾಗಿ ಜೀವಿಸುತ್ತದೆ. ಅಹಂಕಾರದ ದೃಷ್ಟಿಕೋನದಿಂದ ಈ ಸ್ವಾತಂತ್ರ್ಯ ಆ ಸಮಾಜದ ಮೊದಲ ಮತ್ತು ಬಹಳ ಪ್ರಧಾನವಾದ ಗುಣಲಕ್ಷಣವಾಗಿರುತ್ತದೆ. ಈಗ ಪ್ರತಿಪಾದಿಸಿದ ರೀತಿಯಲ್ಲಿ ವ್ಯಕ್ತಿಯ ಮನವೊಲಿಸುವುದರ ಮೂಲಕ, ಇಲ್ಲವೆ ಬಲವಂತಪಡಿಸುವುದರ ಮೂಲಕ ಅವನ ವೈಯಕ್ತಿಕ ಸಂಕಲ್ಪ ಹಾಗೂ ಅಭೀಪ್ಸೆಗಳನ್ನು ಮತ್ತು ಅವನ ಬಹು ಮೌಲ್ಯವುಳ್ಳ, ಕಷ್ಟಪಟ್ಟು ಗಳಿಸಿದ ವ್ಯಕ್ತಿತ್ವವನ್ನು ಸಮಾಜದ ಸಾಮೂಹಿಕ ಸಂಕಲ್ಪ, ಗುರಿಗಳು ಹಾಗೂ ಅಹಂಮನ್ಯತೆ ಇವುಗಳಿಗೆ ಬಲಿಕೊಡುವುದರ ಮೂಲಕ ಅಹಂಮನ್ಯತೆಯ ನಿರ್ಮೂಲನ ಆಗುವಂತೆ ಮಾಡಲಾಗುವುದಿಲ್ಲ. ಅದು ಪ್ರಾಚೀನ ಕಾಲದ ಯಜ್ಞಾಹುತಿಗಾಗಿ ಅವನನ್ನು ಭವ್ಯ ಹಾಗೂ ಆಕಾರರಹಿತ ಮೂರ್ತಿಯ ವೇದಿಕೆಯ ಮೇಲೆ ಬಲಿಪಶುವಿನಂತೆ ಎಳೆದೊಯ್ದು ಅವನ ಆತ್ಮವನ್ನು ಹತಮಾಡಿದ ಹಾಗಾಗುತ್ತದೆ. ಏಕೆಂದರೆ ಅದು ಭವ್ಯ ಅಹಂಮನ್ಯತೆಗೆ ಚಿಕ್ಕದಾದುದರ ಅಹಂಮನ್ಯತೆಯನ್ನು ಯಜ್ಞಾಹುತಿ ಮಾಡಿದ ಹಾಗಾಗುತ್ತದೆ, ಅದು ಗಾತ್ರದಲ್ಲಿ ದೊಡ್ಡದು, ಅವಶ್ಯವಾಗಿ ಗುಣಮಟ್ಟದಲ್ಲಿ ಶ್ರೇಷ್ಠವಾದದ್ದಲ್ಲ ವಿಸ್ತಾರವಾದದ್ದಲ್ಲ ಉದಾರವಾದದ್ದಲ್ಲ, ಏಕತ್ರಗೊಂಡ ಎಲ್ಲರ ಅಹಂಮನ್ಯತೆಗಳ ಪರಿಣಾಮ ಪೂಜಾರ್ಹವಾದ ಅತಿ ಚಿಕ್ಕ ದೇವತೆಯಾಗಿರುತ್ತದೆ, ಅದು ವೈಯಕ್ತಿಕ ಅಹಂಮನ್ಯತೆ ಇರುವಷ್ಟೇ ಕಳಂಕಿತವಾದದ್ದು ಮತ್ತು ಬಹಳಷ್ಟು ಸಲ ಹೆಚ್ಚು ಕುರೂಪವಾದದ್ದು ಮತ್ತು ಹೆಚ್ಚು ಅನಾಗರಿಕ ಅಂಧಶ್ರದ್ಧೆಯಿಟ್ಟು ನಂಬಿದ ತತ್ವ ಆಗಿರುತ್ತದೆ. ಆಧ್ಯಾತ್ಮಿಕ ಮನುಷ್ಯ ತನ್ನ ಅಹಂಕಾರವನ್ನು ಕಳೆದುಕೊಂಡು ಎಲ್ಲರಲ್ಲಿ ಏಕವಾಗಿರುವ ಮತ್ತು ಪ್ರತಿಯೊಬ್ಬನಲ್ಲಿ ಪರಿಪೂರ್ಣ ಹಾಗೂ ಸಂಪೂರ್ಣ–ವಾಗಿರುವ ಆತ್ಮವನ್ನು ಅರಸುತ್ತಾನೆ ಮತ್ತು ಅದರಲ್ಲಿ ಜೀವಿಸುವುದರ ಮೂಲಕ

ಅದರ ಪರಿಪೂರ್ಣತೆಯ ಪ್ರತೀಕದಲ್ಲಿ ಬೆಳೆಯುವುದನ್ನು ಅರಸುತ್ತಾನೆ – ಎಲ್ಲವನ್ನೂ ಅಪ್ಪಿಕೊಳ್ಳುವ ಅವನ ಸ್ವಭಾವದ ವಿಶ್ವಂಭರತೆ ಮತ್ತು ಅದರ ಪ್ರಜ್ಞಾಪೂರ್ಣ ಪರಿಧಿ ಇದ್ದಾಗಲೂ ಅದು ವೈಯಕ್ತಿಕವಾಗಿ ಎಂಬುದನ್ನು ಗಮನಿಸಬೇಕು.

*

ಅದು ತನ್ನ ವ್ಯಾಪ್ತಿಯಲ್ಲಿ ಎಲ್ಲ ಜ್ಞಾನವನ್ನು ಅಪ್ಪಿಕೊಳ್ಳುತ್ತದೆ, ಆದರೆ ಇಡೀ ಪ್ರವೃತ್ತಿಯನ್ನು, ಗುರಿಯನ್ನು ಮತ್ತು ಆವರಿಸಿಕೊಂಡ ಆತ್ಮವನ್ನು ಪ್ರಾಪಂಚಿಕ–ವಾದದ್ದನ್ನಾಗಿ ಮಾಡುವ ದಕ್ಷತೆಯಷ್ಟೇ ಅಲ್ಲ, ಅದನ್ನು ಅಲಕ್ಷಿಸಲಾಗದು, ಆದರೆ ಅದು ಈ ಸ್ವ–ಅಭಿವೃದ್ಧಿಗೊಳಿಸಿಕೊಳ್ಳುವ, ಸ್ವ–ಸಂಶೋಧನೆ ಮಾಡುವ ಮತ್ತು ಉಳಿದೆಲ್ಲವನ್ನು ಅದರ ಸಾಮರ್ಥ್ಯಗಳನ್ನಾಗಿ ಮಾಡುವ ದಕ್ಷತೆಯಾಗಿರುತ್ತದೆ. ಅದು ಭೌತಿಕ ಹಾಗೂ ಚೈತ್ಯಾತ್ಮಿಕ ವಿಜ್ಞಾನಗಳನ್ನು ಬೆಂಬತ್ತುವುದು, ಅದು ಕೇವಲ ಜಗತ್ತನ್ನು, ತನ್ನ ವಿಧಾನಗಳಲ್ಲಿರುವ ಪ್ರಕೃತಿಯನ್ನು ತಿಳಿದುಕೊಳ್ಳುವುದಕ್ಕಾಗಿ ಮತ್ತು ಅವುಗಳನ್ನು ಪ್ರಾಪಂಚಿಕ ಮಾನವ ಉದ್ದೇಶಗಳಿಗಾಗಿ ಉಪಯೋಗಿಸುವುದಕ್ಕಷ್ಟೇ ಇರುವುದಿಲ್ಲ, ಅದಕ್ಕಿಂತಲೂ ಹೆಚ್ಚಾಗಿ ಎಲ್ಲ ವಸ್ತು–ವಿಷಯಗಳ ಮೂಲಕ, ಅವುಗಳಲ್ಲಿ, ಅವುಗಳಡಿಯಲ್ಲಿ ಜಗತ್ತಿನಲ್ಲಿರುವ ಭಗವಂತನನ್ನು, ಆತ್ಮದ ಮುಖವಾಡಗಳು ಹಾಗೂ ಮುಖವಾಡಗಳ ಹಿಂದಿರುವವುಗಳು ಇವುಗಳ ರೀತಿಯನ್ನು ತಿಳಿದುಕೊಳ್ಳುವುದಿರುತ್ತದೆ. ಅದು ತನ್ನನ್ನು ನೈತಿಕತೆಯ ಗುರಿಯನ್ನಾಗಿ ಮಾಡುವುದು, ಆದರೆ ಆ ಗುರಿ ಸಾಮಾಜಿಕ ನಿಯಮಕ್ಕೆ ಪೂರಕವಾಗುವ ರೀತಿಯಲ್ಲಾಗಲಿ, ಭಾಗಶಃ ಸರಿಪಡಿಸುವುದಕ್ಕಾಗಲಿ ಕ್ರಿಯೆಯ ನಿಯಮವನ್ನು ಸ್ಥಾಪಿಸುವುದಕ್ಕಾಗಿ ಇರುವುದಿಲ್ಲ. ಸಾಮಾಜಿಕ ನಿಯಮ, ಒಟ್ಟಿನಲ್ಲಿ, ಕೇವಲ ನಿಯಮವಾಗಿರುತ್ತದೆ, ಬಹಳಷ್ಟು ಸಲ ಆ ನಿಯಮ ದ್ವಿಪಾದಿಗಳ ತಂಡ, ಮಾನವ ಹಿಂಡು ಇವುಗಳ ಅಂದಗೆಟ್ಟ ಮತ್ತು ಅಜ್ಞಾನದ ರೀತಿಯದಾಗಿರುತ್ತದೆ, ಆದರೆ ಆ ಗುರಿ ಮಾನವ ಸತ್ತೆಯಲ್ಲಿ ದೈವೀ ಸ್ವಭಾವವನ್ನು ಅಭಿವೃದ್ಧಿಪಡಿಸುವು–ದಕ್ಕಾಗಿರುತ್ತದೆ. ಅದು ಕಲೆಯ ಗುರಿಯನ್ನು ಕೇವಲ ಜಗತ್ತಿನ ವಸ್ತುನಿಷ್ಠ, ವ್ಯಕ್ತಿನಿಷ್ಠ ಪ್ರತೀಕಗಳನ್ನು ಮುಂದಿರಿಸುವುದಕ್ಕಾಗಿಯಷ್ಟೇ ಅಲ್ಲ, ಆದರೆ ಅವುಗಳನ್ನು ಪ್ರಾಮುಖ್ಯತೆಯಿರುವ ಮತ್ತು ಸೃಜನಾತ್ಮಕವಾದ ದೃಷ್ಟಿಯಿಂದ ನೋಡುವಂತೆ ಮಾಡಬೇಕಾಗುತ್ತದೆ, ಆ ದೃಷ್ಟಿ ತೋರಿಕೆಗಳ ಹಿಂದೆ ಹೋಗುತ್ತದೆ ಮತ್ತು ವಿಷಯಗಳ ದೈವೀ ಸತ್ಯವನ್ನು ಸೌಂದರ್ಯವನ್ನು ನೋಡುತ್ತದೆ. ನಮಗೆ ಗೋಚರವಾಗುವ ಮತ್ತು ಗೋಚರವಾಗದೆ ಇರುವ ವಸ್ತು–ವಿಷಯಗಳು ಆ

ಸತ್ಯದ ಹಾಗೂ ಸೌಂದರ್ಯದ ರೂಪಗಳಾಗಿರುತ್ತವೆ, ಮುಖವಾಡಗಳು ಇಲ್ಲವೆ ಸಂಕೇತಗಳು ಮತ್ತು ಪ್ರಾಮುಖ್ಯತೆಯುಳ್ಳ ಆಕಾರಗಳಾಗಿರುತ್ತವೆ.

*

## ಹೊಸ ಸಮಾಜ ಶಾಸ್ತ್ರ: ಸಮಾನತೆಯ ಆಧಾರ

ಆಧ್ಯಾತ್ಮೀಕರಣಗೊಂಡ ಸಮಾಜ ತನ್ನ ಸಮಾಜ ಶಾಸ್ತ್ರದಲ್ಲಿ ಸಂತನಿಂದ ಹಿಡಿದು ಅಪರಾಧಿಯವರೆಗಿನ ವ್ಯಕ್ತಿಗಳನ್ನು ಸಾಮಾಜಿಕ ಸಮಸ್ಯೆಯ ಘಟಕ(unit)ಗಳೆಂದು ನಡೆಸಿಕೊಳ್ಳಬೇಕಾದುದು ಹೀಗಿದೆ: ಅವರನ್ನು ಕೌಶಲದಿಂದ ರೂಪಿಸಿದ ಯಂತ್ರದ ಮೂಲಕ ಸಾಗಿ ಹೋಗುವಂತೆ ಮಾಡುವುದಲ್ಲ, ಮತ್ತು ಸಾಮಾಜಿಕ ಎರಕದಲ್ಲಿ ಚಪ್ಪಟೆಯಾಗುವಂತೆ ಮಾಡುವುದಾಗಲಿ ಇಲ್ಲವೆ ಅದರಿಂದ ಜಜ್ಜಿ ಹೊರಗೆ ಹಾಕುವುದಾಗಲಿ ಅಲ್ಲ, ಆದರೆ ವೇದನೆಯಿಂದ, ತೊಡಕಿ ಹಾಕಿಕೊಂಡ ಬಲೆಯಿಂದ ಪಾರುಮಾಡಬೇಕಾದ ಆತ್ಮಗಳೆಂದು, ಬೆಳೆಯುತ್ತಿರುವ, ಬೆಳವಣಿಗೆಗೆ ಪ್ರೋತ್ಸಾಹದ ಆವಶ್ಯಕತೆ ಇರುವ ಆತ್ಮಗಳೆಂದು, ಇನ್ನೂ ಯೌವನವನ್ನು ತಲುಪಿರದ ಕೆಳಸ್ತರದ ಆತ್ಮಗಳು ಎಳೆದುಕೊಳ್ಳಬಹುದಾದ ಸಾಮರ್ಥ್ಯವನ್ನು ಹೊಂದಿರುವ ಆತ್ಮಗಳೆಂದು ಭಾವಿಸಿ ಅವುಗಳೊಡನೆ ನಡೆದುಕೊಳ್ಳುವುದಾಗಿದೆ. ಅದರ ಆರ್ಥಿಕಸ್ಥಿತಿಯ ಗುರಿ ಉತ್ಪಾದನೆಯ ಭವ್ಯ ಯಂತ್ರಸಾಧನ(engine)ವನ್ನು ಸೃಷ್ಟಿಸುವುದಲ್ಲ, ಅದು ಸ್ಪರ್ಧಾತ್ಮಕ ರೀತಿಯದಾಗಿರಬಹುದು ಇಲ್ಲವೆ ಸಹಕಾರೀ ರೂಪದ್ದಾಗಿರಬಹುದು, ಆದರೆ ಜನರಿಗೆ ಕಾರ್ಯದ ಸಂತೋಷವನ್ನು ಕೊಡುವುದಕ್ಕಾಗಿ – ಕೆಲವರಿಗೆ ಅಷ್ಟೇ ಅಲ್ಲ, ಪ್ರತಿಯೊಬ್ಬನಿಗೂ ಅವನಿಗೆ ಸಾಧ್ಯವಿರುವ ಅತ್ಯುಚ್ಚ ಪ್ರಮಾಣದಲ್ಲಿ – ಆ ಸಂತೋಷ ಅವರ ಸ್ವಭಾವಕ್ಕನುಗುಣವಾಗಿ ಹಾಗೂ ಆಂತರಿಕವಾಗಿ ಬೆಳೆಯಲು ಅವರಿಗೆ ದೊರಕುವ ಮುಕ್ತ ವಿರಾಮ ಕಾಲಕ್ಕೆ ಅನುಗುಣವಾಗಿರುತ್ತದೆ, ಹಾಗೆಯೇ ಎಲ್ಲರಿಗೂ ಸರಳ, ಶ್ರೀಮಂತ ಹಾಗೂ ಸುಂದರ ಜೀವನ ಕೊಡುವುದಾಗಿರುತ್ತದೆ. ರಾಜಕೀಯದಲ್ಲಿ ಅದನ್ನು ಗಣನೆಗೆ ತೆಗೆದುಕೊಳ್ಳದೆ ಇರುವ ರಾಷ್ಟ್ರಗಳ ಸ್ವರೂಪ ಹೀಗಿದೆ: ತಮ್ಮದೇ ಆಂತರಿಕ ಜೀವನದ ವ್ಯಾಪ್ತಿಯಲ್ಲಿ ಭವ್ಯ ರಾಷ್ಟ್ರ ಯಂತ್ರಗಳಂತಿರುವ, ಆ ಯಂತ್ರದ ಸಲುವಾಗಿ ಜೀವಿಸುವ ಮತ್ತು ಅದನ್ನು ದೇವನೆಂದು, ತನ್ನ ಹೆಚ್ಚು ಭವ್ಯವಾದ ಆತ್ಮವೆಂದು ಪೂಜಿಸುವ ಮನುಷ್ಯನೊಡನೆ ವಿಧಿಬದ್ಧಗೊಳಿಸಿರುವ, ಹಾಗೂ ಶಸ್ತ್ರಸಜ್ಜಿತವಾಗಿರುವ, ಮೊದಲನೆಯ ಕರೆಗೆ ಓಗೊಟ್ಟು ಇತರರನ್ನು ಆ ವೇದಿಕೆಯ ಮೇಲೆ ಕೊಲ್ಲುವುದರಲ್ಲಿ ತೃಪ್ತಿ

ಕಂಡುಕೊಳ್ಳುವ, ಅಲ್ಲಿ ತನ್ನದೇ ರಕ್ತ ಹರಿಸುವ ಮನುಷ್ಯ ಇರುವುದರಿಂದಾಗಿ ಅಂತಹ ದೇಶ ಚಾಕಚಕ್ಯತೆಯಿಂದ ಮತ್ತು ಸಾಮರ್ಥ್ಯಪೂರ್ಣವಾಗಿ ಉಳಿದುಕೊಳ್ಳುವಂತಾಗುತ್ತದೆ ಮತ್ತು ಅದು ಎಂದೆಂದಿಗೂ ಭವ್ಯವಾದದ್ದು, ಹೆಚ್ಚು ಸಂಕೀರ್ಣವಾದದ್ದು, ಹೆಚ್ಚು ತೊಡಕಿನದು, ಹೆಚ್ಚು ಯಾಂತ್ರಿಕವಾಗಿ ಪರಿಣಾಮಕಾರಿ ಹಾಗೂ ಇಡಿಯಾಗಿ ಉಳಿದುಕೊಳ್ಳುವಂತಾಗುತ್ತದೆ. ಈ ದೇಶಗಳು ಇಲ್ಲವೆ ರಾಷ್ಟ್ರಗಳು ಅವುಗಳ ಪರಸ್ಪರ ಸಂಬಂಧದಲ್ಲಿ ಶಾಂತಿಯ ಸಮಯವಿದ್ದಾಗ ಒಂದು ಇನ್ನೊಂದರ ಮೇಲೆ ವಿಷಕಾರಿ ವಾಯುವನ್ನು ಹೊರಹಾಕುತ್ತಿರುತ್ತವೆ, ಪರಸ್ಪರರಲ್ಲಿ ಸಂಘರ್ಷ ಉಂಟಾದಾಗ ಒಂದು ಇನ್ನೊಂದರ ಶಸ್ತ್ರಸಜ್ಜಿತ ಸೈನ್ಯದ ಮೇಲೆ, ಲಕ್ಷಾನುಗಟ್ಟಲೆ ಶಸ್ತ್ರರಹಿತರಾದವರ ಮೇಲೆ ಗುಂಡುಗಳನ್ನು ಕಾರುವ, ಆಧುನಿಕ ರಣಾಂಗಣದಲ್ಲಿ ಯುದ್ಧ ವಿಮಾನಗಳು, ವಿರೋಧೀ ಟ್ಯಾಂಕುಗಳು ಕೊಲ್ಲುವ ಹಾಗೆ ಕೊಲ್ಲಲು ಮಣಿಹಕ್ಕೊಳಗಾದ ಜನರಿರುತ್ತಾರೆ, ಇಂತಹದರಿಂದ ಆ ರಾಜಕೀಯಕ್ಕೆ ತೃಪ್ತಿಯಾಗುವುದಿಲ್ಲ. ಹೊಸ ರಾಜಕೀಯದಲ್ಲಿ ಜನರನ್ನು ಗುಂಪಿನಲ್ಲಿರುವ ಆತ್ಮಗಳೆಂದು ಪರಿಗಣಿಸಲಾಗುತ್ತದೆ. ಅವುಗಳಲ್ಲಿ ದೈವಿಕತೆ ಮುಚ್ಚಿಹಾಕಿಕೊಂಡಿರುತ್ತದೆ ಮತ್ತು ಅದನ್ನು ಸಾಮುದಾಯಿಕ ಗುಣದಲ್ಲಿ ಸ್ವ–ಸಂಶೋಧನೆ ಮಾಡಬೇಕಾಗುತ್ತದೆ, ವ್ಯಕ್ತಿಗಳ ಹಾಗೆ ಗುಂಪಿನಲ್ಲಿರುವ ಆತ್ಮಗಳು ತಮ್ಮದೇ ಸ್ವಭಾವದ ಪ್ರಕಾರ ಬೆಳೆಯಬೇಕಾಗಿರುತ್ತದೆ ಮತ್ತು ಆ ಬೆಳವಣಿಗೆಯ ಮೂಲಕ ಪರಸ್ಪರರಿಗೆ ಸಹಾಯ ಮಾಡುವುದಿರುತ್ತದೆ, ಮನುಕುಲದ ಸಾಮಾನ್ಯ ಕಾರ್ಯದಲ್ಲಿ ಇಡೀ ಕುಲಕ್ಕೆ ಸಹಾಯ ಮಾಡುವುದಿರುತ್ತದೆ. ಮತ್ತು ಆ ಕಾರ್ಯ ದಿವ್ಯಾತ್ಮನನ್ನು ವ್ಯಕ್ತಿಯಲ್ಲಿ, ಸಾಮುದಾಯಿಕ ಗುಣದಲ್ಲಿ ಕಂಡು–ಕೊಳ್ಳುವುದಿರುತ್ತದೆ ಮತ್ತು ಆಧ್ಯಾತ್ಮಿಕವಾಗಿ ಮಾನಸಿಕವಾಗಿ, ಪ್ರಾಣಿಕವಾಗಿ, ಭೌತಿಕವಾಗಿ ಅದರ ಅತಿ ಶ್ರೇಷ್ಠ, ಅತಿ ಭವ್ಯವಾದ, ಅತಿ ಶ್ರೀಮಂತವಾದ ಹಾಗೂ ಆಳಾತಿ ಆಳದ ಸಾಧ್ಯತೆಗಳನ್ನು ಎಲ್ಲರ ಆಂತರಿಕ ಜೀವನದಲ್ಲಿ ಮತ್ತು ಅವರ ಬಾಹ್ಯ ಕ್ರಿಯೆ ಹಾಗೂ ಸ್ವಭಾವಗಳಲ್ಲಿ ಸಿದ್ಧಿಸಿಕೊಳ್ಳುವುದಿರುತ್ತದೆ.

*

**ಬೆಳೆಯುತ್ತಿರುವ ಆಂತರಿಕ ಸ್ವಾತಂತ್ರ್ಯದ ನಿಯಮ**

ಆದ್ದರಿಂದ ಬೆಳೆಯುತ್ತಿರುವ ಆಂತರಿಕ ಸ್ವಾತಂತ್ರ್ಯದ ನಿಯಮ ಮನುಕುಲದ ಆಧ್ಯಾತ್ಮಿಕ ಯುಗದಲ್ಲಿ ಅತ್ಯಂತ ಹೆಚ್ಚಿನ ಮರ್ಯಾದೆ ಪಡೆಯುವ ವಿಷಯವಾಗಿದೆ. ಎಲ್ಲಿಯವರೆಗೆ ಮನುಷ್ಯ ಸ್ವ–ಜ್ಞಾನದತ್ತ ಅಳತೆ ಮಾಡಬಹುದಾದಷ್ಟು ದೂರ

ಬಂದಿರದೆ ಇದ್ದಾಗ ಮತ್ತು ಅದರೆಡೆ ಮುಖ ತಿರುಗಿಸದೇ ಇದ್ದಾಗ ಅವನು ಬಾಹ್ಯ ಒತ್ತಡದ ನಿಯಮದಿಂದ ತಪ್ಪಿಸಿಕೊಳ್ಳಲಾರ ಮತ್ತು ತಪ್ಪಿಸಿಕೊಳ್ಳಲು ಕೈಕೊಳ್ಳುವ ಎಲ್ಲ ಪ್ರಯತ್ನಗಳು ವ್ಯರ್ಥವಾಗಲೇಬೇಕು. ಅದು ಉಳಿದು–ಕೊಂಡಿರುವವರೆಗೆ ಅವನು ಇತರರ ಗುಲಾಮ, ತನ್ನ ಕುಟುಂಬದ ಗುಲಾಮ, ಅವನ ಜಾತಿಯ ಗುಲಾಮ, ಅವನ ಪಂಗಡದ ಗುಲಾಮ, ಅವನ ಚರ್ಚಿನ ಗುಲಾಮ, ಅವನ ಸಮಾಜ, ದೇಶಗಳ ಗುಲಾಮ ಆಗಿರುತ್ತಾನೆ ಮತ್ತು ಆಗಿರಲೇಬೇಕು, ಅವನು ಅದಾಗದೆ ಬೇರೇನೂ ಆಗಲಾರ ಮತ್ತು ಅವುಗಳೂ ಕೂಡ ತಮ್ಮ ಒರಟಾದ ಮತ್ತು ಯಾಂತ್ರಿಕವಾದ ಒತ್ತಡವನ್ನು ಅವನ ಮೇಲೆ ಚೆಲ್ಲಿಕೊಡದೆ ಇರಲಾರವು, ಏಕೆಂದರೆ ಅವನು ಹಾಗೂ ಅವರು ತಮ್ಮದೇ ಅಹಂಕಾರದ ಗುಲಾಮರಾಗಿರುತ್ತಾರೆ, ತಮ್ಮದೇ ಸ್ವಭಾವದ ಗುಲಾಮರಾಗಿರುತ್ತಾರೆ. ಬೇರೆ ಒತ್ತಡದಿಂದ ತಪ್ಪಿಸಿಕೊಳ್ಳಲು ಆಂತರಿಕ ಹಕ್ಕನ್ನು ಸ್ಥಾಪಿಸಬೇಕಾದಾಗ ನಾವು ದಿವ್ಯಾತ್ಮದ ಒತ್ತಡವನ್ನು ಭಾವನೆಗೆ ತಂದುಕೊಳ್ಳಬೇಕು ಹಾಗೂ ಅದಕ್ಕೆ ವಿಧೇಯರಾಗಿರಬೇಕು, ನಮ್ಮ ನಿಮ್ನತರ ಸ್ವಭಾವ ಇಷ್ಟವುಳ್ಳ ಗುಲಾಮನಾಗಬೇಕು ಮತ್ತು ಜ್ಞಾನೋದಯ ಪಡೆದ ಉಪಕರಣ ಇಲ್ಲವೆ ಉದಾತ್ತಗೊಂಡ, ಆದರೆ ಸ್ವ–ಸ್ವಾಧೀನದಲ್ಲಿರುವ ಭಾಗವಾಗಿರಬೇಕು, ನಮ್ಮೊಳಗಿರುವ ಭಗವಂತನ ವಧು ಇಲ್ಲವೆ ಜೊತೆಗಾರನಾಗಬೇಕು, ಏಕೆಂದರೆ ಆ ಅಧೀನತೆಯೆ ನಮ್ಮ ಸ್ವಾತಂತ್ರ್ಯಕ್ಕಾಗಿರುವ ಷರತ್ತಾಗಿದೆ, ಏಕೆಂದರೆ ಆಧ್ಯಾತ್ಮಿಕ ಸ್ವಾತಂತ್ರ್ಯ ನಮ್ಮ ಪ್ರತ್ಯೇಕ ಮನಸ್ಸು ಹಾಗೂ ಪ್ರಾಣಗಳ ಅಹಂಮನ್ಯತೆಯ ದೃಢೀಕರಣವಲ್ಲ, ಆದರೆ ನಮ್ಮೊಳಗಿರುವ, ನಮ್ಮ ಅಂಗಗಳಲ್ಲಿರುವ ಹಾಗೂ ನಮ್ಮ ಸುತ್ತಲಿರುವ ದೈವೀ ಸತ್ಯಕ್ಕೆ ವಿಧೇಯರಾಗಿರುವುದಾಗಿದೆ. ಅದು ಹಾಗಿದ್ದಾಗಲೂ ನಾವು ಗಮನಿಸ–ಬೇಕಾದುದೆಂದರೆ ಭಗವಂತ ನಮ್ಮ ಸ್ವಾಭಾವಿಕ ಅಂಗಗಳನ್ನು ಗೌರವಿಸುತ್ತಾನೆ ಮತ್ತು ಅವು ತಮ್ಮದೇ ಸ್ವಭಾವದಲ್ಲಿ ಬೆಳೆಯಲು ಸ್ಥಾನ ಮಾಡಿಕೊಡುತ್ತಾನೆ, ಅದರಿಂದಾಗಿ ಅವು ಅಳಿದು ಹೋಗದೆ, ಸ್ವಾಭಾವಿಕ ಬೆಳವಣಿಗೆಯಿಂದಾಗಿ ತಮ್ಮಲ್ಲಿ ಭಗವಂತನನ್ನು ಕಂಡುಕೊಳ್ಳುವಂತಾಗುತ್ತದೆ. ಅವು ಕೊನೆಗೆ ಒಪ್ಪಿಕೊಳ್ಳುವ ಸಂಪೂರ್ಣ ಹಾಗೂ ಪರಿಪೂರ್ಣ ಅಧೀನತೆಯು, ತಮ್ಮದೇ ಪ್ರಕಾಶ ಹಾಗೂ ಸಾಮರ್ಥ್ಯಗಳ ಮೂಲ ಮತ್ತು ತಮ್ಮ ಅತ್ಯುಚ್ಚ ಸತ್ತೆ ಇವುಗಳನ್ನು ಗುರುತಿಸುವುದರ, ಇವುಗಳಿಗಾಗಿ ಅಭೀಪ್ಸೆ ಪಡುವುದರ ಮೂಲಕ ಮಾಡಿಕೊಂಡ ಇಷ್ಟಪಡುವ ಅಧೀನತೆಯಾಗಿರಬೇಕು. ಆದ್ದರಿಂದ ಪುನರುಜ್ಜೀವನ ಹೊಂದದೆ ಇರುವ ಸ್ಥಿತಿಯಲ್ಲಿಯೂ ಕೂಡ ಅತ್ಯಂತ ಹೆಚ್ಚಿನ ರೀತಿಯಲ್ಲಿ ಆರೋಗ್ಯದಿಂದಿರುವ,

ಸತ್ಯವಾಗಿರುವ, ಜೀವಂತವಾಗಿರುವ ಬೆಳವಣಿಗೆ ಮತ್ತು ಕ್ರಿಯೆ ಇವು ಸಾಧ್ಯವಿದ್ದಷ್ಟು ಭವ್ಯವಾಗಿರುವ ಸ್ವಾತಂತ್ರ್ಯದಿಂದ ಮೇಲೆದ್ದು ಬರುತ್ತವೆ ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ, ಎಲ್ಲ ಮಿತಿಮೀರಿದ ಒತ್ತಾಯ ಕ್ರಮೇಣ ಉಂಟಾಗುವ ಕ್ಷೀಣತೆಯ ನಿಯಮವಾಗಿರುತ್ತದೆ ಇಲ್ಲವೆ ವೈವಿಧ್ಯಮಯ ದಬ್ಬಾಳಿಕೆಯ ಸ್ಫೋಟದಿಂದಾಗಿರುತ್ತದೆ ಇಲ್ಲವೆ ಉಗ್ರಕೋಪದಿಂದ ಉಂಟಾದ ಅಸ್ತವ್ಯಸ್ತತೆ ಚಿಕಿತ್ಸೆಗೊಳಗಾಗಿರುವುದಾಗಿರುತ್ತದೆ. ಮನುಷ್ಯ ತನ್ನ ಆಧ್ಯಾತ್ಮಿಕ ಆತ್ಮವನ್ನು ತಿಳಿದುಕೊಳ್ಳುವತ್ತ ಬಂದ ಕೂಡಲೆ, ಆ ಶೋಧದ ಮೂಲಕ ಬಹಳಷ್ಟು ಸಲ ಅದನ್ನು ಅರಸುವುದರಿಂದಾಗಿಯೇ, ಪ್ರಾಚೀನ ಕಾಲದ ಯೋಚನೆ ಮತ್ತು ಧರ್ಮ ಕಂಡುಕೊಂಡ ಹಾಗೆ, ಬಾಹ್ಯ ನಿಯಮದಿಂದ ತಪ್ಪಿಸಿಕೊಳ್ಳುವನು ಮತ್ತು ಸ್ವಾತಂತ್ರ್ಯದ ನಿಯಮದಲ್ಲಿ ಪ್ರವೇಶಿಸುವನು.

ಆಧ್ಯಾತ್ಮಿಕ ಯುಗವೊಂದು ಈ ಸತ್ಯವನ್ನು ಗ್ರಹಿಸುವುದು. ಅದು ಮನುಷ್ಯನನ್ನು ಯಾಂತ್ರಿಕತೆಯ ಮೂಲಕ ಪರಿಪೂರ್ಣನಾದವನನ್ನಾಗಿ ಮಾಡುವುದಿಲ್ಲ ಇಲ್ಲವೆ ಅವನ ಅಂಗಗಳನ್ನೆಲ್ಲ ಕಟ್ಟಿಹಾಕಿ ನೇರವಾಗಿರುವಂತೆ ಮಾಡುವುದಿಲ್ಲ. ಸಮಾಜದಲ್ಲಿರುವ ಮನುಷ್ಯನಿಗೆ ಪೋಲಿಸ, ಅಧಿಕಾರಿ, ಸೈನ್ಯಾಧಿಕಾರಿ ಇಂತಹರಲ್ಲಿರುವ ಉಚ್ಚ ಆತ್ಮವನ್ನು ಸಮಾಜವಾದಿ ನೌಕರಶಾಹಿಯ ರೂಪದಲ್ಲಿ ಇಲ್ಲವೆ ರಶಿಯಾದ ಶ್ರಮಿಕ ವರ್ಗದ ರೂಪದಲ್ಲಿ ಮುಂದಿರಿಸುವುದಿಲ್ಲ. ಅದರ ಗುರಿ ಸಾಧ್ಯವಿದ್ದಷ್ಟು ಬೇಗನೆ ಮತ್ತು ಸಾಧ್ಯವಿರುವಷ್ಟರ ಮಟ್ಟಿಗೆ ಮಾನವ ಜೀವನದಲ್ಲಿ ಬಾಹ್ಯ ಒತ್ತಡದ ಅಂಶವನ್ನು ಕಡಿಮೆ ಮಾಡುವುದಾಗಿರುತ್ತದೆ; ಅದನ್ನು ಅಂತರಂಗದೊಳಗಿರುವ ಆತ್ಮದ ಆಂತರಿಕ ಒತ್ತಡವನ್ನು ಜಾಗ್ರತ–ಗೊಳಿಸುವುದರ ಮೂಲಕ ಮಾಡಲಾಗುತ್ತದೆ ಮತ್ತು ಅದು ಉಪಯೋಗಿಸಲಿರುವ ಎಲ್ಲ ಪ್ರಾಥಮಿಕ ಸಾಧನಗಳಿಗೆ ಆ ಗುರಿಯಿರುತ್ತದೆ. ಕೊನೆಯಲ್ಲಿ ಅದು ಏಕೈಕವಾಗಿ ಅಲ್ಲದಿದ್ದರೆ ಮುಖ್ಯವಾಗಿ ಆಧ್ಯಾತ್ಮಿಕ ಒತ್ತಡವನ್ನು ಪ್ರಯೋಗಿಸುತ್ತದೆ, ಅದನ್ನು ಆಧ್ಯಾತ್ಮಿಕ ವ್ಯಕ್ತಿ ಕೂಡ ತನ್ನ ಸುತ್ತಲಿದ್ದವರ ಮೇಲೆ ಉಪಯೋಗ ಮಾಡಬಲ್ಲನು, – ಆಧ್ಯಾತ್ಮಿಕ ಸಮಾಜ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉಪಯೋಗಿಸಬಲ್ಲದು – ಎಲ್ಲ ಆಂತರಿಕ ವಿರೋಧ ಮತ್ತು ಬಾಹ್ಯ ನಿರಾಕರಣೆ ಇವು ಇದ್ದಾಗಲೂ ಕೂಡ ಆ ಒತ್ತಡ ನಮ್ಮಂತರಂಗದಲ್ಲಿ ದೈವೀ ಪ್ರಕಾಶದ ಒತ್ತಡವನ್ನು, ಭಗವಂತನಲ್ಲಿ ಮನುಷ್ಯ ತನ್ನದೇ ಸ್ವಭಾವದ ಮೂಲಕ ಬೆಳೆಯಲು ಇರುವ ಬಯಕೆಯನ್ನು ಮತ್ತು ಸಾಮರ್ಥ್ಯವನ್ನು ಜಾಗ್ರತಗೊಳಿಸುತ್ತದೆ. ಏಕೆಂದರೆ ಪರಿಪೂರ್ಣವಾಗಿ ಆಧ್ಯಾತ್ಮೀಕರಣಗೊಂಡ ಸಮಾಜ ಹೇಗಿರುತ್ತದೆಂದರೆ

ಆಧ್ಯಾತ್ಮಿಕನಾದವನು ಹಾಗೂ ಸರಕಾರ ಅನಗತ್ಯ ಎಂದು ನಂಬಿರುವವನು ಕನಸು ಕಂಡ ರೀತಿಯಲ್ಲಿ ಎಲ್ಲ ಜನರು ಆಳವಾದ ರೀತಿಯಲ್ಲಿ ಮುಕ್ತರಾಗಿರುತ್ತಾರೆ ಮತ್ತು ಅದು ಹಾಗಿರುವುದು ಏಕೆಂದರೆ ಪ್ರಾಥಮಿಕ ಷರತ್ತುಗಳನ್ನು ಪಾಲಿಸಲಾಗಿರುತ್ತದೆ. ಆ ರಾಜ್ಯದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಅವನದೇ ನಿಯಮವಿರುವುದಿಲ್ಲ, ಆದರೆ ಎಲ್ಲರಿಗೂ ದೈವೀ ನಿಯಮವಿರುತ್ತದೆ, ಏಕೆಂದರೆ ಅವನದು ದೈವೀ ನೈಜತೆಯಲ್ಲಿ ಜೀವಿಸುವ ಆತ್ಮವಾಗಿರುತ್ತದೆ, ಅಹಂಕಾರದಲ್ಲಿ ಇಡಿಯಾಗಿ ಅಲ್ಲದಿದ್ದರೂ ಮುಖ್ಯವಾಗಿ ತನ್ನದೇ ಆಸಕ್ತಿ ಹಾಗೂ ಉದ್ದೇಶಕ್ಕಾಗಿ ಜೀವಿಸುವ ಆತ್ಮವಲ್ಲ. ಅವನ ಜೀವನ ಅಹಂಕಾರದಿಂದ ಮುಕ್ತವಾದ ಅವನದೇ ದೈವೀ ಸ್ವಭಾವದ ಮೂಲಕ ಮುಂದೆ ಸಾಗುವುದು.

*

**ಏಕತೆಯ ದೈವೀ ನಿಯಮ**

ಆಧ್ಯಾತ್ಮಿಕ ಜೀವನ ವೈಶಿಷ್ಟ್ಯವಿಲ್ಲದ ಹೂವಿನಂತಲ್ಲ, ಆದರೆ ಪ್ರಜ್ಞಾಪೂರ್ಣ ಮತ್ತು ವೈವಿಧ್ಯತೆಗೆ ಒಳಗಾದ ಏಕತೆಯಾಗಿರುತ್ತದೆ. ಪ್ರತಿಯೊಬ್ಬ ಮನುಷ್ಯ ತನ್ನೊಳಗೇ ತನ್ನದೇ ವ್ಯಕ್ತಿವಿಶಿಷ್ಟತೆಯ ಮೂಲಕ ದೈವೀ ನೈಜತೆಯಲ್ಲಿ ಬೆಳೆಯ ಬೇಕಾಗಿರುತ್ತದೆ, ಆದ್ದರಿಂದ ಅದು ಸ್ವಾತಂತ್ರ್ಯ ಒಂದು ಬಗೆಯಲ್ಲಿ ಬೆಳೆಯುತ್ತಿರುವುದರ ಪ್ರಮಾಣ, ಸತ್ತೆ ಅಭಿವೃದ್ಧಿ ಹೊಂದುತ್ತಿರುವ ಹಾಗೆ ಅದರ ಆವಶ್ಯಕತೆ, ಪರಿಪೂರ್ಣ ಸ್ವಾತಂತ್ರ್ಯ, ಪರಿಪೂರ್ಣ ಜೀವನದ ಷರತ್ತು ಮತ್ತು ಕುರುಹು. ಆದರೆ ಹಾಗೆಯೇ ಅವನು ತನ್ನಲ್ಲಿ ಹೀಗೆ ನೋಡುವ ಅದೇ ಭಗವಂತನನ್ನು ಸಮನಾಗಿ ಎಲ್ಲರಲ್ಲಿ ನೋಡುತ್ತಾನೆ. ಆದ್ದರಿಂದ ಇತರರೊಡನೆ ಬೆಳೆಯುವ ಏಕತೆ ಅವನ ಸತ್ತೆಯ ಒಂದು ಆವಶ್ಯಕತೆ ಮತ್ತು ಪರಿಪೂರ್ಣ ಏಕತೆ, ಪರಿಪೂರ್ಣ ಜೀವನದ ಷರತ್ತು ಹಾಗೂ ಕುರುಹು. ಮನುಷ್ಯ ತನ್ನಲ್ಲಿ ಭಗವಂತನನ್ನು ನೋಡುವುದು ಮತ್ತು ಕಂಡುಕೊಳ್ಳುವುದು ಅಷ್ಟೇ ಅಲ್ಲ, ಆದರೆ ಎಲ್ಲರಲ್ಲಿ ಅವನನ್ನು ನೋಡಬೇಕಾಗುತ್ತದೆ ಹಾಗೂ ಕಂಡುಕೊಳ್ಳಬೇಕಾಗುತ್ತದೆ, ಮನುಷ್ಯ ತನ್ನ ಮುಕ್ತಿಯನ್ನು ಇಲ್ಲವೆ ಪರಿಪೂರ್ಣತೆಯನ್ನು ಅರಸುವುದಷ್ಟೇ ಅಲ್ಲ, ಆದರೆ ಇತರರ ಮುಕ್ತಿಯನ್ನು ಹಾಗೂ ಪರಿಪೂರ್ಣತೆಯನ್ನು ಅರಸಬೇಕಾಗುತ್ತದೆ, ಇದು ಆಧ್ಯಾತ್ಮಿಕ ಸತ್ತೆ ಪಾಲಿಸಬೇಕಾದ ಸಂಪೂರ್ಣ ನಿಯಮ. ಅರಸುತ್ತಿದ್ದ ದೈವಿಕತೆ ತನ್ನೊಳಗಿರುವ ಪ್ರತ್ಯೇಕ ದೇವಪ್ರಮುಖನನ್ನು ಕುರಿತಾಗಿದ್ದರೆ ಏಕೈಕ ಭಗವಂತನನ್ನು ಕುರಿತಾಗಿರದಿದ್ದರೆ, ಆಗ ಪರಿಣಾಮ ಮಹತ್ವಪೂರ್ಣವಾದ ಅಹಂಮನ್ಯತೆಯಾಗಬಹುದು, ಗಯಟೆನ ಘನಗಂಭೀರ

(Olympion) ಅಹಂಮನ್ಯತೆಯಾಗಬಹುದು ಇಲ್ಲವೆ ನೀಟ್ಸೆ ಕಲ್ಪನೆ ಮಾಡಿಕೊಂಡಿದ್ದ ದೈತ್ಯಾಕಾರದ ಅಹಂಮನ್ಯತೆಯಾಗಬಹುದು. ಇಲ್ಲವೆ ಪ್ರತ್ಯೇಕಗೊಂಡ ಸ್ವ–ಜ್ಞಾನದ ವಿರಾಗಿಯಾಗಿರಬಹುದು ಇಲ್ಲವೆ ಕಂಬದ ಮೇಲೆ ವಾಸಿಸುವ ಹಟಯೋಗಿಯಾಗಿರಬಹುದು. ಆದರೆ ಎಲ್ಲರಲ್ಲಿ ದೇವನನ್ನು ನೋಡುವವನು ಎಲ್ಲರಲ್ಲಿರುವ ದೇವನಿಗೆ ಮುಕ್ತವಾಗಿ ಪ್ರೇಮದಿಂದ ಸೇವೆ ಸಲ್ಲಿಸುವನು. ಅವನು ಕೇವಲ ತನ್ನ ಸ್ವಾತಂತ್ರವನ್ನಷ್ಟೇ ಅರಸುವುದಿಲ್ಲ, ಆದರೆ ಎಲ್ಲರ ಸ್ವಾತಂತ್ರ್ಯವನ್ನು ಅರಸುತ್ತಾನೆ, ತನ್ನ ಪರಿಪೂರ್ಣತೆಯನ್ನಷ್ಟೇ ಅಲ್ಲ, ಎಲ್ಲರ ಪರಿಪೂರ್ಣತೆಯನ್ನು ಅರಸುವನು; ಅತ್ಯಂತ ಭವ್ಯವಾದ ವಿಶ್ವಂಭರತೆಯ ಪರಿಪೂರ್ಣತೆಯಲ್ಲಿ ತನ್ನ ವ್ಯಕ್ತಿವಿಶಿಷ್ಟ ಪರಿಪೂರ್ಣತೆಯನ್ನು ಕಾಣುತ್ತಾನೆ, ತನ್ನ ಜೀವನ ವಿಶ್ವಂಭರ ಜೀವನದೊಂದಿಗೆ ಏಕವಾಗಿದೆ ಎಂದಾಗ ಮಾತ್ರ ತನ್ನ ಜೀವನ ಪೂರ್ಣವಾಗಿದೆ ಎಂಬುದನ್ನು ನೋಡುತ್ತಾನೆ. ಅವನು ತನಗಾಗಿಯಾಗಲಿ, ದೇಶಕ್ಕಾಗಿಯಾಗಲಿ ಮತ್ತು ಸಮಾಜಕ್ಕಾಗಿಯಾಗಲಿ ತನ್ನ ವ್ಯಕ್ತಿವಿಶಿಷ್ಟತೆಯ ಅಹಂಕಾರಕ್ಕಾಗಲಿ ಇಲ್ಲವೆ ಸಾಮೂಹಿಕ ಅಹಂಕಾರಕ್ಕಾಗಲಿ ಜೀವಿಸುವುದಿಲ್ಲ, ಆದರೆ ಅದಕ್ಕಿಂತಲೂ ಶ್ರೇಷ್ಠವಾದ ತನ್ನಲ್ಲಿರುವ ದೇವ ಮತ್ತು ವಿಶ್ವದಲ್ಲಿರುವ ದೇವ ಇವರಿಗಾಗಿ ಜೀವಿಸುತ್ತಾನೆ.

**(CWSA, 25/256–60)** **– ಶ್ರೀ ಅರವಿಂದರು**

*

**ಮನುಷ್ಯ ಆಧ್ಯಾತ್ಮೀಕರಣಗೊಳ್ಳುವುದಕ್ಕೆ ಒಪ್ಪಿಕೊಳ್ಳಬಲ್ಲನಾದರೆ ಮಾತ್ರ**

ಕೊನೆಗೆ ಇರುವ ಸಮಸ್ಯೆ ಎಂದರೆ ಮನುಕುಲ ಪರಿಶುದ್ಧ ಬಂಗಾರದಂತಿರುವ ಸ್ಥಿತಿಯನ್ನು ತಲುಪಿದೆಯೋ ಇಲ್ಲವೆ ಅದನ್ನು ಇನ್ನೂ ಮೂಸೆಯಲ್ಲಿ ಕರಗಿಸಿ ಪರಿಶುದ್ಧಗೊಳಿಸಬೇಕಾಗಿದೆಯೋ ಎಂಬುದಾಗಿದೆ.

ಒಂದು ವಿಷಯ ಸ್ಪಷ್ಟವಿದೆ: ಮನುಕುಲ ಪರಿಶುದ್ಧ ಬಂಗಾರವಿರುವ ಹಾಗೆ ಇನ್ನೂ ಆಗಿಲ್ಲ ಎಂಬುದು, ಅದು ಗೋಚರವಾಗುತ್ತದೆ ಮತ್ತು ನಿಶ್ಚಿತವಾಗಿದೆ. ಆದರೆ ಜಗತ್ತಿನ ಇತಿಹಾಸದಲ್ಲಿ ಏನೋ ಒಂದು ಸಂಭವಿಸಿದೆ: ಮನುಕುಲದಲ್ಲಿ ಆಯ್ದುಕೊಳ್ಳಬೇಕಾದ ಕೆಲವರು, ಅಲ್ಪ ಸಂಖ್ಯೆಯಲ್ಲಿರುವ ಸತ್ತೆಗಳು ಪರಿಶುದ್ಧ ಬಂಗಾರದಂತಾಗಲು ಪರಿವರ್ತನೆ ಹೊಂದುವುದಕ್ಕೆ ಬಹುಶಃ ತಯಾರಾಗಿದ್ದಾರೆ ಮತ್ತು ಅವರು ಹಿಂಸೆಯಿಲ್ಲದ ಬಲವನ್ನು, ವಿನಾಶವಿಲ್ಲದ ವೀರೋಚಿತತೆಯನ್ನು, ಅನಾಹುತವಿಲ್ಲದ ಧೈರ್ಯವನ್ನು ಪ್ರಕಟಿಸಬಲ್ಲರು. ...

ಸದ್ಯದ ಕ್ಷಣದಲ್ಲಿ ನಾವು ಪೃಥ್ವಿಯ ಇತಿಹಾಸದಲ್ಲಿ ಮತ್ತೊಮ್ಮೆ ತಿರುವು ಪಡೆಯುವ ನಿರ್ಧಾರಕ ಹಂತದಲ್ಲಿದ್ದೇವೆ. ಪ್ರತಿಯೊಂದು ಬದಿಯಿಂದ "ಏನು ಸಂಭವಿಸಲಿದೆ?" ಎಂಬ ಪ್ರಶ್ನೆಯನ್ನು ನನ್ನ ಬಳಿ ಕೇಳಲಾಗುತ್ತಿದೆ. ಎಲ್ಲೆಡೆಯಲ್ಲೂ ತಳಮಳವಿದೆ, ನಿರೀಕ್ಷೆಯಿದೆ, ಭಯವಿದೆ. "ಏನು ಸಂಭವಿಸಲಿದೆ..?" ಅದಕ್ಕೆ ಒಂದೇ ಒಂದು ಉತ್ತರವಿದೆ. "ಮನುಷ್ಯ ಆಧ್ಯಾತ್ಮೀಕರಣಗೊಳ್ಳುವುದಕ್ಕೆ ಒಪ್ಪಿಕೊಳ್ಳಬಲ್ಲನಾದರೆ ಮಾತ್ರ." ಮತ್ತು ಬಹುಶಃ ಕೆಲವು ವ್ಯಕ್ತಿಗಳು ಪರಿಶುದ್ಧ ಬಂಗಾರದಂತಾದರೆ ಅದು ಸಾಕಾಗಬಹುದು, ಏಕೆಂದರೆ ಇದು ಘಟನೆಗಳ ಗತಿಯನ್ನು ಬದಲು ಮಾಡಲು ಸಾಕಾಗಬಹುದು. ತುರ್ತಾಗಿ ನಾವು ಈ ಆವಶ್ಯಕತೆಯನ್ನು ಎದುರಿಸುತ್ತಿದ್ದೇವೆ. ನಮ್ಮಿಂದ ಭಗವಂತ ಬಯಸುವ ಈ ಧೈರ್ಯ, ಈ ವೀರೋಚಿತತೆ ಇದೆಲ್ಲವನ್ನು ಮನುಷ್ಯ ತನ್ನದೇ ತೊಂದರೆಗಳು, ಅಪರಿಪೂರ್ಣತೆಗಳು, ಮಬ್ಬುತನಗಳು ಇವೆಲ್ಲವುಗಳ ವಿರುದ್ಧ ಹೋರಾಡುವುದಕ್ಕಾಗಿ ಏಕೆ ಉಪಯೋಗಿಸಬಾರದು? ಆಂತರಿಕ ಪರಿಶುದ್ಧತೆಗಾಗಿ ಇರುವ ಕುಲುಮೆಯನ್ನು ವೀರೋಚಿತತೆಯಿಂದ ಎದುರಿಸಬಾರದೇಕೆ? ಅದರಿಂದಾಗಿ ಇಡೀ ನಾಗರಿಕತೆ ಅಂಧಕಾರದಲ್ಲಿ ಮುಳುಗುವಂತೆ ಮಾಡುವ ಭಯಾನಕ, ದೈತ್ಯ ಸ್ವರೂಪದ ವಿನಾಶಗಳಲ್ಲೊಂದರಲ್ಲಿ ಮತ್ತೊಮ್ಮೆ ಹಾಯ್ದು ಹೋಗಬೇಕಾದ ಆವಶ್ಯಕತೆ ಉಂಟಾಗುವುದಿಲ್ಲ.

ಇದು ನಮ್ಮೆದುರಿಗೆ ಇರುವ ಸಮಸ್ಯೆ. ಪ್ರತಿಯೊಬ್ಬನೂ ತನ್ನದೇ ರೀತಿಯಲ್ಲಿ ಅದನ್ನು ಪರಿಹರಿಸಬೇಕಾಗಿದೆ.

ಈ ದಿನ ಸಾಯಂಕಾಲ ನನಗೆ ಕೇಳಲಾದ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದೇನೆ. ನನ್ನ ಉತ್ತರ ಶ್ರೀ ಅರವಿಂದರು ನೀಡಿದ ಉತ್ತರವಾಗಿದೆ: "ಮನುಷ್ಯ ಒಮ್ಮೆ ಆಧ್ಯಾತ್ಮೀಕರಣಗೊಳ್ಳಲು ಒಪ್ಪಿಕೊಳ್ಳಬಲ್ಲನಾದರೆ ಮಾತ್ರ..." ನಾನು ಅಧಿಕವಾಗಿ ಹೇಳುವುದೇನೆಂದರೆ: "ಮಾನವನ ದೃಷ್ಟಿಕೋನದಿಂದ ಕಾಲ ಒತ್ತಡ ತರುತ್ತಿದೆ."

"ಮನುಷ್ಯ ಒಮ್ಮೆ ಆಧ್ಯಾತ್ಮೀಕರಣಗೊಳ್ಳಲು ಸಮ್ಮತಿಸಬಲ್ಲನಾದರೆ ಎಲ್ಲವೂ ಬದಲಾಗುವುದು, ಆದರೆ ಅವನ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸ್ವಭಾವ ಉಚ್ಚತರ ನಿಯಮದ ವಿರುದ್ಧ ಬಂಡಾಯವೇಳುತ್ತದೆ, ಅವನು ತನ್ನ ಅಪರಿಪೂರ್ಣತೆಯನ್ನು ಪ್ರೀತಿಸುತ್ತಾನೆ."

**(CWM, 9/74–75)** **– ಶ್ರೀಮಾತೆ**

*

**ಮನುಷ್ಯ ಮುನ್ನಡೆಯತ್ತ ಜಿಗಿತ ಮಾಡಲೇಬೇಕು**

**ಪ್ರಶ್ನೆ :** *ಜಗತ್ತು ಗಲಭೆಯಲ್ಲಿದೆ ಎಂಬ ಭಾವನೆ ಮನುಷ್ಯನಿಗೆ ನಿಜವಾಗಿ ಬರುತ್ತಿದೆ.*

**ಶ್ರೀಮಾತೆ :** ಹೌದು, ಓಹ್ ಹೌದು.

ಬೆಳಗಿನಿಂದ ಈವರೆಗೆ ಅದು ಈ ರೀತಿಯದಾಗಿದೆ – ಹರತಾಳಗಳು, ಜಗಳಗಳು, ಅವ್ಯವಸ್ಥೆಗಳು ಇವೆಲ್ಲ ಇವೆ. ಮತ್ತು ನಂತರ ಬಂದ ಭಾವನೆ ಎಂದರೆ ಅವ್ಯವಸ್ಥೆಯನ್ನು ಸೃಷ್ಟಿಸಿದವರಿಂದಲೇ ವ್ಯವಸ್ಥೆ ಮರುಸ್ಥಾಪಿತಗೊಳ್ಳಬೇಕು ಎಂಬುದಾಗಿತ್ತು. ಕೈಕೊಳ್ಳಬೇಕಾದುದು ಅದೇ ಆಗಿದೆ. ಸರ್ವಸಾಧಾರಣ ಸದ್ಭಾವನೆ, ಮತ್ತು ಎಲ್ಲ ನೈತಿಕ ಹಾಗೂ ಸಾಮಾಜಿಕ ನಿಯಮಗಳು ಇವೆಲ್ಲವನ್ನು ನೆಲಕ್ಕೆ ಬಡಿದು ಹಾಕಲಾಗಿದೆ. ಮನುಷ್ಯ ಎತ್ತರಕ್ಕೇರಬೇಕು, ಅಲ್ಲಿ ದೈವೀ ಸಂಕಲ್ಪ ಹಾಗೂ ದೈವೀ ಸಾಮರಸ್ಯ ಇರಬೇಕು, ಅದನ್ನು ನಾವು ಬಯಸುತ್ತೇವೆ; ಮತ್ತು ನಂತರ ವಿಷಯಗಳನ್ನು ಕುರಿತು ಇರುವ ಸರ್ವಸಾಧಾರಣ ನಿಯಮಗಳು ಮತ್ತು ಸರ್ವಸಾಧಾರಣ ಸಾಮಾಜಿಕ ಸಂಪ್ರದಾಯಗಳು ಇವುಗಳ ವಿರುದ್ಧ ಬಂಡಾಯ–ವೆದ್ದವರು ಸಿದ್ಧಪಡಿಸುವುದೇನೆಂದರೆ ನೀವು ಉಚ್ಚತರ ಪ್ರಜ್ಞೆ ಮತ್ತು ಹೆಚ್ಚು ನಿಜವಾದ ಸತ್ಯ ಇವುಗಳೊಡನೆ ಸಂಬಂಧ ಪಡೆದಿರುತ್ತೀರಿ ಎಂಬುದಾಗಿರುತ್ತದೆ.

ಅದನ್ನು ಕೈಕೊಳ್ಳಲು ಸಮಯ ಬಂದಿದೆ. (ಮೇಲ್ಗಡೆಗೆ ಜಿಗಿತ ಮಾಡುವ ಚಿಹ್ನೆ)

ಮತ್ತು ಸಂಘಟಿಸುವ ಸಾಮರ್ಥ್ಯದ ದೃಷ್ಟಿಕೋನದಿಂದ ಅದೊಂದು ಅತ್ಯಂತ ಸಮರ್ಥವಾದ ಸಾಮರ್ಥ್ಯ. ಅದೊಂದು ಅದ್ಭುತ. ಮತ್ತು ಈ ಸಾಮರ್ಥ್ಯವನ್ನು ಉಚ್ಚ ದರ್ಜೆಯ, ಹೆಚ್ಚು ನಿಜವಾದ ಪ್ರಜ್ಞೆಯ ವಿನಿಯೋಗಕ್ಕಾಗಿ ಇರಿಸಿದಾಗ ಏನೋ ಒಂದನ್ನು ಕೈಕೊಳ್ಳಬಹುದು.

ಮನುಷ್ಯ ಮುನ್ನಡೆಯತ್ತ ಜಿಗಿತ ಮಾಡಲೇಬೇಕು.

ವ್ಯವಸ್ಥೆಯನ್ನು ಪುನಃ ಸ್ಥಾಪಿಸಬೇಕೆನ್ನುವವರು ಎಲ್ಲ ಹಳೆಯ ವಿಚಾರಗಳಲ್ಲಿ ಹಿಂದೆ ಸರಿದುಕೊಂಡು ಹೋಗುತ್ತಾರೆ. – ಆ ಕಾರಣದಿಂದಾಗಿ ಅವರು ಎಂದಿಗೂ ಯಶಸ್ವಿಯಾಗುವುದಿಲ್ಲ. ಅದು ಮುಗಿದು ಹೋಗಿದೆ, ಎಲ್ಲ ಕಾಲಕ್ಕೂ ಮುಗಿದು ಹೋಗಿದೆ. ನಾವು ಮೇಲ್ಗಡೆ ಸಾಗಿ ಹೋಗುತ್ತೇವೆ, ಮೇಲಕ್ಕೇರಿ ಹೋಗುವವರು ಕಾರ್ಯ ಮಾಡಬಲ್ಲರು.

**(CWM, 11/253)** **– ಶ್ರೀಮಾತೆ**

*

"ಜಗತ್ತು ಮೂರು ಬಗೆಯ ಕ್ರಾಂತಿಗಳನ್ನು ತಿಳಿದುಕೊಂಡಿದೆ. ಪ್ರಾಪಂಚಿಕವಾದದ್ದಕ್ಕೆ ಬಲವತ್ತರವಾದ ಪರಿಣಾಮಗಳಿರುತ್ತವೆ, ನೈತಿಕ ಹಾಗೂ ಬೌದ್ಧಿಕ ಕ್ರಾಂತಿಗಳು, ಅವುಗಳ ವ್ಯಾಪ್ತಿಯಲ್ಲಿ ಅನಂತಪಟ್ಟು ಭವ್ಯವಾಗಿರುತ್ತವೆ, ಫಲಪ್ರಾಪ್ತಿಯಲ್ಲಿ ಶ್ರೀಮಂತವಾಗಿರುತ್ತವೆ, ಆದರೆ ಆಧ್ಯಾತ್ಮಿಕ ಕ್ರಾಂತಿಗಳು ಶ್ರೇಷ್ಠ ಬೀಜಗಳನ್ನು ಬಿತ್ತುತ್ತವೆ.

"ಇಂದು ನಾವು ಜಗತ್ತಿನಲ್ಲಿ ನೋಡುವ ಬದಲಾವಣೆಗಳು, ಅವುಗಳ ಆದರ್ಶ ಹಾಗೂ ಉದ್ದೇಶಗಳಲ್ಲಿ, ಬೌದ್ಧಿಕ, ನೈತಿಕ ಹಾಗೂ ಭೌತಿಕ ಸ್ವರೂಪದವಾಗಿವೆ: ಆಧ್ಯಾತ್ಮಿಕ ಕ್ರಾಂತಿ ತನ್ನ ಗಳಿಗೆಗಾಗಿ ಕಾದುಕೊಂಡಿದೆ ಮತ್ತು ಈ ಮಧ್ಯೆ ತನ್ನ ತರಂಗಗಳನ್ನು ಅಲ್ಲಿ, ಇಲ್ಲಿ ಚೆಲ್ಲಿಕೊಡುತ್ತದೆ. ಅದು ಬರುವವರೆಗೆ ಇನ್ನುಳಿದವುಗಳ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಮತ್ತು ಅಲ್ಲಿಯವರೆಗೆ ಸದ್ಯದ ಸಂಭವಿಸುವಿಕೆಗಳು ಮತ್ತು ಮನುಷ್ಯನ ಭವಿಷ್ಯತ್ತಿನ ಬಗೆಗೆ ಹೇಳಿಕೆಗಳು ಇವೆಲ್ಲ ವ್ಯರ್ಥ ವಿಷಯಗಳು. ಏಕೆಂದರೆ ಅದರ ಸ್ವಭಾವ, ಸಾಮರ್ಥ್ಯ, ಘಟನೆ ಇವೆಲ್ಲ ನಮ್ಮ ಮನುಕುಲದ ಮುಂದಿನ ಆವರ್ತ(cycle)ವನ್ನು ನಿರ್ಧರಿಸುತ್ತವೆ.

**(SABCL, 16/393–94)** **– ಶ್ರೀ ಅರವಿಂದರು**

*

## ಬದಲಾವಣೆಯ ಗಾಳಿಗಳು

### ದೇವತೆಗಳ ಹಾಗೂ ಧರ್ಮಗಳ ಕಾಲ ಕಳೆದು ಹೋಗಿದೆ

ಯಾವುದೇ ಸಂದರ್ಭದಲ್ಲಿ, ವಿಷಯಗಳನ್ನು ಸರಳೀಕರಿಸಿ ಹೇಳುವುದಾದರೆ, ಹಳೆಯ ಜಗತ್ತು ಸ್ವಭಾವಕ್ಕನುಗುಣವಾಗಿ – ಅದನ್ನು ಶ್ರೀ ಅರವಿಂದರು ಅಧಿಮಾನಸ ಜಗತ್ತೆಂದು ಕರೆದಿದ್ದಾರೆ – ದೇವತೆಗಳ ಮತ್ತು ಆ ಕಾರಣದಿಂದಾಗಿ ಧರ್ಮಗಳ ಜಗತ್ತಾಗಿತ್ತು. ತನ್ನ ಮೇಲಿರುವುದರತ್ತ ಕೈಕೊಂಡ ಮಾನವ ಪ್ರಯತ್ನದ ಹೂವರಳಿಕೆಯು ಅನೇಕ ಧಾರ್ಮಿಕ ರೂಪಗಳು ಹಾಗೂ ಅತ್ಯಂತ ಒಳ್ಳೆಯ ಆತ್ಮಗಳ ಅಗೋಚರ ಜಗತ್ತು ಇವುಗಳ ನಡುವಿನ ಸಂಬಂಧಕ್ಕೆ ಜನ್ಮ ನೀಡಿತು. ಅದೆಲ್ಲದರ ತುತ್ತತುದಿಯ ಮೇಲೆ, ಉಚ್ಚತರ ಸಿದ್ಧಿಗಾಗಿ ಕೈಕೊಂಡ ಪ್ರಯತ್ನದಿಂದ ಎಲ್ಲ ಧರ್ಮಗಳ ಏಕತೆ ಕುರಿತು ವಿಚಾರ ಮೇಲೆದ್ದು ಬಂದಿತು. ಏಕತೆಯ ಈ ವಿಷಯ ಎಲ್ಲ ಪ್ರಕಟಣೆಗಳ ಹಿಂದಿದೆ, ಮತ್ತು ಈ ವಿಚಾರ, ನಿಜವಾಗಿ, ಮಾನವ ಅಭೀಪ್ಸೆಯ ಕೊನೆಯ ಮಿತಿ, ಸರಿ, ಅದು ಮುಂಚೂಣಿಯಲ್ಲಿದೆ, ಅದಿನ್ನೂ ಸಂಪೂರ್ಣವಾಗಿ ಅಧಿಮಾನಸ ಜಗತ್ತಿಗೆ

ಹಾಗೂ ಸೃಷ್ಟಿಗೆ ಸೇರಿದ ಏನೋ ಒಂದಾಗಿದೆ, ಅಲ್ಲಿಂದ ಅದು ಈ "ಬೇರೆಯಾದ ವಿಷಯದತ್ತ" ನೋಡುತ್ತಿರುವ ಹಾಗಿದೆ. ಈ ಬೇರೆ ವಿಷಯ, ಅದರ ಗ್ರಹಿಕೆಗೆ ಬಾರದ ಹೊಸ ಜಗತ್ತಾಗಿದೆ, ಅದನ್ನು ತಲುಪಲು ಪ್ರಯತ್ನಿಸುತ್ತದೆ, ಆದರೆ ಅದಕ್ಕೆ ಗ್ರಹಿಸಲಾಗಿಲ್ಲ, ಅದನ್ನು ಗ್ರಹಿಸುವುದಕ್ಕಾಗಿ ಒಂದು ಬಗೆಯ ಪೂರ್ತಿ ಬದಲಾಯಿಸುವಿಕೆಯ ಆವಶ್ಯಕತೆ ಇದೆ. ಅಧಿಮಾನಸದ ಸೃಷ್ಟಿಯನ್ನು ಬಿಟ್ಟುಕೊಟ್ಟು ಹೋಗಬೇಕಾದ ಆವಶ್ಯಕತೆ ಇದೆ. ಹೊಸ ಸೃಷ್ಟಿ ಎಂದರೆ ಅತಿಮಾನಸ ಸೃಷ್ಟಿಯಾಗುವುದಕ್ಕೆ ಅದು ಅವಶ್ಯವಾಗಿತ್ತು.

ಮತ್ತು ಈಗ ಈ ಎಲ್ಲ ಹಳೆಯ ವಿಷಯಗಳು ಎಷ್ಟೊಂದು ರೂಢಿಯಲ್ಲಿರುವುದನ್ನು ಕಳೆದುಕೊಂಡಿವೆ, ಎಷ್ಟೊಂದು ನಿರಂಕುಶವಾಗಿವೆ – ಎಷ್ಟೊಂದು ನೈಜವಾದ ಸತ್ಯದ ವಿಡಂಬನೆಯಾಗಿದೆ. ಅತಿಮಾನಸ ಸೃಷ್ಟಿಯಲ್ಲಿ ಇನ್ನು ಮುಂದೆ ಧರ್ಮಗಳಿರುವುದಿಲ್ಲ. ಜಗತ್ತಿನಲ್ಲಿ ಇಡೀ ಜೀವನ ಪ್ರಕಟವಾಗುತ್ತಿರುವ ದೈವೀ ಏಕತೆಯ ಅಭಿವ್ಯಕ್ತಗೊಳ್ಳುವಿಕೆ, ರೂಪಗಳಲ್ಲಿ ಅರಳಿಕೊಳ್ಳುವಿಕೆ ಇದೆಲ್ಲ ಆಗಿರುತ್ತದೆ. ಈಗ ಜನರು ದೇವತೆಗಳೆಂದು ಕರೆಯುವವರು ಇನ್ನು ಮುಂದೆ ಇರುವುದಿಲ್ಲ. ಈ ಶ್ರೇಷ್ಠ ಸತ್ತೆಗಳೇ ಸ್ವತಃ ಹೊಸ ಸೃಷ್ಟಿಯಲ್ಲಿ ಭಾಗವಹಿಸಲು ಶಕ್ತರಾಗುವರು, ಆದರೆ ಹಾಗೆ ಶಕ್ತರಾಗಲು ಅವರು ಪೃಥ್ವಿಯ ಮೇಲಿನ ಅತಿಮಾನಸ ವಸ್ತು ಎಂದು ನಾವು ಕರೆಯಬಹುದಾದುದನ್ನು ಧಾರಣಮಾಡಬೇಕಾಗುವುದು. ಮತ್ತು ಇನ್ನು ಕೆಲವರು ತಮ್ಮ ಜಗತ್ತಿನಲ್ಲಿ ತಾವಿರುವ ಹಾಗೆ ಉಳಿದುಕೊಳ್ಳುವುದನ್ನು ಆಯ್ದುಕೊಂಡರೆ, ಭೌತಿಕವಾಗಿ ಪ್ರಕಟವಾಗಬಾರದೆಂದು ನಿರ್ಧರಿಸಿದರೆ, ಅವರ ಸಂಬಂಧ ಅತಿಮಾನಸೀಕರಣ–ಗೊಂಡ ಪೃಥ್ವಿಯ ಸತ್ತೆಗಳೊಂದಿಗೆ ಮಿತ್ರರು, ಸಹಕಾರಿಗಳು, ಸಮಾನರು ಹೊಂದಿರಬಹುದಾದ ರೀತಿಯಲ್ಲಿರುತ್ತದೆ. ಏಕೆಂದರೆ ಪೃಥ್ವಿಯ ಮೇಲಿನ ಹೊಸ ಅತಿಮಾನಸ ಸತ್ತೆಗಳಲ್ಲಿ ಅತ್ಯುಚ್ಚ ದೈವೀ ಸಾರ ಪ್ರಕಟವಾಗುವುದು.

ಭೌತದ್ರವ್ಯ ಅತಿಮಾನಸೀಕರಣಗೊಂಡ ನಂತರ, ಪೃಥ್ವಿಯ ಮೇಲೆ ಅವತಾರ ತಾಳುವುದು ಕೀಳರಿಮೆಗೆ ಕಾರಣವಾಗುವುದಿಲ್ಲ, ಅದು ತದ್ವಿರುದ್ಧವಾಗಿರುತ್ತದೆ. ಆ ಅವತಾರ ತಾಳುವಿಕೆ ವೈಶಾಲ್ಯವನ್ನು ಕೊಡುತ್ತದೆ, ಅವತಾರ ತಾಳದಿದ್ದರೆ ಅದನ್ನು ದೊರಕಿಸಲಾಗುವುದಿಲ್ಲ.

**(CWM, 9/149–52)** **– ಶ್ರೀಮಾತೆ**

*

**ಪೃಥ್ವಿಗಾಗಿ ಗೆದ್ದುಕೊಳ್ಳಬೇಕಾದ ಮೂರು ವಿಷಯಗಳು**

ಅಲ್ಲಿ ಮೂರು ತೊಂದರೆಗಳಿವೆ, ಪೃಥ್ವಿಯನ್ನು (ಇದನ್ನು ಕೇವಲ ಬಾಹ್ಯ ದೃಷ್ಟಿಕೋನದಿಂದ ಹೇಳುತ್ತಿದ್ದೇನೆ, ಮನೋವೈಜ್ಞಾನಿಕ ಅಂಶಗಳನ್ನು ಕುರಿತು ನಾನು ಹೇಳುತ್ತಿಲ್ಲ) ತಯಾರು ಮಾಡುವುದಕ್ಕಾಗಿ ಆ ಮೂರು ವಿಷಯಗಳ ಮೇಲೆ ಜಯ ಸಾಧಿಸಬೇಕಾಗಿದೆ ಎಂದು ಶ್ರೀ ಅರವಿಂದರು ನನಗೆ ಹೇಳಿದ್ದರು. ಅವೆಂದರೆ ಸರಕಾರ, ಹಣ ಮತ್ತು ಆರೋಗ್ಯ.

ಈ ಮೂರು ವಿಷಯಗಳಲ್ಲಿ ಆರೋಗ್ಯ ಆಂತರಿಕ ಪರಿವರ್ತನೆಗೆ ನೇರವಾಗಿ ಸಂಬಂಧಿಸಿದೆ, ಆದರೆ ಸಂಪೂರ್ಣವಾಗಿ ಅಲ್ಲ, ಏಕೆಂದರೆ ಅದು ಬಾಹ್ಯದಿಂದ ಬರುವುದರ ಮೇಲೆ ಸತತ ಅವಲಂಬಿಸಿರುತ್ತದೆ: ಪ್ರಭಾವಗಳು, ಕಂಪನಗಳು – ಹೊರಗಿನಿಂದ ಬರುವ ಸಾಂಸರ್ಗಿಕವಾದವುಗಳು. ನೀವು ತಿನ್ನಬೇಕಾಗಿರುತ್ತದೆ: ಆಹಾರದ ಜೊತೆಗೆ ಸ್ವೀಕರಿಸುವುದೆಲ್ಲವೂ ಇರುತ್ತದೆ – ಅದು ಅತಿಯಾದದ್ದು. ತಿನ್ನುವುದು ಗಮನಾರ್ಹ ಕಾರ್ಯವೊಂದನ್ನು ಪ್ರತಿನಿಧಿಸುತ್ತದೆ, – ಭೌತಿಕವಾಗಿ ಜೀರ್ಣಿಸಿಕೊಳ್ಳುವುದು ಏನೂ ಅಲ್ಲ; ಆದರೆ ಉಳಿದದ್ದೆಲ್ಲದರೊಂದಿಗೆ ಹೊಂದಿಕೊಳ್ಳುವಿಕೆ, ಅದನ್ನು ಜೀರ್ಣಿಸಿಕೊಳ್ಳುವಿಕೆ ಗಮನಾರ್ಹವಾಗಿರುತ್ತದೆ. ಪರಿಣಾಮವಾಗಿ ಈ ಮೂರು ವಿಷಯಗಳಲ್ಲಿ ಆರೋಗ್ಯ ಆಂತರಿಕ ಪ್ರಗತಿಯ ಪ್ರಭಾವದಡಿಯಲ್ಲಿ ಅತ್ಯಂತ ನೇರವಾಗಿ ಇರುತ್ತದೆ, ಆದರೆ ನಾನು ಹೇಳಿದ ಹಾಗೆ ಸಂಪೂರ್ಣವಾಗಿ ಅಲ್ಲ. ಆದ್ದರಿಂದ ಅದನ್ನೂ ಕೂಡ ಗೆದ್ದುಕೊಳ್ಳಬೇಕಾಗುತ್ತದೆ.

ಹಣದ ವಿಚಾರ ಕುರಿತು ಹೇಳುವುದಾದರೆ ಶ್ರೀ ಅರವಿಂದರು ಇಲ್ಲಿದ್ದಾಗ ಅದರ ಸಮಸ್ಯೆ ಇರಲಿಲ್ಲ, ಅವಶ್ಯವಾದದ್ದೆಲ್ಲ ಬರುತ್ತಿತ್ತು. ಆದಾಗ್ಯೂ ಕೊನೆಯ ಎರಡು ವರ್ಷಗಳು ಕಠಿಣವಾಗಿ ತೋರಿಬರುತ್ತಿದ್ದವು. ಶ್ರೀ ಅರವಿಂದರು ಹೇಳಿದ್ದು ಹೀಗಿದೆ: "ನಾನು ನಿಮಗೆ ಈಗಾಗಲೆ ಹೇಳಿದ್ದೇನೆ ಎಂದು ನನಗನಿಸುತ್ತದೆ. ಸುತ್ತಲಿರುವ ಜನರ ತಪ್ಪು ಧೋರಣೆಯಿಂದಾಗಿ ಪರಿಣಾಮ ಈ ಬಗೆಯದಾಗಿದೆ, ಈ ತಪ್ಪು ಧೋರಣೆ ಗಮನಾರ್ಹ ಸಮಸ್ಯೆಯನ್ನು ಪ್ರತಿನಿಧಿಸುತ್ತದೆ – ಅದು ಕೆಟ್ಟದ್ದಾಗಿರುವುದರಿಂದ ಇನ್ನೂ ಹೆಚ್ಚು ಕೆಟ್ಟದ್ದಾಗುತ್ತ ನಡೆದಿದೆ, ಅದು ತೀಕ್ಷ್ಣರೂಪದ್ದಾಗಿದೆ."

ಸರಕಾರ ಕುರಿತು ಹೇಳುವುದಾದರೆ, ಅದು ವಿರುದ್ಧ ದಿಶೆಯಲ್ಲಿ ವಕ್ರಗತಿಯನ್ನು ಅನುಸರಿಸುತ್ತಿತ್ತು. ಪ್ರಾರಂಭದಲ್ಲಿ ಅದು ಭಯಾನಕ ರೀತಿಯಲ್ಲಿ ಪ್ರತಿಕೂಲವಾಗಿತ್ತು. ಇಲ್ಲಿ ಸರಳವಾಗಿ ಉಳಿದುಕೊಳ್ಳಲು ಪ್ರತಿ ನಿಮಿಷ ನಾವು

ಹೋರಾಡಬೇಕಾಗುತ್ತಿತ್ತು. ಶ್ರೀ ಅರವಿಂದರು ಹೇಳಿದರು: "ಆರೋಗ್ಯ ಮತ್ತು ಹಣ ಇವು ಬಹುಶಃ ಒಮ್ಮೆಗೆ ದಾರಿಮಾಡಿಕೊಂಡು ಬರಬಹುದು. ಆರೋಗ್ಯ ಮೊದಲಿಗೆ, ನಂತರ ಹಣ ಬರಬಹುದು. ಸರಕಾರ ಕುರಿತು ಹೇಳುವುದಾದರೆ ಅದಕ್ಕೆ ಒಂದೇ ಪರಿಹಾರವಿದೆ: ಅದು ಸರಕಾರವಾಗುವುದಾಗಿದೆ." ನೀವು ಸರಕಾರ ಆಗದೆ ಹೋದರೆ, ಅದನ್ನು ನೀವು ಎಂದಿಗೂ ಗೆದ್ದುಕೊಳ್ಳಲು ಸಮರ್ಥರಾಗುವುದಿಲ್ಲ, ಪೃಥ್ವಿ ಪರಿವರ್ತನೆಗೊಳಗಾಗುವವರೆಗೆ ಅದು ಹೀಗೇ ಇರುತ್ತದೆ – ನಂತರ ಯಾವ ಸರಕಾರವೂ ಉಳಿದುಕೊಂಡಿರುವುದಿಲ್ಲ. ...

ಸರಕಾರ, ಹಣ ಹಾಗೂ ಆರೋಗ್ಯ ಇವುಗಳ ಪ್ರಾಂತಗಳಲ್ಲಿ ವಿಷಯಗಳು ಯಾವಾಗಲೂ ಒಂದು ಹಂತವನ್ನು ತಲುಪುತ್ತವೆ, ಆ ಹಂತ ಉದ್ವಿಗ್ನತೆ, ತೊಡಕುಗಳಿರುವ ಎಂತಹ ಹಂತವಾಗಿರುತ್ತದೆಂದರೆ ನಿಮ್ಮಲ್ಲಿ ಆಂತರಿಕ ನಿಶ್ಚಿತತೆ ಇರದೆ ಹೋದರೆ ಅವು ಯಾವಾಗಲೂ ಸರಳವಾಗಿ ಅನಾಹುತವೊಂದರತ್ತ, ಬೊಟ್ಟುಮಾಡಿ ತೋರಿಸುತ್ತವೆ. ಮತ್ತು ಯಾವಾಗಲೂ ಅಂತಹ ಹಂತವಿದ್ದಾಗ (ಥಟ್ಟನೆ ಹಿಮ್ಮೊಗವಾಗುವಿಕೆಯ ಸೂಚನೆ) ಪ್ರತಿಯೊಂದೂ ಹೊರಳಿಕೊಳ್ಳುತ್ತದೆ – ಅದಕ್ಕೂ ಮೊದಲಲ್ಲ, ಒಂದು ನಿಮಿಷ ಕೂಡ ಮೊದಲಲ್ಲ.

**(ಅನುಯಾಯಿಯೊಂದಿಗೆ ಮಾತುಕತೆ, ಅಕ್ಟೋಬರ 19/1963) – ಶ್ರೀಮಾತೆ**

*

**ಹೊಸ ಜಗತ್ತಿನಲ್ಲಿ ಸ್ತ್ರೀಯರು**

ಶ್ರೇಷ್ಠ ಘಟನೆಗಳು ಹಾಗೂ ಕಾರ್ಯಗಳ ಪ್ರಶ್ನೆಯಿರುವಾಗ ರೂಢಿಯಲ್ಲಿರುವುದೇನೆಂದರೆ ಮುಗುಳ್ನಗುತ್ತ ಸ್ತ್ರೀಯರನ್ನು ಅನುಗ್ರಹ ರೀತಿಯ ತಾತ್ಸಾರದೊಂದಿಗೆ ಒಂದು ಮೂಲೆಗೆ ತಳ್ಳಿಬಿಡುವುದಾಗಿದೆ, ಅದರರ್ಥ: ಇದು ನಿಮಗೆ, ಎಂದರೆ ಬಡ, ದುರ್ಬಲ, ಪ್ರಯೋಜನವಿಲ್ಲದ ಜೀವಿಗಳಿಗೆ ಸರಿಯಾದ ಕಾರ್ಯವಲ್ಲ ಎಂದು ಹೇಳುವುದಾಗಿದೆ. ...

ಅಧೀನತೆಗೆ ಒಳಪಡುವ, ಶಿಶುಸದೃಶ, ಬಹುಶಃ ಆಲಸಿ ಸ್ತ್ರೀಯರು ಬಹಳಷ್ಟು ದೇಶಗಳಲ್ಲಿ ಈ ಶೋಚನೀಯ ಸ್ಥಿತಿಯನ್ನು ಒಪ್ಪಿಕೊಂಡಿದ್ದಾರೆ. ಅವರು ತಪ್ಪು ಮಾಡುತ್ತಿದ್ದಾರೆ ಎಂದು ನಾನು ಧೈರ್ಯದಿಂದ ಹೇಳುತ್ತೇನೆ. ಭವಿಷ್ಯತ್ತಿನ ಜೀವನದಲ್ಲಿ ಇನ್ನು ಮುಂದೆ ಇಂತಹ ವಿಭಜನೆಗೆ ಸ್ಥಾನವಿರುವುದಿಲ್ಲ, ಸ್ತ್ರೀ ಜಾತಿ, ಪುರುಷ ಜಾತಿ ಇವುಗಳ ನಡುವೆ ಇಂತಹ ವಿಭಜನೆ ಇರುವುದಿಲ್ಲ. ಎರಡೂ ಲಿಂಗಗಳ ಸಂಬಂಧ ಪರಸ್ಪರ ಸಹಾಯ ಹಾಗೂ ನಿಕಟ ಸಹಕಾರ

ಇವುಗಳಿರುವ ಸಮಾನ ಸ್ಥಾನಮಾನದ್ದು. ಮತ್ತು ಇಂದಿನಿಂದ ನಾವು (ಸ್ತ್ರೀಯರು) ನಮ್ಮ ದಿಟ್ಟವಾದ ಸ್ಥಾನವನ್ನು ಮರಳಿ ಪಡೆಯಬೇಕು. ನಮ್ಮ ಹಕ್ಕಿನ ಸ್ಥಾನವನ್ನು ಕೈಗೆತ್ತಿಕೊಳ್ಳಬೇಕು, ನಿಜವಾದ ಮಹತ್ವವನ್ನು ಸಮರ್ಥಿಸಿಕೊಳ್ಳಬೇಕು – ಆ ಮಹತ್ವ ಆಧ್ಯಾತ್ಮಿಕ ರೂಪ ಕೊಡುವವರ ಹಾಗೂ ಶಿಕ್ಷಣ ನೀಡುವವರ ಮಹತ್ವವಾಗಿದೆ. ತಮ್ಮ ಅನುಕೂಲತೆಗಳೆಂದು ಕರೆಯಬಹುದಾದವುಗಳ ಬಗ್ಗೆ ಬಹುಶಃ ಸ್ವಲ್ಪ ಒಣಜಂಬವಿರುವ ಕೆಲವು ಜನರು ಸ್ತ್ರೀಯರಲ್ಲಿ ತೋರಿಬರುವ ದೌರ್ಬಲ್ಯಗಳನ್ನು ಕೀಳಾಗಿ ಕಾಣಬಹುದು (ಆದಾಗ್ಯೂ ಈ ಬಾಹ್ಯ ದೌರ್ಬಲ್ಯ ಬಹಳ ನಿಶ್ಚಿತವಾಗಿರುವುದಿಲ್ಲ) ಆದರೆ: "ಅವನೇನೇ ಕೈಕೊಳ್ಳಲಿ, ಆದರೆ ಅತಿಮಾನವ ಸ್ತ್ರೀಯ ಮೂಲಕ ಜನಿಸಿ ಬರಬೇಕಾಗಿರುವದಿಲ್ಲವೆ" ಎಂದು ಯಾರೋ ಒಬ್ಬರು ಸರಿಯಾಗಿಯೇ ಹೇಳಿದ್ದಾರೆ.

ಅತಿಮಾನವ ಸ್ತ್ರೀಯ ಮೂಲಕ ಜನಿಸಿ ಬರುತ್ತಾನೆ ಎಂಬುದು ಪ್ರಶ್ನಾತೀತವಾದ ಸತ್ಯ, ಆದರೆ ಸತ್ಯ ಕುರಿತು ಸ್ತ್ರೀ ಅಭಿಮಾನಪಟ್ಟುಕೊಂಡರೆ ಸಾಲದು, ಅದರರ್ಥ ಏನೆಂಬುದನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕು, ಅದು ಸೃಷ್ಟಿಸುವ ಜವಾಬ್ದಾರಿಯ ಬಗ್ಗೆ ಅರಿವುಳ್ಳವರಾಗಬೇಕು, ಮತ್ತು ನಮ್ಮ ಮುಂದಿರಿಸಲಾದ ಕಾರ್ಯವನ್ನು ಶ್ರದ್ಧೆಯಿಂದ ಎದುರಿಸುವುದನ್ನು ಕಲಿತುಕೊಳ್ಳಬೇಕು. ಈ ಕಾರ್ಯ ಸದ್ಯದ ಜಗತ್ತಿನ ಅಗಲದಾದ್ಯಂತ ಇರುವ ಕಾರ್ಯದಲ್ಲಿ ನಮ್ಮ ಅತ್ಯಂತ ಮಹತ್ವದ ಪಾಲಾಗಿದೆ.

**(CWM, 2/159)** **– ಶ್ರೀಮಾತೆ**

*

**ಸ್ತ್ರೀ ಸಮಾನತಾವಾದದ ಸಮಸ್ಯೆ**

ಸ್ತ್ರೀ ಸಮಾನತಾವಾದದ ಸಮಸ್ಯೆ, ಉಳಿದೆಲ್ಲ ಸಮಸ್ಯೆಗಳಿಗೆ ಕೈಕೊಳ್ಳಬೇಕಾದ ಹಾಗೆ, ಆಧ್ಯಾತ್ಮಿಕ ಸಮಸ್ಯೆಯ ಹಿಂದೆ ಬರಬೇಕಾಗುತ್ತದೆ. ಏಕೆಂದರೆ ಆಧ್ಯಾತ್ಮಿಕ ನೈಜತೆ ಉಳಿದೆಲ್ಲ ನೈಜತೆಗಳ ಆಧಾರದಲ್ಲಿರುತ್ತದೆ. ದೈವೀ ಜಗತ್ತು, ಬೌದ್ಧ ಮತದ ಧಮ್ಮಪದ ಸನಾತನ ತಳಹದಿಯಾಗಿದೆ, ಅದರ ಮೇಲೆ ಉಳಿದೆಲ್ಲ ಲೋಕಗಳನ್ನು ನಿರ್ಮಿಸಲಾಗಿದೆ. ಪರಮೋಚ್ಚ ನೈಜತೆಗೆ ಸಂಬಂಧಿಸಿದಂತೆ ಪುರುಷರು, ಸ್ತ್ರೀಯರು ಹೀಗೆ ಎಲ್ಲರೂ ಹಕ್ಕುಗಳಲ್ಲಿ, ಕರ್ತವ್ಯಗಳಲ್ಲಿ ಸಮಾನರು, ಈ ಪ್ರಾಂತದಲ್ಲಿ ಉಳಿದುಕೊಳ್ಳಬಹುದಾದ ಒಂದೇ ಭಿನ್ನತೆ ಅಭೀಪ್ಸೆಯ ನಿಷ್ಕಾಪಟ್ಯ ಹಾಗೂ ಉತ್ಸಾಹ ಮತ್ತು ಸಂಕಲ್ಪದ ಸಾತತ್ಯ ಇವುಗಳ ಆಧಾರದಲ್ಲಿರುತ್ತದೆ.

ಲಿಂಗಗಳ ಸಂಬಂಧದ ಈ ಸಮಸ್ಯೆಗೆ ಗಂಭೀರ ಹಾಗೂ ಉಳಿದುಕೊಳ್ಳುವ ಏಕೈಕ ಪರಿಹಾರವನ್ನು ಈ ಮೂಲಭೂತ ಆಧ್ಯಾತ್ಮಿಕ ಸಮಾನತೆಯನ್ನು ಗುರುತಿಸುವುದರಲ್ಲಿ ಕಂಡುಕೊಳ್ಳಬಹುದು. ಈ ಪ್ರಕಾಶದಲ್ಲಿ ಅದನ್ನಿರಿಸಬೇಕು, ಈ ಎತ್ತರದಲ್ಲಿ ಕ್ರಿಯೆಯ ಕೇಂದ್ರೀಕರಣ ಹಾಗೂ ಹೊಸ ಜೀವನ ಇವುಗಳನ್ನು ಅರಸಬೇಕು, ಅದರ ಸುತ್ತ ಮನುಕುಲದ ಭವಿಷ್ಯತ್ತಿನ ಮಂದಿರವನ್ನು ರಚಿಸಲಾಗುವುದು.

**(CWM, 2/150)** **– ಶ್ರೀಮಾತೆ**

*

**ಮದುವೆಯನ್ನು ಕುರಿತು ಸ್ಥಾಪನೆಗೊಂಡ ಸಂಪ್ರದಾಯದ ಕೊನೆ**

ಸಹಜವಾಗಿ, ಮದುವೆ ಕುರಿತು ಇರುವ ವಿಚಾರ ಮೋಜಿನದಾಗಿದೆ, ಏಕೆಂದರೆ ನಾನು ಅದನ್ನು ಬಾಲಿಶ ಎಂದು ಪರಿಗಣಿಸುತ್ತೇನೆ.

ನಿಮಗೆ ತಿಳಿದ ಹಾಗೆ ಅರೋವಿಲೆಯಲ್ಲಿ ಮದುವೆ ಮಾಡಿಕೊಳ್ಳುವು–ದಿರುವುದಿಲ್ಲ, ಒಬ್ಬ ಪುರುಷ, ಓರ್ವ ಸ್ತ್ರೀ ಪರಸ್ಪರರನ್ನು ಪ್ರೀತಿಸುತ್ತಿದ್ದರೆ ಮತ್ತು ಒಟ್ಟಿಗೆ ಜೀವಿಸಲು ಬಯಸುತ್ತಿದ್ದರೆ ಅವರು ಯಾವ ಸಮಾರಂಭದ ಆವಶ್ಯಕತೆ ಇಲ್ಲದೆ ಹಾಗೆ ಮಾಡಬಹುದು. ಅವರು ಪ್ರತ್ಯೇಕಗೊಳ್ಳಲು ಬಯಸಿದರೆ ಅದನ್ನು ಮುಕ್ತ ರೀತಿಯಲ್ಲಿ ಕೈಕೊಳ್ಳಬಹುದು. ಪರಸ್ಪರರಲ್ಲಿ ಪ್ರೇಮ ಇಲ್ಲದೆ ಇದ್ದಾಗ ಅವರು ಒಟ್ಟಿಗೆ ಜೀವಿಸುವ ಒತ್ತಾಯಕ್ಕೆ ಏಕೆ ಒಳಗಾಗಬೇಕು?

ಜನರು ಈ ವಿಷಯದಲ್ಲಿ ಸ್ವತಂತ್ರರಾಗಿದ್ದರೆ ಬಹಳಷ್ಟು ಅಪರಾಧಗಳನ್ನು ತಡೆಯಬಹುದು. ಜನರು ಪರಸ್ಪರರಲ್ಲಿ ವಿಷಯಗಳನ್ನು ಅಡಗಿಸಿಡುವ ಆವಶ್ಯಕತೆ ಇರುವುದಿಲ್ಲ, ಇಲ್ಲವೆ ಅಪರಾಧಗಳನ್ನು ಮಾಡಿ ಪ್ರತ್ಯೇಕಗೊಳ್ಳುವುದಿರುವುದಿಲ್ಲ, ಸಹಜವಾಗಿ ಅವರು ಪರಸ್ಪರರನ್ನು ಪ್ರೀತಿಸುತ್ತಿದ್ದರೆ, ಯಾವಾಗಲೂ, ಯಾವ ಕಾಯ್ದೆಯ ನಿರ್ಬಂಧಕ್ಕೊಳಗಾಗದೆ ಒಟ್ಟಿಗೆ ಸ್ವಾಭಾವಿಕವಾಗಿ ಜೀವಿಸಬಲ್ಲರು. ಆ ಕಾರಣದಿಂದಾಗಿಯೆ ಮದುವೆಯ ಸಮಾರಂಭ ಹಾಗೂ ವ್ರತಾಚರಣೆ ಅಷ್ಟೊಂದು ಬಾಲಿಶ ಎನಿಸುತ್ತದೆ.

ಅರೋವಿಲೆಯಲ್ಲಿ ಜನಿಸಿದ ಮಕ್ಕಳಿಗೆ ಕುಟುಂಬಕ್ಕೆ ಸಂಬಂಧಿಸಿದ ಹೆಸರಿರುವುದಿಲ್ಲ. ಅವರಿಗೆ ಕೇವಲ ಇಟ್ಟ ಮೊದಲ ಹೆಸರಿರುತ್ತದೆ.

**(CWM, 13/26)** **– ಶ್ರೀಮಾತೆ**

*

**ನಂಟಸ್ತಿಕೆಯ ಒಂದು ಹೊಸ ಹಾಗೂ ಹೆಚ್ಚು ನಿಜವಾದ ಆಧಾರ**

(ಮದುವೆಯನ್ನು ಕುರಿತು ಕೆಳಗೆ ಕೊಡಲಾದ ಅವರ ಪತ್ರವನ್ನು ಮೇಲೆ ಕೊಡಲಾದ ಹೇಳಿಕೆಯೊಂದಿಗೆ ಪ್ರಕಟಿಸಬೇಕೆಂದು ಶ್ರೀಮಾತೆಯವರು ಸೂಚಿಸಿದ್ದರು.)

ನಿಮ್ಮ ಭೌತಿಕ ಜೀವನಗಳನ್ನು, ಪ್ರಾಪಂಚಿಕ ಅಭಿರುಚಿಗಳನ್ನು ಏಕವಾಗಿಸಲು, ಜೀವನದಲ್ಲಿ ಬರುವ ತೊಂದರೆಗಳನ್ನು ಹಾಗೂ ಯಶಸ್ಸುಗಳನ್ನು ಒಟ್ಟಿಗೆ ಎದುರಿಸಲು ಪಾಲುಗಾರರಾಗುವುದು – ಅದು ಮದುವೆಯ ತಳಹದಿ, ಆದರೆ ಅದಷ್ಟೇ ಸಾಕಾಗುವುದಿಲ್ಲ ಎಂಬುದು ನಿಮಗೆ ಈಗಾಗಲೆ ತಿಳಿದಿದೆ.

ನಿಮ್ಮ ಸಂವೇದನೆಗಳಲ್ಲಿ ಏಕವಾಗಿರುವುದು, ಒಂದೇ ಬಗೆಯ ಸೌಂದರ್ಯಾಭಿರುಚಿಯ ಸ್ವಾದಗಳನ್ನು, ಸಂತೋಷಗಳನ್ನು ಹೊಂದಿರುವುದು, ಒಂದೇ ಬಗೆಯ ವಿಷಯಗಳನ್ನು ಕುರಿತು ಕಾರ್ಯಪ್ರವೃತ್ತರಾಗುವುದು, ಒಬ್ಬರ ಮೂಲಕ ಒಬ್ಬರು, ಒಬ್ಬರಿಗಾಗಿ ಒಬ್ಬರು – ಅದು ಒಳ್ಳೆಯದು, ಅದು ಅವಶ್ಯವಾದದ್ದು, ಆದರೆ ಅದು ಸಾಕಷ್ಟಾಗದು.

ನಿಮ್ಮ ಆಳಾತಿ ಆಳದ ಭಾವನೆಗಳಲ್ಲಿ ಒಂದಾಗಿರುವುದು, ಪರಸ್ಪರರಲ್ಲಿ ಸೌಹಾರ್ದವಿರುವುದು ಮತ್ತು ಕೋಮಲತೆ ಇರುವುದು, ಜೀವನದಲ್ಲಿ ಹೊಡೆತಗಳೇನೇ ಇರಲಿ, ಆ ಭಾವನೆಗಳಲ್ಲಿ ವ್ಯತ್ಯಾಸ ಉಂಟಾಗದೇ ಇರುವುದು, ಪ್ರತಿಯೊಂದು ಬಳಲಿಕೆ, ಕೋಪೋದ್ರೇಕ ಹಾಗೂ ನಿರಾಶೆ ಇವುಗಳನ್ನೆಲ್ಲ ತಾಳಿಕೊಳ್ಳುವುದು, ಯಾವಾಗಲೂ ಎಲ್ಲ ಸಂದರ್ಭಗಳಲ್ಲೂ ಹೆಚ್ಚಿನ ಸಂತೋಷದಿಂದಿರುವುದು, ಒಟ್ಟಿಗಿರುವುದು, ಪ್ರತಿಯೊಂದು ಪರಿಸ್ಥಿತಿಯಲ್ಲಿ ಪರಸ್ಪರರಲ್ಲಿ ಪ್ರಶಾಂತತೆ, ಶಾಂತಿ, ಸಂತೋಷಗಳನ್ನು ಕಂಡುಕೊಳ್ಳುವುದು – ಅದೆಲ್ಲ ಹೆಚ್ಚು ಒಳ್ಳೆಯದು, ಅನಿವಾರ್ಯವಾದದ್ದು, ಆದರೆ ಅದಷ್ಟೇ ಸಾಕಾಗದು.

ನಿಮ್ಮ ಮನಸ್ಸುಗಳನ್ನು ಏಕವಾಗಿಸುವುದು, ನಿಮ್ಮ ಯೋಚನೆಗಳಲ್ಲಿ ಸಾಮರಸ್ಯವನ್ನು ತರುವುದು ಮತ್ತು ಅವು ಒಂದಕ್ಕೊಂದು ಪೂರಕವಾಗುವಂತೆ ಮಾಡುವುದು, ನಿಮ್ಮ ಬೌದ್ಧಿಕ ಪೂರ್ವಮಗ್ನತೆಗಳನ್ನು ಹಾಗೂ ಶೋಧಗಳನ್ನು ಹಂಚಿಕೊಳ್ಳುವುದು, ಸ್ವಲ್ಪದರಲ್ಲಿ ಹೇಳುವುದಾದರೆ ನಿಮ್ಮ ಮಾನಸಿಕ ಚಟುವಟಿಕೆಯ ಗೋಲವನ್ನು (sphere) ಶ್ರೀಮಂತಗೊಳಿಸುವುದರಿಂದ ಇಬ್ಬರೂ ದೊರಕಿಸಿದ್ದನ್ನು ಏಕರೂಪದ್ದನ್ನಾಗಿಸುವುದು – ಅದು ಅತ್ಯಂತ ಒಳ್ಳೆಯದು, ಆದರೆ ಅದಷ್ಟೇ ಸಾಕಾಗದು.

ಅದೆಲ್ಲದರಾಚೆಗೆ ಆಳಗಳಲ್ಲಿ, ಕೇಂದ್ರದಲ್ಲಿ, ಸತ್ತೆಯ ತುತ್ತತುದಿಯಲ್ಲಿ ಸತ್ತೆಯ ಪರಮೋಚ್ಚ ಸತ್ಯವಿದೆ, ಸನಾತನನ ದೈವೀ ಪ್ರಕಾಶವಿದೆ, ಜನ್ಮದ ಎಲ್ಲ ಪರಿಸ್ಥಿತಿಗಳಿಂದ ಎಂದರೆ ಜನ್ಮತಾಳುವಿಕೆ, ಜನ್ಮತಾಳಿದ ದೇಶ, ಪರಿಸರ ಹಾಗೂ ಶಿಕ್ಷಣ ಇವೆಲ್ಲವುಗಳಿಂದ ಅದು ಸ್ವತಂತ್ರವಾಗಿದೆ. ಅದೇ ನಮ್ಮ ಆಧ್ಯಾತ್ಮಿಕತೆಯ ಅಭಿವೃದ್ಧಿಯ ಮೂಲ, ಕಾರಣ ಹಾಗೂ ಪ್ರಭು; ಅದೇ ನಮ್ಮ ಜೀವನಗಳಿಗೆ ಶಾಶ್ವತ ನಿರ್ದೇಶನವನ್ನು ಕೊಡುತ್ತದೆ, ಅದೇ ನಮ್ಮ ಅದೃಷ್ಟಗಳನ್ನು ನಿರ್ಧರಿಸುತ್ತದೆ, ಅದು ನೀವು ಏಕಗೊಳ್ಳಬೇಕಾದ 'ತತ್'ದಲ್ಲಿದೆ. ಅಭೀಪ್ಸೆಯಲ್ಲಿ ಹಾಗೂ ಆರೋಹಣದಲ್ಲಿ ಏಕವಾಗಿರುವುದು, ಅದೇ ಆಧ್ಯಾತ್ಮಿಕ ಮಾರ್ಗದಲ್ಲಿ ಒಂದೇ ಗತಿಯಿಂದ ಮುಂದೆ ಸಾಗಿಹೋಗುವುದು – ಅದು ಉಳಿದುಕೊಳ್ಳುವ ಏಕತೆಯ ರಹಸ್ಯವಾಗಿರುತ್ತದೆ.

**(CWM, 13/236–37)** **– ಶ್ರೀಮಾತೆ**

*

**ಹೊಸ ಬಗೆಯ ಹೊರಹೊಮ್ಮುವಿಕೆ**

ಸಾಧ್ಯವಿದ್ದ ಎಲ್ಲ ಸಂಯೋಜನೆಗಳಲ್ಲಿ ಹೊಸ ಅಂಶವೊಂದನ್ನು ಮುಂದಿರಿಸಿದ ಪ್ರತಿಸಲ, ಅದು ಮಿತಿಗಳಲ್ಲಿ ಒಂದು ಬಗೆಯ ಹರಿದುಹಾಕುವಿಕೆಗೆ ಕಾರಣವಾಗುತ್ತದೆ. ಅದು ಗತಕಾಲದ ಎಲ್ಲ ಮಿತಿಗಳು ಮಾಯವಾಗುವಂತೆ, ಹೊಸ ಸಾಧ್ಯತೆಗಳು ಒಳಗೆ ಬಂದು ಹಳೆಯ ಸಾಧ್ಯತೆಗಳು ಅನಂತಪಟ್ಟು ಅನೇಕವಾಗುವಂತೆ ಮಾಡಿ ಮುಂದಿರಿಸುವಿಕೆಯಾಗಿರುತ್ತದೆ. ನಿಮ್ಮ ಒಂದು ಜಗತ್ತಿತ್ತು, ಅದರಲ್ಲಿ ಪ್ರಾಚೀನ ಕಾಲದ ಜ್ಞಾನದ ಪ್ರಕಾರ ಹನ್ನೆರಡು ಆಳಗಳಿದ್ದವು, ಇಲ್ಲವೆ – ಅದನ್ನು ಹೇಳುವುದು ಹೇಗೆ? – ಒಂದರ ನಂತರ ಒಂದರಂತೆ ಬರುವ ಹನ್ನೆರಡು ಆಯಾಮಗಳಿದ್ದವು. ಮತ್ತು ಹನ್ನೆರಡು ಆಯಾಮಗಳಿರುವ ಈ ಜಗತ್ತಿನಲ್ಲಿ, ಒಮ್ಮೆಗೆ ಹೊಸ ಆಯಾಮಗಳನ್ನು ಎಸೆದು ಬಿಡಲಾಯಿತು. ಆಗ ಎಲ್ಲ ಹಳೆಯ ಸೂತ್ರಗಳು ತತ್ಕ್ಷಣ ಪರಿವರ್ತನೆಗೊಳಗಾದವು ಮತ್ತು ಹಳೆಯ ರೀತಿಯಲ್ಲಿ ತೆರೆದುಕೊಳ್ಳುತ್ತಿದ್ದುದರ ಸಾಧ್ಯತೆಯು ಹೆಚ್ಚಿಕೊಂಡಿತು ಎಂದು ಹೇಳಲಾಗದು, ಆದರೆ ಬಹುಮಟ್ಟಿಗೆ ಅನಂತ ಸಂಖ್ಯೆಯಲ್ಲಿ ಹೊಸ ಸಾಧ್ಯತೆಗಳು ಪೂರಕವಾಗಿ ಸೇರಿಕೊಂಡ ರೀತಿಯದಾಗುವುದು ಮತ್ತು ಇದೆಲ್ಲ ಹೇಗಾಯಿತೆಂದರೆ ಹೊಸ ತರ್ಕದ ಸಾನ್ನಿಧ್ಯದಲ್ಲಿ ಹಳೆಯದೆಲ್ಲವೂ ತರ್ಕರಹಿತವಾಯಿತು. ....

ಒಟ್ಟಿನಲ್ಲಿ ಪರಿಮಿತಗೊಳಿಸಿದ, ಬಾಹ್ಯ ಜಗತ್ತಿಗೆ ಸೇರಿದ ಮತ್ತು ಸೀಮಿತ ದೃಷ್ಟಿಕೋನದಿಂದ ಈಗ ನಾನು ನಿಮ್ಮ ಬಳಿ ಕೆಲವು ವಿಷಯಗಳನ್ನು ಕುರಿತು ಮಾತನಾಡುತ್ತೇನೆ, ಆ ವಿಷಯಗಳು ನನ್ನ ಅನುಭವಕ್ಕೆ ಬಂದವುಗಳಲ್ಲ, ಆದರೆ ಅವುಗಳ ಬಗ್ಗೆ ನಾನು ಕೇಳಿದ್ದೇನೆ. ಉದಾಹರಣೆಗೆ ವಯಸ್ಸಿಗೆ ಮೀರಿದ ಪ್ರೌಢಿಮೆಯನ್ನು ತೋರಿಸುವ ಮಕ್ಕಳು (child prodigy) ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬ ವಿಷಯ. ನಾನು ಅಂತಹರನ್ನು ಭೇಟಿ ಮಾಡಿಲ್ಲ. ಹಾಗಾಗಿ ಇಂತಹ ಮಕ್ಕಳಲ್ಲಿ ನಿಜವಾಗಿ ಅಸಾಧಾರಣವಾದದ್ದು ಏನಿದೆ ಎಂಬುದನ್ನು ಕುರಿತು ಹೇಳಲಾರೆ. ಆದಾಗ್ಯೂ ಹೇಳಲಾದ ಕೆಲವೊಂದು ಕತೆಗಳ ಪ್ರಕಾರ ಅಲ್ಲಿ ಸ್ಪಷ್ಟವಾಗಿ ಒಂದು ಬಗೆಯ ಹೊಸ ಮಾದರಿಗಳಿವೆ, ಅವು ಸಾಮಾನ್ಯ ಮಾನವ ಪ್ರಜ್ಞೆಗೆ ಆಶ್ಚರ್ಯಕಾರಕವೆಂದು ತೋರಿಬರುತ್ತವೆ. ಈ ಬಗೆಯ ಉದಾಹರಣೆಗಳನ್ನು ನಾವು ಅರಿತುಕೊಳ್ಳಲು ಬಯಸುತ್ತೇವೆ, ಅದರಿಂದಾಗಿ ಸಂಭವಿಸುತ್ತಿರುವುದನ್ನು ತಿಳಿದುಕೊಳ್ಳಬಹುದು. ಆದರೆ ವಾಸ್ತವದಲ್ಲಿ ನಾವು ಗಮನಿಸುವ ರೂಢಿಯನ್ನಿರಿಸಿಕೊಂಡಿರದ ಸಂಗತಿಗಳು ಸಂಭವಿಸುತ್ತಿರಬಹುದು. ಆದರೆ ಅದು ವಿವರಣೆಯನ್ನು ಒದಗಿಸುವುದರ ಪ್ರಶ್ನೆಯಾಗಿದೆ. ನಾನು ಇದೀಗ ಹೇಳಿದುದರ ಬಗ್ಗೆ ಮಾತ್ರ ನನಗೆ ನಿಶ್ಚಿತತೆಯಿದೆ, ವಿಶ್ವದಲ್ಲಿ ಸಂಯೋಜನೆಗಳ ಗುಣಮಟ್ಟ, ಸಂಖ್ಯೆ ಮತ್ತು ಸ್ವಭಾವ ಇವೆಲ್ಲ ಒಮ್ಮೆಗೆ ಎಷ್ಟೊಂದು ಅಸಾಧಾರಣವಾಗಿ ಬದಲಾಗಲಿವೆ ಎಂದರೆ, ಅದು ಬಹುಶಃ ಆ ವಿಷಯವನ್ನು ಕುರಿತು ಸಂಶೋಧನೆ ಮಾಡುವವರಿಗೆ ದಿಗ್ಭ್ರಮೆಯನ್ನುಂಟು ಮಾಡಬಹುದು.

**(CWM, 8/313–14) – ಶ್ರೀಮಾತೆ**

*

**ಹೊಸ ಅರುಣೋದಯದ ಮಕ್ಕಳು**

ನಾನು ಬುಧವಾರ ನಡೆಸಿಕೊಡುವ ಪಾಠ ಪ್ರವಚನಗಳ ವರ್ಗದಲ್ಲಿ ವಯಸ್ಸಿಗೆ ಮೀರಿದ ಪ್ರೌಢಿಮೆ ಇರುವ ಮಕ್ಕಳನ್ನು ಕುರಿತು ಮಾತನಾಡಿದೆ. ಅಂತಹ ಮಕ್ಕಳ ಸಂಖ್ಯೆ ಹೆಚ್ಚುತ್ತ ಹೋಗುತ್ತಿದೆ ಎಂದು ಕೆಲವರು ಹೇಳುತ್ತಾರೆ – ಅಮೇರಿಕಾದ ಜನರೂ ಇದನ್ನು ಕುರಿತು ಮಾತನಾಡುತ್ತಾರೆ – ಅದಕ್ಕೆ ಕಾರಣ ಶ್ರೀ ಅರವಿಂದರು ಕೈಕೊಂಡ ಕಾರ್ಯದ ಪ್ರಭಾವ ಎಂದು ಕೆಲವರು ಹೇಳುತ್ತಾರೆ, ಇನ್ನು ಕೆಲವರು ಅಟಮ್ ಬಾಂಬ್‌ಗಳ ಸ್ಫೋಟದಿಂದಾದ ಪರಿಣಾಮ ಎಂದು

ಹೇಳುತ್ತಾರೆ. ಆದರೆ ವಾಸ್ತವ ಸಂಗತಿ ಎಂದರೆ ಅಂತಹ ಮಕ್ಕಳ ಸಂಖ್ಯೆ ಸುಮಾರಾಗಿ ಹೆಚ್ಚಾಗಿದೆ ಎಂಬುದು. ಅದನ್ನು ಕುರಿತು ಹೆಚ್ಚಿನ ವಿವರ ಕೊಡುವ ರೀತಿಯಲ್ಲಿ ನಾನು ಮಾತನಾಡಲಿಲ್ಲ. ಏಕೆಂದರೆ ನನ್ನ ಬಳಿ ಪ್ರತ್ಯಕ್ಷ ಪ್ರಮಾಣಗಳಿರಲಿಲ್ಲ ಎಂದರೆ ಕೊಡಲು ನನ್ನ ಬಳಿ ಒಳ್ಳೆಯ ಉದಾಹರಣೆಗಳಿರಲಿಲ್ಲ. ನಂತರ ಸಂಭವಿಸಿದ್ದೇನೆಂದರೆ, ಯಾರೋ ಒಬ್ಬರು ಫ್ರಾನ್ಸದಲ್ಲಿ ಎಂಟು ವರ್ಷದ ಬಾಲಕಿಯೊಬ್ಬಳು ಬರೆದ ಪುಸ್ತಕವನ್ನು ನನಗೆ ತಂದುಕೊಟ್ಟರು. ಅಂತಹ ಸಾಧ್ಯತೆಯನ್ನು ಅಲ್ಲಗಳೆಯುವ ಕೆಲವು ಜನರಿದ್ದಾರೆ. ಇಂತಹದು ಹೇಗೆ ಸಾಧ್ಯವಾಯಿತು ಎಂಬುದನ್ನು ನಂತರ ವಿವರಿಸಿ ಹೇಳುತ್ತೇನೆ. ಎಂಟು ವರ್ಷದ ಬಾಲಕಿ ಬರೆದ ಆ ಪುಸ್ತಕ ಗಮನಾರ್ಹವಾಗಿದೆ. ಇದರರ್ಥ ಆ ಬಾಲಕಿಯ ವಯಸ್ಸು ತಿಳಿದಿರದೆ ಇದ್ದರೆ ಆ ಪುಸ್ತಕವನ್ನು ಅದ್ಭುತ ಎಂದು ಪರಿಗಣಿಸಲಾಗುತ್ತಿರಲಿಲ್ಲ ಎಂದಲ್ಲ. ಆದರೆ ಅಲ್ಲಿ, ಇಲ್ಲಿ ಆಶ್ಚರ್ಯಕಾರಕ ಎನಿಸುವ ವಾಕ್ಯಗಳಿವೆ, ಅವುಗಳನ್ನು ನಾನು ಟಿಪ್ಪಣಿ ಮಾಡಿ ಇಟ್ಟುಕೊಂಡಿದ್ದೇನೆ. ಮತ್ತು ಅವುಗಳನ್ನು ನಾನು ನಿಮಗೆ ಓದಿ ಹೇಳುವವಳಿದ್ದೇನೆ.

(ಶ್ರೀಮಾತೆಯವರು ತಮ್ಮ ಪುಸ್ತಕದಲ್ಲಿರುವ ಪ್ರಧಾನ ಅಂಶಗಳತ್ತ ಗಮನ ಹರಿಸುತ್ತಾರೆ.) ಒಂದು ಚಿಕ್ಕ ಪದಗುಚ್ಛ ಹೀಗಿದೆ: “ನಾವು ನಿಜವಾಗಿ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರೆ ಪರಸ್ಪರರಲ್ಲಿ ಏನನ್ನೂ ಬಚ್ಚಿಡಲಾಗುವುದಿಲ್ಲ.” ಸ್ಪಷ್ಟವಾಗಿ ಇದು ಸುಂದರವಾಗಿದೆ. ಇದರ ನಂತರ, ಅವಳು ಚರ್ಮದ ಮೇಲೆ ನಸುಗೆಂಪು ಮಚ್ಚೆಗಳಿರುವ ಬಾಲಕನೊಬ್ಬನಿಗೆ ಬರೆದದ್ದು ಹೀಗಿದೆ: “ನೀನು ಸುಂದರನಾಗಿರುವಿ, ನಿನ್ನ ಚರ್ಮದ ಮೇಲಿರುವ ನಸುಗೆಂಪು ಬಣ್ಣದ ಮಚ್ಚೆಗಳು ಅಂದವಾಗಿವೆ, ದೇವತೆಯೊಬ್ಬ ನಿನ್ನ ಮುಖದ ಮೇಲೆ ಗೋದಿ ಕಾಳುಗಳನ್ನು ಬಿತ್ತಿದ ಹಾಗಿದೆ, ಅದರಿಂದಾಗಿ ಆಕಾಶದಲ್ಲಿ ಹಾರಾಡುವ ಪಕ್ಷಿಗಳನ್ನು ಅದು ಆಕರ್ಷಿಸುತ್ತಿರುವಂತಿದೆ.” ನಿಶ್ಚಿತವಾಗಿ ಇದು ಕಾವ್ಯಮಯವಾಗಿದೆ.

ಮತ್ತು ಕೊನೆಗೆ, ನಾನು ಕೊಡಲಿರುವ ವಿವರಣೆಗೆ ದ್ವಾರವನ್ನು ತೆರೆದಿರಿಸುವಂತೆ ಮಾಡುವ, ನಿಜವಾಗಿಯೂ ಸುಂದರವಾದ ಏನೋ ಒಂದಿದೆ: “ನಾನು ಕೇವಲ ಒಂದು ಕಿವಿ, ಒಂದು ಬಾಯಿ; ನಾನು ನಿಮಗೆ ವಿವರಿಸಿ ಹೇಳಲಾಗದ ಶಬ್ದಗಳ ಬಿರುಗಾಳಿಯನ್ನು ಕಿವಿ ಕೇಳಿಸಿಕೊಳ್ಳುತ್ತದೆ, ಅದನ್ನು ನನ್ನ ಅಂತರಂಗದಲ್ಲಿರುವ ಅಗಾಧ ಧ್ವನಿ ನನ್ನತ್ತ ಬಿರುಸಾಗಿ ಎಸೆಯುತ್ತಿದೆ ಮತ್ತು ನನ್ನ ಬಾಯಿ ಅವುಗಳನ್ನು ಪುನರುಚ್ಚರಿಸುತ್ತದೆ, ನಾನು ಹೇಳುತ್ತಿರುವ ಯಾವುದನ್ನೂ

ನನ್ನಂತರಂಗದಲ್ಲಿ ಪ್ರವಾಹ ರೂಪದಲ್ಲಿ ಹರಿದು ಬರುತ್ತಿರುವ ಪ್ರಕಾಶಕ್ಕೆ ಹೋಲಿಸಲಾಗದು.” ಸ್ಪಷ್ಟವಾಗಿ ಇದು ಬಹಳ ಸುಂದರವಾಗಿದೆ.

**(CWM, 8/316)** **– ಶ್ರೀಮಾತೆ**

*

**ಭವಿಷ್ಯತ್ತಿಗಾಗಿ ತಯಾರಿ ಮಾಡಿಕೊಳ್ಳುವುದಕ್ಕಾಗಿ ಶಿಕ್ಷಣ**

ಮಕ್ಕಳಿಗಾಗಿ, ನಿಖರವಾಗಿ ಅವರು ಮಕ್ಕಳಾಗಿರುವುದರಿಂದಾಗಿ ಭವಿಷ್ಯತ್ತನ್ನು ಗೆದ್ದುಕೊಳ್ಳಲು ಅವರಲ್ಲಿ ಸಂಕಲ್ಪವನ್ನು ಕ್ರಮೇಣ ಊರಿಸುವುದು, ಮುಂದಾಗುವುದನ್ನು ಆಲೋಚಿಸುವುದು, ಏನಾಗಲಿದೆ ಎಂಬುದರತ್ತ ಸಾಧ್ಯವಿದ್ದಷ್ಟು ತೀವ್ರಗತಿಯಿಂದ ಚಲಿಸುವುದು ಇದೆಲ್ಲ ಬಹಳ ಒಳ್ಳೆಯದು. ಆದರೆ ಅವರು ತಮ್ಮೊಡನೆ ಭಾರವನ್ನು, ಗತಕಾಲದ ಪೀಡಿಸುವ ಭಾರೀ ಜವಾಬ್ದಾರಿಯನ್ನು ಎಳೆದುಕೊಂಡೊಯ್ಯಬಾರದು. ...

ಅದ್ಭುತ ವಿಷಯಗಳು ಪ್ರಕಟವಾಗಲಿವೆ, ಅವುಗಳನ್ನು ಸ್ವೀಕರಿಸಲು ತಯಾರಿ ಮಾಡಿಕೊಳ್ಳಿರಿ ಎಂದು ಮಕ್ಕಳಿಗೆ ಹೇಳಬೇಕು. ಮತ್ತು ಆಗ ಅವರಿಗೆ ಹೆಚ್ಚು ಮೂರ್ತರೂಪದ, ತಿಳಿದುಕೊಳ್ಳಲು ಹೆಚ್ಚು ಸುಲಭವಾದ ಏನೋ ಒಂದು ಬೇಕಾಗಿದ್ದರೆ ಅವರಿಗೆ ನೀವು ಹೇಳಬಹುದು: “ಶ್ರೀ ಅರವಿಂದರು ಈ ವಿಷಯವನ್ನು ಘೋಷಿಸಲು ಬಂದಿದ್ದರು, ಅವುಗಳನ್ನು ನೀವು ಓದಲು ಶಕ್ತರಾದಾಗ ತಿಳಿದುಕೊಳ್ಳುವಿರಿ.” ಹಾಗಾಗಿ ಅವರಲ್ಲಿ ಅಭಿರುಚಿ ಎಚ್ಚತ್ತುಕೊಳ್ಳುವುದು, ಕಲಿತುಕೊಳ್ಳಲು ಬಯಕೆಯುಂಟಾಗುವುದು. ...

ಎಲ್ಲದಕ್ಕಿಂತಲೂ ಹೆಚ್ಚಾಗಿ ಬಹಳ ಮಹತ್ವದ್ದು ಏನೆಂದರೆ ವಿಭಜನೆಗಳನ್ನು ಇಲ್ಲವಾಗಿಸಬೇಕು. ಪ್ರತಿಯೊಬ್ಬರೂ ಹಾಗೂ ಎಲ್ಲರೂ ವಿಭಜನೆಗಳನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ: ಆಧ್ಯಾತ್ಮಿಕ ಜೀವನ ನಡೆಸುವುದು, ಸರ್ವಸಾಧಾರಣ ಜೀವನ ನಡೆಸುವುದು; ಆಧ್ಯಾತ್ಮಿಕ ಪ್ರಜ್ಞೆಯನ್ನು ಹೊಂದಿರುವುದು, ಸರ್ವಸಾಧಾರಣ ಪ್ರಜ್ಞೆಯನ್ನು ಹೊಂದಿರುವುದು – ಅಲ್ಲಿ ಏಕೈಕ ಪ್ರಜ್ಞೆಯಿದೆ. ಬಹಳಷ್ಟು ಜನರಲ್ಲಿ ಪ್ರಜ್ಞೆಯ ಮೂರು ನಾಲ್ಕಾಂಶ (¾) ಭಾಗ ನಿದ್ರಿಸುತ್ತಿರುತ್ತದೆ ಹಾಗೂ ವಿರೂಪಗೊಂಡಿರುತ್ತದೆ, ಹಲವಾರು ಜನರಲ್ಲಿ ಅದಿನ್ನೂ ಸಂಪೂರ್ಣವಾಗಿ ವಿರೂಪಗೊಂಡಿರುತ್ತದೆ. ಅವಶ್ಯವಾದದ್ದನ್ನು ಕುರಿತು ಬಹಳ ಸರಳ ರೀತಿಯಿಂದ ಹೇಳುವುದಾದರೆ, ಒಂದು ಪ್ರಜ್ಞೆಯಿಂದ ಇನ್ನೊಂದು ಪ್ರಜ್ಞೆಗೆ ಜಿಗಿತ

ಮಾಡುವುದಿರುವುದಿಲ್ಲ, ಆದರೆ ಮನುಷ್ಯ ತನ್ನ ಪ್ರಜ್ಞೆಯನ್ನು ಮೇಲ್ಗಡೆಗಿರುವ ಪ್ರಜ್ಞೆಯತ್ತ ತೆರೆದಿರಿಸುವುದಿರುತ್ತದೆ ಮತ್ತು ಅದನ್ನು ಸತ್ಯದ ಕಂಪನಗಳಿಂದ ತುಂಬುವುದಿರುತ್ತದೆ, ಇಲ್ಲಿರಬೇಕಾದುದರ ಜೊತೆಗೆ ಸಾಮರಸ್ಯದಲ್ಲಿರುವಂತೆ ಮಾಡಬೇಕಾಗಿರುತ್ತದೆ – ಆ ಸಾಮರಸ್ಯ ಸನಾತನ ಕಾಲದಿಂದಿದೆ – ಆದರೆ ಇಲ್ಲಿರಬೇಕಾದುದು: ಪೃಥ್ವಿಯ ನಾಳಿನದಾಗಿರುತ್ತದೆ. ನಿಮ್ಮ ಹಿಂದಿನಿಂದ ಎಳೆದುಕೊಂಡು ಹೋಗಬೇಕಾದ ಇಡೀ ಭಾರದೊಂದಿಗೆ ನೀವು ಕೆಳಗೆ ತೂಗಿ ಹೋಗುವಂತಾದರೆ, ನೀವು ಕೈಬಿಡಬೇಕಾದ ಎಲ್ಲವನ್ನೂ ನಿಮ್ಮ ಹಿಂದೆ ಎಳೆದುಕೊಂಡು ಹೊರಟರೆ, ತೀವ್ರಗತಿಯಿಂದ ಮುನ್ನಡೆ ಸಾಧಿಸಲಾಗುವುದಿಲ್ಲ. ...

*

**ಭವಿಷ್ಯತ್ತಿನ ಶಿಕ್ಷಕರು:**

ನಮಗೆ ಗಮನಾರ್ಹರಾದ ಶಿಕ್ಷಕರ ಆವಶ್ಯಕತೆ ಇದೆ, ಅವರಲ್ಲಿ ಈಗಾಗಲೆ ತಿಳಿದಿರುವುದರ ಬಗ್ಗೆ ಸಾಕಷ್ಟು ವಿಸ್ತಾರವಾದ ದಾಖಲೆ ಸಂಗ್ರಹಣವಿರಬೇಕು, ಅದರಿಂದಾಗಿ ಅವರು ಪ್ರತಿಯೊಂದು ಪ್ರಶ್ನೆಗೆ ಉತ್ತರ ನೀಡಲು ಶಕ್ತರಾಗುವರು. ಮತ್ತು ಅದೇ ಕಾಲಕ್ಕೆ ಅನುಭವವಿರದೆ ಹೋದರೆ ಕನಿಷ್ಠ ಪಕ್ಷ ಜ್ಞಾನವಾದರೂ ಇರಬೇಕು – ಅನುಭವ ಹೆಚ್ಚು ಅಪೇಕ್ಷಣೀಯವಾದದ್ದು – ಆ ಅನುಭವ ನಿಜವಾದ ಅಂತರ್ಬೋಧೆಯ ಬೌದ್ಧಿಕ ಮನೋಭಾವದ್ದು, ಮತ್ತು ಸ್ವಾಭಾವಿಕವಾಗಿ, ಕ್ಷಮತೆ ಇನ್ನೂ ಹೆಚ್ಚು ಅದ್ಯತೆ ನೀಡುವುದಕ್ಕೆ ಅರ್ಹವಾದದ್ದು. ತಿಳಿದುಕೊಳ್ಳುವ ನಿಜವಾದ ರೀತಿ ಮಾನಸಿಕ ನಿಶ್ಚಲನೀರವತೆಯನ್ನಿಟ್ಟುಕೊಂಡಿರುವುದಾಗಿರುತ್ತದೆ ಎಂಬ ಕನಿಷ್ಠ ಮಟ್ಟದ ಜ್ಞಾನವಾದರೂ ಇರಬೇಕು, ನಿಜವಾದ ದೈವೀ ಪ್ರಜ್ಞೆಯತ್ತ ಲಕ್ಷ್ಯಗೊಟ್ಟು ಉಳಿದುಕೊಂಡಿರುವ ನಿಶ್ಚಲನೀರವತೆ ಮತ್ತು ಅಲ್ಲಿಂದ ಬರುವುದನ್ನು ಸ್ವೀಕರಿಸುವ ಕ್ಷಮತೆ ಇರಬೇಕು. ಈ ಕ್ಷಮತೆಯನ್ನು ಹೊಂದಿರುವುದು ಅತ್ಯಂತ ಒಳ್ಳೆಯದು, ಕನಿಷ್ಠ ಪಕ್ಷ ಅದು ನಿಜವಾದ ವಿಷಯವೆಂದು ವಿವರಿಸಿ ಹೇಳಬೇಕು – ಒಂದು ಬಗೆಯ ಪ್ರದರ್ಶನವಿರುವ ಹಾಗೆ – ಅದು ಕಲಿತುಕೊಳ್ಳಬೇಕಾದ ಜ್ಞಾನವಿರುವ ಇಡೀ ಪ್ರಾಂತದ ದೃಷ್ಟಿಕೋನದಿಂದ ಕಾರ್ಯ ಕೈಕೊಳ್ಳುತ್ತದಷ್ಟೇ ಅಲ್ಲ, ಆದರೆ ಕೈಕೊಳ್ಳಬೇಕಾದ ಇಡೀ ಪ್ರಾಂತದ ದೃಷ್ಟಿಕೋನದಿಂದ ಕೂಡ ಕಾರ್ಯ ಕೈಕೊಳ್ಳುತ್ತದೆ: ಅದನ್ನು ಹೇಗೆ ಕೈಕೊಳ್ಳಬೇಕು ಎಂಬುದಕ್ಕೆ ನಿಖರವಾದ ಸೂಚನೆಯನ್ನು

ಸ್ವೀಕರಿಸುವ ಕ್ಷಮತೆ; ಮತ್ತು ನೀವು ಮುಂದುವರಿದು ಹೋದಂತೆ, ಏನು ಕೈಕೊಳ್ಳಬೇಕು ಎಂಬುದರ ಬಹಳ ಸ್ಪಷ್ಟ ಗ್ರಹಿಕೆಯಾಗಿ ಬದಲಾಗುತ್ತದೆ, ಮತ್ತು ಅದನ್ನು ಯಾವಾಗ ಕೈಕೊಳ್ಳಬೇಕು ಎಂಬುದನ್ನು ಕುರಿತು ನಿಖರವಾದ ಸೂಚನೆಯಿರುತ್ತದೆ. ಮಕ್ಕಳು ಯೋಚನೆ ಮಾಡುವ ಕ್ಷಮತೆಯನ್ನು ಹೊಂದಿದ ಕೂಡಲೆ – ಅದು ವಯಸ್ಸು ಏಳಾದಾಗ ಪ್ರಾರಂಭವಾಗುತ್ತದೆ, ಆದರೆ ಹದಿನಾಲ್ಕು ಇಲ್ಲವೆ ಹದಿನೈದು ವಯಸ್ಸಾದಾಗ ಅದು ಬಹಳ ಸ್ಪಷ್ಟವಾಗಿರುತ್ತದೆ – ಮಕ್ಕಳ ವಯಸ್ಸು ಏಳಾಗಿದ್ದಾಗ ಅವರಿಗೆ ಸ್ವಲ್ಪ ಮಟ್ಟದ ಸೂಚನೆ ನೀಡಬೇಕು, ಸಂಪೂರ್ಣ ವಿವರಣೆಯನ್ನು ಅವರು ಹದಿನಾಲ್ಕು ವಯಸ್ಸಿನವರಾದಾಗ ಕೊಡಬೇಕು; ಆ ವಿವರಣೆಯಲ್ಲಿ ಅದನ್ನು ಹೇಗೆ ಕೈಕೊಳ್ಳಬೇಕು ಎಂಬುದನ್ನು, ವಿಷಯಗಳ ಆಳವಾದ ಸತ್ಯದೊಂದಿಗೆ ಸಂಬಂಧವನ್ನಿರಿಸಿಕೊಳ್ಳಲು ಇರುವ ರೀತಿ ಅದೊಂದೇ ಎಂಬುದನ್ನು ಹೇಳಬೇಕು; ಮತ್ತು ಉಳಿದದ್ದೆಲ್ಲ ನೇರವಾಗಿ ತಿಳಿದುಕೊಳ್ಳಬಹುದಾದ ಏನೋ ಒಂದಕ್ಕೆ ಹೆಚ್ಚು ಕಡಿಮೆ ಅಂದಗೆಟ್ಟ ಮಾನಸಿಕ ನಿಕಟತೆ (approximation) ಯಾಗಿರುತ್ತದೆ.

ಉಪಸಂಹಾರ ರೂಪದಲ್ಲಿ ಹೇಳುವುದಾದರೆ ಶಿಕ್ಷಕರಲ್ಲಿಯೇ ಸ್ವತಃ, ಕನಿಷ್ಠಪಕ್ಷ, ಶಿಸ್ತುಪಾಲನೆಯ ಹಾಗೂ ಅನುಭವದ ನಿಷ್ಕಪಟ ಪ್ರಾರಂಭವಿರಬೇಕು, ಅದು ಪುಸ್ತಕಗಳನ್ನು ಸಂಗ್ರಹಿಸುವ ಮತ್ತು ಅವುಗಳಲ್ಲಿದ್ದುದನ್ನು ಮರಳಿ ಹೇಳುವ ಪ್ರಶ್ನೆಯಾಗಿರುವುದಿಲ್ಲ. ಮನುಷ್ಯ ಈ ರೀತಿ ಶಿಕ್ಷಕನಾಗುವುದಿಲ್ಲ. ಹೊರಗಿನ ಜಗತ್ತು, ಅದಕ್ಕೆ ಇಷ್ಟವಾದರೆ ಹಾಗಿರಲಿ. ನಾವು ಪ್ರಚಾರಪ್ರಿಯರಲ್ಲ, ಏನನ್ನು ಕೈಕೊಳ್ಳಬಹುದು ಎಂಬುದನ್ನು ಸರಳವಾಗಿ ತೋರಿಸಿಕೊಡಲು ಬಯಸುತ್ತೇವೆ ಮತ್ತು ಅದನ್ನು ಕೈಕೊಳ್ಳಬೇಕು ಎಂಬುದನ್ನು ಸಿದ್ಧಮಾಡಿ ತೋರಿಸಲು ಪ್ರಯತ್ನಿಸುತ್ತೇವೆ.

*

**ಸತ್ಯದ ಕೆಲವು ಹನಿಗಳು**

ಮಕ್ಕಳು ಅತಿ ಚಿಕ್ಕವರಾಗಿದ್ದಾಗ ಅವರನ್ನು (ಶಾಲೆಗೆ) ಸೇರಿಸಿಕೊಂಡರೆ ಅದು ಅದ್ಭುತವಾದದ್ದು.

ತಪ್ಪು ಮಾಡುವುದು ಬೇಡ
ಸಿಟ್ಟಿಗೇಳುವುದು ಬೇಡ
ಯಾವಾಗಲೂ ಅರ್ಥ ಮಾಡಿಕೊಳ್ಳಬೇಕು.

ಅಲ್ಲಿ ಈ ಚಳುವಳಿ ಏಕಿದೆ, ಈ ಪ್ರಚೋದನೆ ಏಕಿದೆ, ಮಗುವಿನ ಆಂತರಿಕ ರಚನೆ ಏನಿದೆ, ಬಲಪಡಿಸಬೇಕಾದ ವಿಷಯವೇನು, ಮುಂದೆ ತರಬೇಕಾದ ವಿಷಯವೇನು – ಕೈಕೊಳ್ಳಬೇಕಾದ ವಿಷಯ ಇದೊಂದೇ ಆಗಿದೆ; ಅವರು ಅರಳಿಕೊಳ್ಳಲು ಮುಕ್ತರನ್ನಾಗಿರಿಸಬೇಕು, ಸರಳ ರೀತಿಯಲ್ಲಿ ಅವರು ಹಲವಾರು ವಸ್ತು–ವಿಷಯಗಳನ್ನು ನೋಡಲು, ಸ್ಪರ್ಶಿಸಲು, ಸಾಧ್ಯವಿದ್ದ ಎಲ್ಲ ಕಾರ್ಯಗಳನ್ನು ಕೈಕೊಳ್ಳಲು ಅವರಿಗೆ ಅವಕಾಶ ಒದಗಿಸಬೇಕು. ಅದು ಭವ್ಯ ರೀತಿಯಲ್ಲಿ ಮೋಜಿನದಾಗಿರುತ್ತದೆ. ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ನಿಮಗೆ ತಿಳಿದಿದೆ ಎಂಬುದನ್ನು ಅವರ ಮೇಲೆ ಹೇರಬಾರದು.

ಮಕ್ಕಳನ್ನು ಬೈಯುವುದು ಬೇಡ. ಯಾವಾಗಲೂ ಅರ್ಥ ಮಾಡಿಕೊಳ್ಳಿರಿ, ಮಗು ತಯಾರಾಗಿದ್ದರೆ, ವಿವರಿಸಿ ಹೇಳಬೇಕು, ವಿವರಣೆ ತಿಳಿದುಕೊಳ್ಳುವುದಕ್ಕೆ ಮಗು ತಯಾರಾಗಿರದಿದ್ದರೆ – ನೀವೇ ಸ್ವತಃ ತಯಾರಾಗಿದ್ದರೆ – ಮಿಥ್ಯೆಯ ಕಂಪನದ ಸ್ಥಾನದಲ್ಲಿ ನಿಜವಾದದ್ದನ್ನು ಇರಿಸಿರಿ. ಆದರೆ ಇದು ಶಿಕ್ಷಕರಲ್ಲಿ ಅಪರೂಪಕ್ಕೆ ಕಂಡುಬರುವ ಪರಿಪೂರ್ಣತೆಯೊಂದನ್ನು ಒತ್ತಾಯದಿಂದ ಬೇಡುತ್ತಿರುವ ಹಾಗಿರುತ್ತದೆ. ಆದರೆ ಶಿಕ್ಷಕರಿಗಾಗಿ ಅಭ್ಯಾಸದ ಒಂದು ನಿಜವಾದ ಕಾರ್ಯಕ್ರಮವನ್ನು ರೂಪಿಸುವುದು ಬಹಳ ಸ್ವಾರಸ್ಯಕರವಾದದ್ದು, ಅದು ತಳಪಾಯದಿಂದ ಪ್ರಾರಂಭವಾಗಿರಬೇಕು, ಎಷ್ಟೊಂದು ನಮ್ಯವಾಗಿರಬೇಕೆಂದರೆ ಅನಿಸಿಕೆಗಳನ್ನು ಆಳವಾಗಿ ಸ್ವೀಕರಿಸುವಂತಿರಬೇಕು. ಅವರಿಗೆ ಸತ್ಯದ ಕೆಲವು ಹನಿಗಳನ್ನು ಅವರು ಚಿಕ್ಕವರಾಗಿದ್ದಾಗ ಕೊಟ್ಟರೆ, ಸತ್ತೆ ಬೆಳೆಯುತ್ತಿದ್ದ ಹಾಗೆ ಬಹಳ ಸ್ವಾಭಾವಿಕವಾಗಿ ಅರಳಿಕೊಳ್ಳುವರು. ಅದು ಬಹಳ ಸುಂದರವಾದ ಕಾರ್ಯವಾಗುವುದು.

**(CWSA, 12/402–05) – ಶ್ರೀ ಮಾತೆ**

*

ಅದು ತನ್ನನ್ನೇ ಪರಿವರ್ತನೆಗೆ ಒಳಪಡಿಸುವ ಹಳೆಯ ಜಗತ್ತಲ್ಲ, ಹೊಸ ಜಗತ್ತು ಜನ್ಮತಾಳಿದೆ. ಮತ್ತು ನಾವು ಸಂಕ್ರಮಣದ ಈ ಅವಧಿಯಲ್ಲಿಯೇ ಇರುವೆವು. ಅವೆರಡೂ ಜಗತ್ತುಗಳು ತೊಡಕಿಹಾಕಿಕೊಂಡಿವೆ. ಹಳೆಯ ಜಗತ್ತು ಇನ್ನೂ ಸರ್ವಶಕ್ತವಾಗಿ, ಸಾಮಾನ್ಯ ಪ್ರಜ್ಞೆಯ ಮೇಲೆ ಪ್ರಾಬಲ್ಯ ಮೆರೆಸುತ್ತ ಪಟ್ಟುಹಿಡಿದು ಉಳಿದುಕೊಂಡಿದೆ; ಆದರೆ ಹೊಸ ಜಗತ್ತು ಶಾಂತ ರೀತಿಯಲ್ಲಿ

ಒಳಗೆ ಸರಿದು ಬರುತ್ತಿದೆ, ಇನ್ನೂ ಬಹಳ ವಿನಮ್ರವಾಗಿದೆ ಗಮನಕ್ಕೆ ಬಾರದಂತಿದೆ – ಅದು ಎಷ್ಟರ ಮಟ್ಟಿಗೆ ಗಮನಕ್ಕೆ ಬಾರದೆ ಇದೆಯೆಂದರೆ ಬಾಹ್ಯದಲ್ಲಿ ಏನನ್ನೂ ಅತಿಯಾಗಿ ಕ್ಷೋಭೆಗೆ ಒಳಪಡಿಸುವುದಿಲ್ಲ, ಅದು ಸದ್ಯ ಹಾಗಿದೆ ಮತ್ತು ಬಹಳಷ್ಟು ಜನರ ಪ್ರಜ್ಞೆಯಲ್ಲಿ ಅದು ಒಟ್ಟಿನಲ್ಲಿ ಗ್ರಹಿಕೆಗೆ ಬಾರದ ಹಾಗಿದೆ. ಆದಾಗ್ಯೂ ಅದು ಕಾರ್ಯನಿರತವಾಗಿದೆ, ಬೆಳೆಯುತ್ತಿದೆ – ತನ್ನನ್ನು ಗೋಚರವಾಗುವಂತೆ ದೃಢೀಕರಿಸುವವರೆಗೆ ಅದು ಆ ರೀತಿಯದಾಗಿರುತ್ತದೆ.

**(CWSA, 9/150)** **– ಶ್ರೀಮಾತೆ**

*

# ಹೊಸ ಸೃಷ್ಟಿಯ ಅರಳಿಕೊಳ್ಳುವಿಕೆ

## ಅತಿಮಾನಸದ ಪ್ರಭಾವದಡಿಯಲ್ಲಿ ನಿಜವಾದ ಮನುಕುಲ

ಸಸ್ಯಗಳು, ಅವುಗಳ ಸ್ವಯಂಪ್ರೇರಿತ ಸೌಂದರ್ಯ (ಅದು ಅದ್ಭುತವಾದ ಏನೋ ಒಂದು), ಎಷ್ಟೊಂದು ಸಾಮರಸ್ಯದಿಂದಿರುವ ಪಶು (ಜನರು ಮಧ್ಯೆ ಪ್ರವೇಶಿಸದಿದ್ದಾಗ ಇರುವ ಸಾಮರಸ್ಯ) ಮತ್ತು ತನ್ನ ಸರಿಯಾದ ಸ್ಥಾನದಲ್ಲಿದ್ದ ಎಲ್ಲವೂ ಇವುಗಳ ದರ್ಶನದ ನಂತರ ಅದು ಬಂದಿತು; ನಂತರ ಇರಬೇಕಾದಂತೆ ಇರುವ ನಿಜವಾದ ಮನುಕುಲ ಎಂದರೆ ಸೌಂದರ್ಯ, ಸಾಮರಸ್ಯ, ಮೋಹಕತೆ, ಜೀವನದ ಸೊಬಗು, ಜೀವಿಸುವುದರ ಸ್ವಾದ ಇವೆಲ್ಲವನ್ನು ಗರಿಷ್ಠ ಮಟ್ಟದಲ್ಲಿ ಸೃಷ್ಟಿಸಬಹುದಾದ ಮನುಕುಲದ ದರ್ಶನ, – ಸೌಂದರ್ಯದಲ್ಲಿ ಜೀವಿಸುವುದರ ಸ್ವಾದ ಮತ್ತು ಸ್ವಾಭಾವಿಕವಾಗಿ, ಕುರೂಪದ್ದಾದ, ಕೀಳುಮಟ್ಟದ್ದಾದ ಮತ್ತು ಅಸಭ್ಯವಾದ ಎಲ್ಲವನ್ನೂ ದಮನ ಮಾಡಿ ಪಡೆದ ಸ್ವಾದ. ಅದು ಸೊಗಸಾದ ಮನುಕುಲವಾಗಿತ್ತು – ಗರಿಷ್ಠ ಮಟ್ಟದಲ್ಲಿದ್ದ ಮನುಕುಲ, ಆದರೆ ಮನೋಹರವಾದದ್ದು. ಅದು ಮನುಕುಲವಾಗಿ ಪರಿಪೂರ್ಣ ತೃಪ್ತಿಯಿಂದಿತ್ತು, ಏಕೆಂದರೆ ಅದು ಸಾಮರಸ್ಯದಿಂದ ಜೀವಿಸುತ್ತದೆ. ಮತ್ತು ಅದು ಹೊಸ ಸೃಷ್ಟಿಯ ಪ್ರಭಾವದಡಿಯಲ್ಲಿ ಇಡೀ ಮನುಕುಲ ಆಗಬಹುದಾದುದನ್ನು ಕುರಿತು ವಚನ ನೀಡುವ ಹಾಗಿದೆ. ಮನುಕುಲ ಪಶು ಜೀವ ಜಾತಿಯೊಡನೆ ಕೈಕೊಂಡುದುದರೊಂದಿಗೆ ಹೋಲಿಸಿ ನೋಡುವಿಕೆ ಕೂಡ ಇತ್ತು. ಸ್ವಾಭಾವಿಕವಾಗಿ ಅದು ಅತಿಯಾಗಿ ಮಿಶ್ರಣಕ್ಕೊಳಗಾಗಿದೆ, ಆದರೆ ವಿಷಯಗಳನ್ನು ಪರಿಪೂರ್ಣಗೊಳಿಸಲಾಗಿದೆ, ಒಳ್ಳೆಯವಾಗಿರಿಸಲಾಗಿದೆ. ಸಂಪೂರ್ಣವಾಗಿ ಉಪಯೋಗಿಸಲಾಗಿದೆ. ಮನಸ್ಸಿನ

ಪ್ರಭಾವದಡಿ ಪಶುತ್ವ ಮತ್ತೊಂದು ವಿಷಯವಾಗಿದೆ, ಸ್ವಾಭಾವಿಕವಾಗಿ ಅದು ಮಿಶ್ರಣಕ್ಕೊಳಗಾದ ಏನೋ ಒಂದು, ಏಕೆಂದರೆ ಮನಸ್ಸು ಅಪರಿಪೂರ್ಣವಾಗಿತ್ತು. ಅದೇ ರೀತಿಯಲ್ಲಿ ಸರಿಯಾದ ಸಮತೋಲನವಿರುವ ಜನರ ಮಧ್ಯೆ ಸಾಮರಸ್ಯವಿರುವ ಮನುಕುಲದ ಉದಾಹರಣೆಗಳಿವೆ; ಮತ್ತು ಇದು ಅತಿಮಾನಸದ ಪ್ರಭಾವದಡಿಯಲ್ಲಿ ಮನುಕುಲ ಏನಾಗಬಹುದು ಎಂಬುದು ತೋರಿಬರುವಂತಿದೆ, ಅದಿನ್ನೂ ಬಹಳ ದೂರದಲ್ಲಿದೆ, ಅದು ಕೂಡಲೆ ಸಂಭವಿಸಲಿ ಎಂದು ನೀವು ನಿರೀಕ್ಷಿಸಬಾರದು – ಅದು ಬಹಳ ದೂರದಲ್ಲಿದೆ.

ಈಗಲೂ ಕೂಡ ಸ್ಪಷ್ಟವಾಗಿ ಅದು ಸಂಕ್ರಮಣದ ಅವಧಿಯಾಗಿದೆ. ಬಹಳ ಕಾಲ ಉಳಿದುಕೊಳ್ಳಬಹುದು, ಅದು ಹೆಚ್ಚಾಗಿ ವೇದನಾಪೂರ್ಣವಾದದ್ದು. ಬಹಳಷ್ಟು ಸಲ ವೇದನೆಯಿಂದ ಕೂಡಿದ ಪ್ರಯತ್ನ. ಸಿದ್ಧಿಸಿಕೊಳ್ಳಬೇಕಾದ ಗುರಿಯ ಸ್ಪಷ್ಟ ದರ್ಶನದ ಮೂಲಕ ಸರಿದೂಗಿಸಿಕೊಳ್ಳಬಹುದು. ಆ ಗುರಿಯನ್ನು ಸಿದ್ಧಿಸಿಕೊಳ್ಳಲಾಗುವುದು. ಅದೊಂದು ವಾಗ್ದಾನ, ಹೌದು ನಿಶ್ಚಿತವಾದದ್ದು. ಆದರೆ ಅದು ಮಾನಸಿಕ ಜೀವನದ ಎಲ್ಲ ದೋಷ, ವಿರೂಪ, ಎಲ್ಲ ಕುರೂಪ ಇವುಗಳನ್ನು ನಿರ್ಮೂಲ ಮಾಡುವ ಸಾಮರ್ಥ್ಯ ಹೊಂದಿರುವ ಏನೋ ಒಂದು ಮತ್ತು ನಂತರ ಮನುಕುಲ ಮಾನವರಾಗಿರುವುದರಿಂದ ಬಹಳ ಸಂತುಷ್ಟ–ವಾಗಿರುತ್ತದೆ, ಬಹಳ ತೃಪ್ತಿಯಿಂದಿರುತ್ತದೆ, ಮಾನವರಲ್ಲದೆ ಬೇರೆ ಏನೋ ಆಗುವ ಆವಶ್ಯಕತೆಯ ಭಾವನೆ ಇರುವುದಿಲ್ಲ, ಆದರೆ ಅಲ್ಲಿ ಮಾನವ ಸೌಂದರ್ಯ ಹಾಗೂ ಸಾಮರಸ್ಯ ಇವುಗಳ ಭಾವನೆ ಇರುತ್ತದೆ.

**(CWM, 11/25–26)** **– ಶ್ರೀಮಾತೆ**

*

**ಭವಿಷ್ಯತ್ತಿನಲ್ಲಿ ಸಿದ್ಧಿಗಾಗಿರುವ ಮಾರ್ಗಗಳು**

ಇದು ಭವಿಷ್ಯತ್ತಿನಲ್ಲಿ ಸಿದ್ಧಿಗಾಗಿರುವ ಮಾರ್ಗಗಳನ್ನು ಈಗಾಗಲೆ ಮೊದಲೇ ತಿಳಿದುಕೊಂಡಿರುವ ಸಾಧ್ಯತೆಗಳನ್ನು ತೆರೆದಿರಿಸುತ್ತದೆ, ಪ್ರಜ್ಞಾಪೂರ್ವಕವಾಗಿ ಇಲ್ಲವೆ ಪ್ರಜ್ಞಾರಹಿತವಾಗಿ ಹೊಸ ಶಕ್ತಿಗಳಿಗೆ ತೆರೆದಿರಿಸಿಕೊಂಡ ಮನುಕುಲದ ಇಡಿಯಾದ ಭಾಗವನ್ನು ಉಚ್ಚತರ, ಹೆಚ್ಚು ಸಾಮರಸ್ಯವಿರುವ, ಹೆಚ್ಚು ಪರಿಪೂರ್ಣವಾಗಿರುವ ಜೀವನದಲ್ಲಿ ಎತ್ತಿಹಿಡಿಯಲಾಗುವುದು. ವೈಯಕ್ತಿಕ ಪರಿವರ್ತನೆಗೆ ಯಾವಾಗಲೂ ಅನುಮತಿ ದೊರಕದೆ ಹೋದರೂ, ಅದು

ಸಾಧ್ಯವಾಗದೆ ಹೋದರೂ ಅಲ್ಲಿ ಒಂದು ಬಗೆಯ ಮೇಲೆತ್ತಿ ಹಿಡಿಯುವಿಕೆ ಹಾಗೂ ಇಡಿಯಾದುದರ ಸಾಮರಸ್ಯವನ್ನು ಉಂಟುಮಾಡುವಿಕೆ ಇರುತ್ತದೆ, ಅದು ಹೊಸ ವ್ಯವಸ್ಥೆ ಹಾಗೂ ಸಾಮರಸ್ಯ ಸ್ಥಾಪಿತಗೊಳ್ಳುವುದು ಸಾಧ್ಯವಾಗುವಂತೆ ಮಾಡುತ್ತದೆ ಮತ್ತು ಸದ್ಯದ ಅವ್ಯವಸ್ಥೆಯ ತಳಮಳ ಹಾಗೂ ಹೋರಾಟ ಮಾಯವಾಗಿ ಇಡಿಯಾದುದರ ಸಾಮರಸ್ಯಪೂರ್ಣ ಕಾರ್ಯ ನೆರವೇರಿಕೆಗೆ ಅನುವು ಮಾಡಿಕೊಡುತ್ತದೆ.

ಅಲ್ಲಿ ಇತರ ಪರಿಣಾಮಗಳಿರುತ್ತವೆ, ಅವು ಮನಸ್ಸು ಮಧ್ಯೆ ಪ್ರವೇಶಿಸಿ ಸೃಷ್ಟಿಸಿದ ವಿಕೃತಿಗಳು, ಕುರೂಪ, ವಿರೂಪಗಳ ಇಡೀ ಮೊತ್ತ ಇವುಗಳನ್ನು ನಿರ್ಮೂಲ ಮಾಡಲು ವಿರುದ್ಧ ದಿಶೆಯಲ್ಲಿ ಕಾರ್ಯಮಾಡುವ ಪ್ರವೃತ್ತಿ ಹೊಂದಿರುತ್ತವೆ, ಆ ವಿಕೃತಿ ಇತ್ಯಾದಿಗಳು ವೇದನೆಯನ್ನು, ದುಃಸ್ಥಿತಿಯನ್ನು, ನೈತಿಕ ಬಡತನವನ್ನು, ಕೀಳ್ತನ ಹಾಗೂ ಜುಗುಪ್ಸೆಗಳಿರುವ ದುಃಸ್ಥಿತಿಯ ಇಡೀ ಕ್ಷೇತ್ರವನ್ನು ಹೆಚ್ಚಿಸಿವೆ, ಹಾಗಾಗಿ ಮಾನವ ಜೀವನದ ಇಡೀ ಭಾಗ ಭೀಕರವಾದ ಏನೋ ಒಂದಾಗುವಂತಾಗಿದೆ. ಅದು ಮಾಯವಾಗಬೇಕು. ಅದು ಮನುಕುಲವನ್ನು ಹಲವಾರು ರೀತಿಗಳಲ್ಲಿ ಪಶು ಜೀವನಕ್ಕಿಂತ ಅನಂತಪಟ್ಟು ಹೆಚ್ಚು ಕೆಟ್ಟದ್ದನ್ನಾಗಿ ಮಾಡುತ್ತದೆ. ಪಶು ಜೀವನದಲ್ಲಿ, ಬೇರೆ ಏನೇ ಇದ್ದರೂ, ಸರಳತೆ, ಸ್ವಾಭಾವಿಕ ಸ್ವಯಂಪ್ರೇರಣೆ ಮತ್ತು ಸಾಮರಸ್ಯಗಳಿರುತ್ತವೆ, ಅಹಂಕಾರದ ಆವಶ್ಯಕತೆಗಳಿಗೆ ಪ್ರತ್ಯೇಕವಾಗಿ ಸೇವೆ ಸಲ್ಲಿಸುವುದಕ್ಕಾಗಿ ವಿಕೃತಿಗೊಳಗಾದ ಮಾನಸಿಕತೆ ಇರುವ ಮನುಕುಲದ ಇಡೀ ಭಾಗದಲ್ಲಿರುವ ದುಃಸ್ಥಿತಿ, ಕೊಳಕುತನ ಪಶುಗಳಲ್ಲಿರುವುದಿಲ್ಲ. ನಾವು ಮೇಲ್ಗಡೆಗೆ ಏರಿ ಹೋಗಬೇಕು, ದೈವೀ ಪ್ರಕಾಶ ಹಾಗೂ ಸಾಮರಸ್ಯಗಳಲ್ಲಿ ಜಿಗಿದು ಹೋಗಬೇಕು ಇಲ್ಲವೆ ಆರೋಗ್ಯಪೂರ್ಣ, ವಿಕೃತಿಗೊಳಗಾಗದ ಪಶು ಜೀವನದಲ್ಲಿ ಹಿಂದೆಬಿದ್ದು ಹೋಗಬೇಕು.

... ಮೇಲಕ್ಕೆತ್ತಲಾಗದ ಜನರು, ಪ್ರಗತಿ ಹೊಂದಲು ತಿರಸ್ಕರಿಸುವವರು, ಸ್ವಯಂಚಾಲಿತವಾಗಿ, ತಮ್ಮ ಮಾನಸಿಕ ಪ್ರಜ್ಞೆ ಕಳೆದುಕೊಳ್ಳುವರು ಮತ್ತು ಮನುಷ್ಯ ಜಾತಿಗಿಂತ ಕೆಳಗಿರುವ ಹಂತದಲ್ಲಿ ಹಿಂದೆ ಬಿದ್ದು ಬಿಡುವರು ... ಅತಿಮನಸ್ಸಿನೊಡನೆ ಏಕವಾಗಲು, ತನ್ನನ್ನು ಮುಕ್ತಗೊಳಿಸಿಕೊಳ್ಳಲು ದಕ್ಷತೆಯಿರುವ ಮಾನವ ಮನಸ್ಸಿನ ಮನುಕುಲದ ಭಾಗ ಸಂಪೂರ್ಣವಾಗಿ ಪರಿವರ್ತನೆಗೆ ಒಳಗಾಗುವುದು – ಅದು ಇನ್ನೂ ಬಾಹ್ಯ ರೂಪದಲ್ಲಿ ಅಭಿವ್ಯಕ್ತವಾಗದೆ ಇರುವ

ದೈವೀ ಭವಿಷ್ಯತ್ತಿನತ್ತ ಮುನ್ನಡೆಯುತ್ತಿದೆ, ಪಶುವಿನ ಸರಳತೆಯಿಂದ ಪ್ರಕೃತಿಗೆ ಅತಿ ಹತ್ತಿರವಾಗಿರುವ ಭಾಗವನ್ನು ಪ್ರಕೃತಿಯಲ್ಲಿ ಮರು–ಹೀರಿಕೊಳ್ಳಲಾಗುವುದು ಮತ್ತು ಆದ್ಯಂತವಾಗಿ ಜೀರ್ಣಿಸಿಕೊಳ್ಳಲಾಗುವುದು. ತನ್ನ ಮನಸ್ಸಿನ ದುರುಪಯೋಗದಿಂದ ವಿಕೃತಿಗೆ ಅನುವು ಮಾಡಿಕೊಡುವ ಭ್ರಷ್ಟವಾದ ಮಾನವ ಪ್ರಜ್ಞೆಯ ಭಾಗವನ್ನು ಕೊನೆಗೊಳಿಸಲಾಗುವುದು. ಈ ಮಾದರಿಯ ಮನುಕುಲ ಫಲಕಾರಿಯಾಗದ ಪ್ರಯತ್ನದ ಒಂದು ಭಾಗ, ಅದನ್ನು ನಿರ್ಮೂಲ ಮಾಡಬೇಕು – ಅದು ವಿಶ್ವದ ಇತಿಹಾಸದಲ್ಲಿ ಮಾಯವಾಗಿ ಹೋದ ಅಕಾಲಿಕ ಜೀವ ಜಾತಿಗಳ ಹಾಗಿರುವಂತಹದು.

**(CWM, 9/298–01)** **– ಶ್ರೀಮಾತೆ**

*

**ಮೂಲ ಮಾದರಿಯ ನಗರ**

ಪೃಥ್ವಿಗೆ ಒಂದು ಸ್ಥಾನದ ಆವಶ್ಯಕತೆ ಇದೆ, ಅಲ್ಲಿ ಜನರು ಎಲ್ಲ ರಾಷ್ಟ್ರೀಯ ಪೈಪೋಟಿ(rivalry)ಗಳಿಂದ, ಸಾಮಾಜಿಕ ಸಂಪ್ರದಾಯಗಳಿಂದ, ಗತಕಾಲದ ಗುಲಾಮಗಿರಿಯಿಂದ ಮುಕ್ತರಾಗಿ ಇರಬಲ್ಲವರಾಗುವಂತಿರಬೇಕು, ಇಡಿಯಾಗಿ ತನ್ನನ್ನು ಪ್ರಕಟಪಡಿಸಲು ಅರಸುತ್ತಿರುವ ದೈವೀಪ್ರಜ್ಞೆಯ ಶೋಧ, ಅದಕ್ಕನುಗುಣವಾದ ಆಚರಣೆ ಇವುಗಳಲ್ಲಿ ತೊಡಗಿಸಿಕೊಳ್ಳುವಂತಿರಬೇಕು.

ಅರೋವಿಲೆ ಇಂತಹ ಸ್ಥಾನವಾಗಲು ಬಯಸುತ್ತದೆ, ನಾಳಿನ ದೈವೀ ಸತ್ಯಕ್ಕಾಗಿ ಜೀವಿಸಲು ಅಭೀಪ್ಸೆಪಡುವವರಿಗೆಲ್ಲ ಅದು ತನ್ನನ್ನು ಅರ್ಪಿಸುತ್ತದೆ.

**(CWM, 13/202)** **– ಶ್ರೀಮಾತೆ**

*

**ಪ್ರಶ್ನೆ :** *ಭಿನ್ನ ಮೌಲ್ಯಗಳನ್ನು ಹೊಂದಿರುವ ಜನರು ಒಟ್ಟಿಗೆ ಸಾಮರಸ್ಯದಿಂದ ಹೇಗೆ ಜೀವಿಸಬಲ್ಲರು ಹಾಗೂ ಕಾರ್ಯಕೈಕೊಳ್ಳಬಲ್ಲರು?*

**ಶ್ರೀಮಾತೆ :** ಮನುಷ್ಯ ತನ್ನೊಳಗೆ ಆಳದಲ್ಲಿ ಇಳಿದು ಹೋಗಿ ಎಲ್ಲ ಭಿನ್ನತೆಗಳು ಸಾರಭೂತ ಸನಾತನ ಏಕತೆಯನ್ನು ಕಂಡುಕೊಳ್ಳಬಹುದಾದ ಸ್ಥಾನವನ್ನು ಅರಸುವುದರಲ್ಲಿ ಅದಕ್ಕೆ ಪರಿಹಾರವಿದೆ.

**(CWM, 13/200–01)** **– ಶ್ರೀಮಾತೆ**

*

**ಪ್ರಶ್ನೆ :** *ಜಗತ್ತಿನಲ್ಲಿ ಬಡ ಜನರು ಹಾಗೂ ವೇದನೆ ಇಂತಹದೆಲ್ಲ ಇಲ್ಲದ ಒಂದು ದಿನ ಬರಲಿದೆಯೆ?*

**ಶ್ರೀಮಾತೆ :** ಶ್ರೀ ಅರವಿಂದರ ಬೋಧನೆಯನ್ನು ಅರ್ಥಮಾಡಿಕೊಳ್ಳುವ ಹಾಗೂ ಅವರಲ್ಲಿ ನಂಬಿಕೆಯನ್ನಿರಿಸಿದ ಜನರಿಗೆ ಅದು ಸಂಪೂರ್ಣವಾಗಿ ನಿಶ್ಚಿತವಾದದ್ದು. ಇಂತಹದು ಒಂದು ಸ್ಥಾನದಲ್ಲಿ ಸಂಭವಿಸಲೆಂಬ ಉದ್ದೇಶದಿಂದ ನಾವು 'ಅರೋವಿಲೆ'ಯನ್ನು ಸ್ಥಾಪಿಸಲು ಬಯಸುತ್ತೇವೆ. ಇದನ್ನು ಸಿದ್ಧಿಸಿಕೊಳ್ಳುವುದು ಸಾಧ್ಯವಾಗಬೇಕಾದರೆ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನನ್ನು ಪರಿವರ್ತಿಸಿಕೊಳ್ಳಲು ಪ್ರಯತ್ನ ಮಾಡಬೇಕು, ಏಕೆಂದರೆ ಜನರ ಬಹಳಷ್ಟು ವೇದನೆಗಳು ಅವರವೇ ಭೌತಿಕ ಹಾಗೂ ನೈತಿಕ ತಪ್ಪುಗಳ ಪರಿಣಾಮ ಸ್ವರೂಪದವಗಳಾಗಿರುತ್ತವೆ.

**ಪ್ರಶ್ನೆ :** *ಅರೋವಿಲೆಯಲ್ಲಿ ಜೀವಿಸಲು ಬರುವ ಜನರು ಒಂದೇ ಜಗತ್ತಿಗೆ ಸೇರಿದವರು, ಒಂದೇ ಬಗೆಯ ದೌರ್ಬಲ್ಯಗಳು ಹಾಗೂ ದೋಷಗಳೊಂದಿಗೆ ಜನಿಸಿದವರು ಆಗಿರುವಾಗ ಅಲ್ಲಿ ವೇದನೆಗಳು ಇರುವುದಿಲ್ಲ ಎಂಬುದನ್ನು ಹೇಗೆ ನಂಬುತ್ತೀರಿ?*

**ಶ್ರೀಮಾತೆ :** ಅರೋವಿಲೆಯಲ್ಲಿ ಇನ್ನು ಮುಂದೆ ವೇದನೆ ಇರುವುದಿಲ್ಲ ಎಂದು ನಾನು ಎಂದಿಗೂ ಯೋಚನೆ ಮಾಡಿಲ್ಲ, ಏಕೆಂದರೆ ಜನರು, ಅವರಿರುವ ಹಾಗೆ ಇದ್ದಾಗ, ವೇದನೆಯನ್ನು ಪ್ರೀತಿಸುತ್ತಾರೆ, ಅದಕ್ಕೆ ಶಾಪ ನೀಡುತ್ತಿರುವಾಗಲೂ ಕರೆ ಕೊಡುತ್ತಾರೆ.

ಆದರೆ ಶಾಂತಿಯನ್ನು ಪ್ರೀತಿಸಲು ಹಾಗೂ ಸಮತೆಯನ್ನು ಆಚರಣೆಯಲ್ಲಿ ತರಲು ನಾವು ಅವರಿಗೆ ಕಲಿಸಿಕೊಡುತ್ತೇವೆ.

ಉದ್ದೇಶರಹಿತ ಬಡತನ ಹಾಗೂ ಭಿಕ್ಷಾಟನೆ ಇವುಗಳನ್ನು ಕುರಿತು ನಾನು ಹೇಳಿದ್ದೆ.

ಅರೋವಿಲೆಯಲ್ಲಿ ಜೀವನವನ್ನು ಸಂಘಟಿಸುವ ರೀತಿಯಿಂದಾಗಿ ಇಂತಹದು ಅಲ್ಲಿ ಅಸ್ತಿತ್ವದಲ್ಲಿರುವುದಿಲ್ಲ. ಹೊರಗಿನಿಂದ ಭಿಕ್ಷುಕರು ಅಲ್ಲಿಗೆ ಬಂದಾಗ ಅಲ್ಲಿಂದ ಅವರು ದೂರ ಹೊರಟು ಹೋಗಬೇಕು, ಇಲ್ಲವೆ ಅವರಿಗೆ ಆಶ್ರಯ ನೀಡಿ ಕಾರ್ಯಕೈಕೊಳ್ಳುವುದರಲ್ಲಿರುವ ಸಂತೋಷ ಕುರಿತು ಕಲಿಸಿಕೊಡಲಾಗುವುದು.

**(CWM, 10/268)** **– ಶ್ರೀಮಾತೆ**

*

**ಪ್ರಶ್ನೆ :** *ಅರೋವಿಲೆಯಲ್ಲಿ ಎಲ್ಲವೂ 'ಸಾಮೂಹಿಕ ಒಡೆತನ'ದಲ್ಲಿರುತ್ತದೆ, ಅದರರ್ಥ ಪ್ರತಿಯೊಬ್ಬನೂ ಪ್ರತಿಯೊಂದನ್ನು ಉಪಯೋಗಿಸಬಲ್ಲನೆ? ಇಲ್ಲವೆ ಅಲ್ಲಿರುವವುಗಳನ್ನು ಸರಿಯಾಗಿ ಉಪಯೋಗಿಸಬಲ್ಲವನಿಗೆ ಕೊಡಬೇಕಾಗುವುದೆ?*

**ಶ್ರೀಮಾತೆ :** ಪೃಥ್ವಿಯ ಮೇಲೆ ವಿಸ್ತಾರವಾಗಿ ಹರಡಿಕೊಂಡಿರದ ಪ್ರಜ್ಞೆಯನ್ನು ಇದು ವ್ಯಕ್ತಗೊಳಿಸುತ್ತದೆ. ಇದರರ್ಥ ವಸ್ತುಗಳನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ತಿಳಿದುಕೊಳ್ಳದೆ ಇದ್ದವರಿಗೆ ಅವುಗಳನ್ನು ಕೊಡಬೇಕಾಗಿರುವುದಿಲ್ಲ. ಅರೋವಿಲೆಯ ಆಡಳಿತ ನಡೆಸುವುದಕ್ಕೆ ಅವಶ್ಯವಾದದ್ದು ಎಲ್ಲ ಸಂಪ್ರದಾಯಗಳಿಂದ ಮುಕ್ತವಾಗಿರಬೇಕಾಗುತ್ತದೆ ಮತ್ತು ಅತಿಮಾನಸ ದೈವೀಸತ್ಯದ ಬಗ್ಗೆ ಅರಿವುಳ್ಳದ್ದಾಗಿರಬೇಕಾಗುತ್ತದೆ.

**(CWM, 13/208–09)** **– ಶ್ರೀಮಾತೆ**

*

**ಪ್ರಶ್ನೆ :** *ಅರೋವಿಲೆಗಾಗಿ ಯಾವ ಬಗೆಯ ರಾಜಕೀಯ ಸಂಘಟನೆಯನ್ನು ಬಯಸುವಿರಿ?*

**ಶ್ರೀಮಾತೆ :** ಮೋಜಿನದೆನಿಸುವ ಒಂದು ವ್ಯಾಖ್ಯೆ ನನಗೆ ಹೊಳೆಯುತ್ತಿದೆ. ಅದು "ದೈವೀ ಅರಾಜಕತೆ." ಆದರೆ ಜಗತ್ತು ಅದನ್ನು ಅರ್ಥಮಾಡಿಕೊಳ್ಳಲಾರದು. ಜನರು ತಮ್ಮ ಚೈತ್ಯಸತ್ತೆಯ ಬಗ್ಗೆ ಅರಿವುಳ್ಳವರಾಗಬೇಕು ಮತ್ತು ತಮ್ಮನ್ನು ಸ್ವಯಂ ಪ್ರೇರಣೆಯಿಂದ ಸಂಘಟಿಸಿಕೊಳ್ಳಬೇಕು, ಅಲ್ಲಿ ಸ್ಥಿರಗೊಳಿಸಲಾದ ಕಾಯ್ದೆಗಳು, ನಿಯಮಗಳು ಇರುವುದಿಲ್ಲ. – ಅದು ಆದರ್ಶಪ್ರಾಯವಾದದ್ದು.

ಇದಕ್ಕಾಗಿ ಮನುಷ್ಯ ತನ್ನ ಚೈತ್ಯಸತ್ತೆಯೊಡನೆ ಸಂಪರ್ಕ ಪಡೆಯಬೇಕು ಮತ್ತು ಅದರಿಂದ ಮಾರ್ಗದರ್ಶನ ಪಡೆಯಬೇಕು ಮತ್ತು ಅಹಂಕಾರದ ಅಧಿಕಾರ, ಪ್ರಭಾವಗಳು ಮಾಯವಾಗಬೇಕು.

**(CWM, 13/219)** **– ಶ್ರೀಮಾತೆ**

*

**ಭಿಕ್ಷೆ ಬೇಡುವುದು ಬೇಡ, ಪೋಲೀಸರು ಬೇಡ, ಸೆರೆಮನೆಗಳು ಬೇಡ**

ಅರೋವಿಲೆಯಲ್ಲಿ ಭಿಕ್ಷೆ ಬೇಡುವುದಕ್ಕೆ ಅನುಮತಿ ನೀಡುವುದಿಲ್ಲ. ದಾರಿಯ ಮೇಲೆ ಭಿಕ್ಷೆ ಬೇಡುವ ಜನರನ್ನು ಇಲ್ಲಿ ಹೇಳಿದ ರೀತಿಯಲ್ಲಿ ಹಂಚಿಕೊಡ–ಲಾಗುವುದು: ಮಕ್ಕಳನ್ನು ಶಾಲೆಗೆ, ವಯಸ್ಸಾದವರನ್ನು ಒಂದು ಮನೆಗೆ,

ರೋಗಗ್ರಸ್ತರಾದವರನ್ನು ದವಾಖಾನೆಗೆ, ಆರೋಗ್ಯದಿಂದ ಇದ್ದವರನ್ನು ಕಾರ್ಯ ಕೈಕೊಳ್ಳುವುದಕ್ಕೆ ಕಳಿಸಿಕೊಡಲಾಗುವುದು.

ಇದಕ್ಕಾಗಿ ಒಂದು ಶಾಲೆ, ಒಂದು ಮನೆ, ಒಂದು ದವಾಖಾನೆ ಮತ್ತು ವಿಶೇಷ ಕಾರ್ಯ ಕ್ಷೇತ್ರಗಳು ಇವೆಲ್ಲವುಗಳನ್ನು ವ್ಯವಸ್ಥಿತಗೊಳಿಸಲಾಗುವುದು. ಅವರನ್ನು ಉಳಿದವರೊಂದಿಗೆ ಮಿಶ್ರಣಗೊಳ್ಳಲು ಅವಕಾಶ ಮಾಡಿಕೊಡುವುದಿಲ್ಲ, ಏಕೆಂದರೆ ಕೆಲವು ಜನರು ಹೊರಗಿನಿಂದ ಬಂದು ರಸ್ತೆಗಳ ಮೇಲೆ ಭಿಕ್ಷೆ ಬೇಡಲು ಪ್ರಾರಂಭಿಸಬಹುದು.

ಅಲ್ಲಿ ಪೊಲೀಸರು ಇರುವುದಿಲ್ಲ. ಅಲ್ಲಿರಬೇಕಾದವರಿಗೆ ಸರಿಯಾದ ಶಬ್ದ ಸಿಗುತ್ತಿಲ್ಲ, ಕಾವಲುಗಾರರ ಮೇಳ, ರಕ್ಷಕರ ಒಂದು ದೊಡ್ಡ ಸೇನೆ, ಜಪಾನಿನ ಅಗ್ನಿಶಾಮಕ ದಳದವರು, ಅವರು ವ್ಯಾಯಾಮಪಟುಗಳಾಗಿರುತ್ತಾರೆ. ಅಪಘಾತ–ಗಳಾದಾಗ, ಭೂಕಂಪಗಳಾದಾಗ ಅವರು ಎಲ್ಲವನ್ನೂ ಕೈಕೊಳ್ಳುತ್ತಾರೆ. ಅವರು ಮನೆಗಳ ಮೇಲೆ ಹತ್ತಿ ಹೋಗುತ್ತಾರೆ. ಪೊಲೀಸರ ಬದಲಾಗಿ ರಕ್ಷಕರ ದೊಡ್ಡ ಸೇನೆಯಿರುತ್ತದೆ, ಅವರು ನಗರದ ಭಿನ್ನ ಭಾಗಗಳಲ್ಲಿ ನಿಯಮಿತವಾಗಿ ಹೋಗುತ್ತಾರೆ, ತಮ್ಮ ಆವಶ್ಯಕತೆ ಇದೆಯೇನೋ ಎಂಬುದನ್ನು ಗಮನಿಸುತ್ತಾರೆ. ಭಿಕ್ಷುಕರು ಇರುವುದು ಕಂಡುಬಂದರೆ ಅವರನ್ನು ನಾನು ಮೇಲೆ ಹೇಳಿದ ರೀತಿಯಲ್ಲಿ ಹಂಚಿ ಕಳಿಸುತ್ತಾರೆ.

ಮಕ್ಕಳಿಗಾಗಿ ಅಲ್ಲಿ ಶಾಲೆಯಿರುತ್ತದೆ, ವಯಸ್ಸಾದವರಿಗಾಗಿ ಒಂದು ಮನೆಯಿರುತ್ತದೆ, ವ್ಯಾಧಿಗ್ರಸ್ತರಿಗಾಗಿ ದುರ್ಬಲರಿಗಾಗಿ ದವಾಖಾನೆ ಇರುತ್ತದೆ ಮತ್ತು ಉಳಿದವರಿಗೆ ಕಾರ್ಯವಹಿಸಿಕೊಡಲು ಒಂದು ಸ್ಥಳವಿರುತ್ತದೆ. ಅಲ್ಲಿ ಎಲ್ಲ ಬಗೆಯ ಕಾರ್ಯಗಳಿರುತ್ತವೆ, ಕಸ ಹೊಡೆಯುವುದರಿಂದ ಹಿಡಿದು ಪ್ರತಿಯೊಂದು ರೀತಿಯ ಕಾರ್ಯವಿರುತ್ತದೆ, ಅವಶ್ಯವಾದ ಕಾರ್ಯವಿರುತ್ತದೆ, ಅವರು ತಮ್ಮ ಜಾಣ್ಮೆಯ ಪ್ರಕಾರ ಅದನ್ನು ಕೈಕೊಳ್ಳುತ್ತಾರೆ. ಇದನ್ನು ಸಂಘಟಿಸಬೇಕಾಗಿದೆ.

ಅತ್ಯವಶ್ಯವಾದ ಕಾರ್ಯಗಳನ್ನು ಕೈಕೊಳ್ಳುವುದನ್ನು ಕಲಿಸಿಕೊಡುವುದಕ್ಕಾಗಿ ಮಕ್ಕಳಿಗೆ ಒಂದು ಶಾಲೆಯಿರುತ್ತದೆ, ಅದು ಅವರು ಕಾರ್ಯಕೈಕೊಳ್ಳಲು ಶಕ್ತರನ್ನಾಗಿ ಮಾಡುತ್ತದೆ. ಅಲ್ಲಿ ಸೆರೆಮನೆ ಇರುವುದಿಲ್ಲ, ಪೊಲೀಸರು ಇರುವುದಿಲ್ಲ.

**(CWM, 13/261–62)** **– ಶ್ರೀಮಾತೆ**

*

## ವೈದ್ಯರಿರುವುದಿಲ್ಲ, ದವಾಖಾನೆಗಳಿರುವುದಿಲ್ಲ

ರೋಗಗಳು ಇಲ್ಲದೆ ಇದ್ದಾಗ ವೈದ್ಯರ ಅಸ್ತಿತ್ವವಿರುವುದಿಲ್ಲ. ವೈದ್ಯರು ರೋಗಗಳಿಗೆ ಪ್ರಜ್ಞಾಪೂರ್ವಕವಾಗಿ ಉತ್ತೇಜನ ನೀಡುತ್ತಾರೆ ಎಂದು ನಾನು ಹೇಳುವುದಿಲ್ಲ, ಆದರೆ ಅವುಗಳೊಂದಿಗೆ ಬಹಳ ಸ್ನೇಹಪರರಾಗಿರುತ್ತಾರೆ.

ಅದು ಬಹಳ ಸೂಕ್ಷ್ಮವಾದ ವಿಷಯ, ಆದರೆ ಪರಿಪೂರ್ಣವಾಗಿ ಸತ್ಯವಾದದ್ದು.

ದೈವೀ ಪ್ರಜ್ಞೆಯೊಂದಿಗೆ (ಅದನ್ನು ವಿಶ್ವಂಭರ ಪ್ರಜ್ಞೆ ಎಂದು ಕರೆಯೋಣ) ಕೊಡಲಾದ ಒಂದು ಕಂಪನಶೀಲ ಜೀವಕೋಶಗಳ ಗೋಚರ ಸಂಗತಿ ಇರುವುದನ್ನು ನಾನು ನೋಡುತ್ತೇನೆ ಮತ್ತು ನಂತರ ಅದೇ ವಿಷಯವನ್ನು ವೈದ್ಯಕೀಯ ಪ್ರಜ್ಞೆಯಿಂದ ನೋಡಿದಾಗ – ನಿಮಗೆ ಅದು ತಿಳಿದಿದ್ದರೆ ಅದೆಷ್ಟು ಬದಲಾಗಿರುತ್ತದೆ ಎಂಬುದನ್ನು ನೋಡುವಿರಿ! ಪ್ರಾರಂಭದಲ್ಲಿ ಅದು ಮೂರ್ತ–ರೂಪದ ಗುಣಲಕ್ಷಣವನ್ನು ಹೊಂದಿರುತ್ತದೆ (ಹಾಗಿಲ್ಲದಿದ್ದರೆ ಅದರಲ್ಲಿರುವುದಿಲ್ಲ) ಮತ್ತು ನಂತರ ಅದು "ಮಾರಕ" ಮತ್ತು "ತಪ್ಪಿಸಿಕೊಳ್ಳಲಾಗದಂತಹದು" ಇವುಗಳ ನಡುವಿರುತ್ತದೆ. ಅದನ್ನು ಹೇಗೆ ವಿವರಿಸಿ ಹೇಳಬೇಕೆಂದು ನನಗೆ ತಿಳಿಯುತ್ತಿಲ್ಲ. ಅದು ಒಂದು ಬಗೆಯ ಕಟ್ಟುನಿಟ್ಟಿನ ವಿಧಿಯ ಹಾಗಿರುತ್ತದೆ. "ಓಹ್ ಅದೊಂದು ರೋಗ" ಎಂದು ಅವರು ಹೇಳಿದಾಗ – ಅದು ಮುಗಿದು ಹೋಗಿರುತ್ತದೆ. ಮತ್ತು ಅದು ಸತ್ಯವಾದದ್ದಲ್ಲ, "ರೋಗ" ಎಂದು ಹೇಳಬಹುದಾದ ವಿಷಯವಿರುವುದಿಲ್ಲ, ಅಲ್ಲಿ ಒಂದೇ ಬಗೆಯ ಎರಡು ಸಂದರ್ಭಗಳಿರುವುದಿಲ್ಲ. ಹಾಗಾಗಿ ಅವುಗಳ ವಾತಾವರಣ ಒಂದು ಸಮಸ್ಯೆಯಾಗಿರುತ್ತದೆ.

**ಪ್ರಶ್ನೆ :** *ದವಾಖಾನೆಗಳು ನನ್ನನ್ನು ಉಸಿರುಗಟ್ಟಿಸುತ್ತವೆ. ಅವುಗಳಲ್ಲಿ ನಾನು ಹೆಚ್ಚು ಹೆಚ್ಚಾಗಿ ರೋಗಪೀಡಿತನಾದೆ.*

**ಶ್ರೀಮಾತೆ :** ಹೌದು, ಇಲ್ಲಿರುವ ದವಾಖಾನೆಯಲ್ಲಿ ನಿನಗೆ ಹಾಗಿದ್ದುದು (ವಾಸ್ತವದಲ್ಲಿ ಸ್ವಲ್ಪಮಟ್ಟಿಗಿನ ಆಂತರಿಕ ಅಸ್ತವ್ಯಸ್ತತೆ) ರೋಗವಾಗಿ ಪರಿಣಮಿಸಿತು.

ಅದಿರುವುದು ಹಾಗೆ.

ಇದು ವಿಶೇಷವಾಗಿ ಯಾರೋ ಒಬ್ಬ ವೈದ್ಯನ ವಿರುದ್ಧವಾಗಿರುವುದಲ್ಲ. (ವೈದ್ಯರೇ ಸ್ವತಃ ತಮಗರಿವಿಲ್ಲದೆಯೇ ಆ ವಾತಾವರಣದಿಂದ ವೇದನೆಗೆ ಒಳಗಾಗುತ್ತಾರೆ): ಅದು ವೈದ್ಯಕೀಯ ವಾತಾವರಣ.

ರೋಗ ವೈದ್ಯರ ಅಸ್ತಿತ್ವಕ್ಕೆ ಮೂಲಕಾರಣ. ರೋಗಗಳಿಲ್ಲದಿದ್ದರೆ ವೈದ್ಯರೇ ಇರುತ್ತಿರಲಿಲ್ಲ, ಅವರ ಆವಶ್ಯಕತೆ ಇರುತ್ತಿರಲಿಲ್ಲ, ಅವರು ಬೇರೆ ಏನೋ ಆಗಿರುತ್ತಿದ್ದರು, ವೈದ್ಯರಾಗಿರುತ್ತಿರಲಿಲ್ಲ, ಹೆಚ್ಚು ಉಪಯುಕ್ತರಾಗುವ ಏನೋ ಒಂದಾಗಿರುತ್ತಿದ್ದರು, ಅದು ನನಗೆ ತಿಳಿಯದು, – ಮಾನವ ದೇಹ ರಚನೆಯ ವಿಜ್ಞಾನಿಗಳು, ಆಹಾರವನ್ನು ಸರಿಯಾಗಿ ಉಪಯೋಗಿಸಲು ತಿಳಿಸಿಕೊಡುವ ವಿಜ್ಞಾನಿಗಳು. ತಿಳಿದುಕೊಳ್ಳಬೇಕಾದ ವಿಷಯಗಳಿಗಾಗಿರುವ ಯೋಗ್ಯರಾದ ಬೇರೆ ಎಲ್ಲ ಬಗೆಯ ವಿಜ್ಞಾನಿಗಳು, ಆದರೆ ವೈದ್ಯರಲ್ಲ – ರೋಗ ಚಿಕಿತ್ಸೆಮಾಡಲು ವೈದ್ಯನಿರುತ್ತಾನೆ, ಹಾಗಾಗಿ ವೈದ್ಯರುಗಳಿರಬೇಕಾದರೆ ರೋಗಗಳಿರಬೇಕು.

ವೈದ್ಯರು ಅಸ್ತಿತ್ವದಲ್ಲಿ ಬರುವುದಕ್ಕಿಂತ ಮೊದಲು ರೋಗಗಳಿದ್ದವು ಎಂಬುದನ್ನು ಕುರಿತು ನನಗೆ ಖಚಿತತೆಯಿಲ್ಲ – ಅಲ್ಲಿ ಅಸ್ತವ್ಯಸ್ತತೆಗಳಿದ್ದವು, ಅಪಘಾತಗಳಾಗುತ್ತಿದ್ದವು, ಎಲ್ಲ ಬಗೆಯ ವಿಷಯಗಳಿದ್ದವು, ಏಕೆಂದರೆ ಅದೆಲ್ಲವೂ ಅಸ್ತಿತ್ವದಲ್ಲಿದೆ, ಆದರೆ "ರೋಗ" ಎಂಬ ಗುರುತುಪಟ್ಟಿ (label) ಇರಲಿಲ್ಲ. ವೈದ್ಯರು ಹೆಚ್ಚು ಪಂಡಿತರಾದ ಹಾಗೆ (ಎಂದರೆ ತಮ್ಮ ವ್ಯವಹಾರ ಕುರಿತು ಹೆಚ್ಚು ಒಳ್ಳೆಯ ರೀತಿಯಲ್ಲಿ ತಿಳಿದುಕೊಂಡಾಗ) ರೋಗಗಳು (ಶ್ರೀಮಾತೆಯವರು ಮುಷ್ಠಿಯನ್ನು ಬಿಗಿಹಿಡಿದುಕೊಳ್ಳುತ್ತಾರೆ) ದೃಢ ಹಾಗೂ ಸ್ಥಿರವಾಗುತ್ತವೆ. ಹಾಗಾಗಿ ವೈದ್ಯರ ಉಪಯುಕ್ತತೆ ಅವುಗಳಿಗೆ ಚಿಕಿತ್ಸೆ ನೀಡುವುದಾಗಿರುತ್ತದೆ. – ರೋಗಗಳಿಲ್ಲದಿದ್ದರೆ ವೈದ್ಯರು ಉಪಯುಕ್ತತೆ ಇರುವುದಿಲ್ಲ.

ವೈದ್ಯರು ಜೀವನದ ವಿಜ್ಞಾನಿಗಳಾಗಬೇಕು... ಸ್ವಲ್ಪಮಟ್ಟಿಗೆ ಚೀನಾ ದೇಶದ ಜನರು ಅಂತಹ ವಿಚಾರವನ್ನಿಟ್ಟುಕೊಂಡಿದ್ದರು. ಈಗ ಹೇಗಿದೆ ಎಂಬುದು ನನಗೆ ತಿಳಿದಿಲ್ಲ, ಆದರೆ ಪ್ರಾಚೀನ ಕಾಲದಲ್ಲಿ ಪ್ರತಿಯೊಂದು ಕುಟುಂಬಕ್ಕೆ ಒಬ್ಬ ವೈದ್ಯ–ನಿರುತ್ತಿದ್ದ. (ಒಬ್ಬ ವೈದ್ಯನ ಕಾಳಜಿಯಡಿಯಲ್ಲಿ ಹಲವಾರು ಕುಟುಂಬ–ಗಳಿರಬಹುದು) ಮತ್ತು ಎಲ್ಲರೂ ಒಳ್ಳೆಯ ಆರೋಗ್ಯದಿಂದಿದ್ದಾಗ ವೈದ್ಯನಿಗೆ ಹಣ ನೀಡುತ್ತಿದ್ದರು... ಯಾರಾದರೊಬ್ಬರು ರೋಗಪೀಡಿತರಾದರೆ ಹಣಕೊಡುವುದನ್ನು ನಿಲ್ಲಿಸಿಬಿಡುತ್ತಿದ್ದರು.

**(ಅನುಯಾಯಿಬ್ಬನೊಡನೆ ಮಾತುಕತೆ, 13–11–1965) – ಶ್ರೀಮಾತೆ**

*

## ಸ್ವ–ಇಚ್ಛೆಯಿಂದ ನೆರವು ನೀಡುವಿಕೆ

ಹಾಗಾಗಿ ಅದು ಸ್ಪಷ್ಟವಾಗಿದೆ. ಅಲ್ಲಿ ತೆರಿಗೆ ಕೊಡುವುದಿರುವುದಿಲ್ಲ, ಆದರೆ ಪ್ರತಿಯೊಬ್ಬನೂ ತನ್ನ ಪಾಲಿನ ಕಾರ್ಯಕೈಕೊಳ್ಳುವುದರ ಮೂಲಕ ಇಲ್ಲವೆ ಹಣ ನೀಡುವುದರ ಮೂಲಕ ಸಾಮೂಹಿಕ ಯೋಗಕ್ಷೇಮಕ್ಕೆ ನೆರವು ನೀಡಬೇಕು. ಕೇವಲ ಹಣವನ್ನಿಟ್ಟುಕೊಂಡವರು ಹಣ ಕೊಡುತ್ತಾರೆ. ಸತ್ಯ ಹೇಳುವುದಾದರೆ "ಕಾರ್ಯ" ಆಂತರಿಕ ಕಾರ್ಯವಾಗಬಲ್ಲದು – ಆದರೆ ಮನುಷ್ಯ ಅದನ್ನು ಹೇಳಲಾರ, ಏಕೆಂದರೆ ಜನರು ಸಾಕಷ್ಟು ಪ್ರಾಮಾಣಿಕರಾಗಿರುವುದಿಲ್ಲ. ಕಾರ್ಯ ರಹಸ್ಯ ರೀತಿಯದಾಗಿರಬಹುದು, ಸಂಪೂರ್ಣವಾಗಿ ಆಂತರಿಕ ಕಾರ್ಯವಾಗಿರ–ಬಹುದು, ಆದರೆ ಅದಕ್ಕಾಗಿ ಅದು ಸಂಪೂರ್ಣವಾಗಿ ನಿಷ್ಕಪಟವಾದದ್ದು, ಸತ್ಯವಾದದ್ದು ಆಗಿರಬೇಕು ಮತ್ತು ಅದಕ್ಕಾಗಿ ದಕ್ಷತೆ ಇರಬೇಕು, ನಟನೆಯಿರಬಾರದು. ಆದರೆ ಅವಶ್ಯವಾಗಿ ಶಾರೀರಿಕ ಶ್ರಮದಿಂದ ಕೈಕೊಳ್ಳುವ ಕಾರ್ಯವಲ್ಲ.

*

ಅದು ಕಮ್ಯುನಿಷ್ಟ ಪದ್ಧತಿಯನ್ನು ಒಂದು ಬಗೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಾಗಿದೆ – ಆದರೆ ಸಮತಲ ಮಾಡುವ ಮನೋಭಾವದಿಂದಲ್ಲ; ದಕ್ಷತೆ ಹಾಗೂ ಸ್ಥಾನಮಾನಗಳನ್ನು ಗಮನದಲ್ಲಿಟ್ಟುಕೊಂಡು ಮಾಡಿಕೊಳ್ಳುವುದಾಗಿದೆ – ಮನೋವೈಜ್ಞಾನಿಕವಾದದ್ದಲ್ಲ, ಬೌದ್ಧಿಕವಾದದ್ದಲ್ಲ, ಆದರೆ ಪ್ರತಿಯೊಬ್ಬ ತನ್ನ ಆಂತರಿಕ ಸ್ಥಾನಮಾನದ ಪ್ರಕಾರ ಕೈಕೊಂಡದ್ದು.

ಪ್ರಾಪಂಚಿಕವಾಗಿ ಪ್ರತಿಯೊಬ್ಬ ಮಾನವಸತ್ತೆಗೆ ಹಕ್ಕಿದೆ ಎಂಬುದು ಸತ್ಯವಾದದ್ದು... ಆದರೆ ಇಲ್ಲಿ ಹಕ್ಕಿನ ಪ್ರಶ್ನೆಯಿಲ್ಲ... ಸಂಘಟನೆಯಲ್ಲಿ ಇರಬೇಕಾದುದೆಂದರೆ, ಅದನ್ನು ಹೇಗೆ ವ್ಯವಸ್ಥಿತಗೊಳಿಸಬೇಕೆಂದರೆ, ಪ್ರತಿಯೊಬ್ಬನ ಪ್ರಾಪಂಚಿಕ ಆವಶ್ಯಕತೆಗಳನ್ನು ಪೂರೈಸಿಗೊಳ್ಳುವಂತಿರಬೇಕು, ಹಕ್ಕುಗಳ ಸಮಾನತೆಯ ವಿಚಾರಗಳಿಗನುಗುಣವಾಗಿ ಅಲ್ಲ, ಆದರೆ ಕನಿಷ್ಠ ಮಟ್ಟದ ಆವಶ್ಯಕತೆಗಳನ್ನು ಆಧಾರವಾಗಿರಿಸಿಕೊಂಡಿರಬೇಕು. ಒಮ್ಮೆ ಅದು ಸ್ಥಾಪಿತಗೊಂಡರೆ, ಪ್ರತಿಯೊಬ್ಬನೂ ತನ್ನ ಜೀವನವನ್ನು ಸಂಘಟಿಸಲು ಮುಕ್ತನಾಗಿರಬೇಕು – ಅವನ ಹಣಕಾಸಿನ ಅನುಕೂಲತೆಯ ಮೂಲಕವಲ್ಲ, ಆದರೆ ಅವನ ಆಂತರಿಕ ಆವಶ್ಯಕತೆ–ಗಳಿಗನುಗುಣವಾಗಿ ಹಾಗಿರಬೇಕು.

**(CWM, 13/286)** **– ಶ್ರೀಮಾತೆ**

*

# ಭವಿಷ್ಯತ್ತನ್ನು ರಕ್ಷಿಸುವುದು

## ಹಣ ಗಳಿಸುವ ಉದ್ದೇಶಕ್ಕಾಗಿ ಹಣವಿರುವುದಿಲ್ಲ

ಮೊಟ್ಟಮೊದಲಿಗೆ, ಆರ್ಥಿಕ ದೃಷ್ಟಿಕೋನದಿಂದ, ನಮ್ಮ ಕ್ರಿಯೆಗೆ ಆಧಾರ–ವಾಗಿರುವ ತತ್ವ ಹೀಗಿದೆ: "ಹಣ ಗಳಿಸುವ ಉದ್ದೇಶಕ್ಕಾಗಿ ಹಣವಿರುವುದಿಲ್ಲ." ಹಣ ಇನ್ನೂ ಹೆಚ್ಚು ಹಣ ಮಾಡಬೇಕೆಂಬ ವಿಚಾರ ಒಂದು ಮಿಥ್ಯೆ, ಒಂದು ವಿಕೃತಿ.

ಹಣ ಒಂದು ಗುಂಪಿನ, ಒಂದು ದೇಶದ, ಇನ್ನೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಇಡೀ ಪೃಥ್ವಿಯ ಅಭಿವೃದ್ಧಿಯನ್ನು, ಉತ್ಪಾದನಾಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಇರುತ್ತದೆ. ಹಣ ಒಂದು ಸಾಧನ, ಶಕ್ತಿ, ಸಾಮರ್ಥ್ಯ, ಅದರ ಕೊನೆ ಅದರಲ್ಲಿಯೇ ಇಲ್ಲ. ಉಳಿದೆಲ್ಲ ಶಕ್ತಿಗಳು ಹಾಗೂ ಸಾಮರ್ಥ್ಯಗಳ ಹಾಗೆ ಹಣ ಚಲನೆಯ ಮೂಲಕ, ಚಲಾವಣೆಯ ಮೂಲಕ ಬೆಳೆಯುತ್ತದೆ ಮತ್ತು ತನ್ನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಸಂಗ್ರಹಿಸುವುದರ ಮೂಲಕವಲ್ಲ, ನಿಂತಲ್ಲಿಯೇ ನಿಲ್ಲುವಂತೆ ಮಾಡುವುದರಿಂದಲ್ಲ.

ಜಗತ್ತಿಗೆ ಮೂರ್ತರೂಪದ ಉದಾಹರಣೆ ಕೊಡುವುದರ ಮೂಲಕ ಅದಕ್ಕೆ ನಾವು ಸಿದ್ಧಮಾಡಿ ತೋರಿಸಲು ಪ್ರಯತ್ನಿಸುವುದೇನೆಂದರೆ ಆಂತರಿಕ ಮನೋ–ವೈಜ್ಞಾನಿಕ ಸಿದ್ಧಿ ಮತ್ತು ಬಾಹ್ಯ ಸಂಘಟನೆ ಇವುಗಳ ಮೂಲಕ ಜಗತ್ತೊಂದನ್ನು ಸೃಷ್ಟಿಸಬಹುದು, ಅದರಲ್ಲಿ ಮಾನವನಿಗೆ ದುಃಸ್ಥಿತಿಯನ್ನುಂಟುಮಾಡುವ ಎಲ್ಲ ಕಾರಣಗಳನ್ನೂ ತೊಡೆದು ಹಾಕಬಹುದು ಎಂಬುದಾಗಿದೆ.

**(CWM, 13/148)** **– ಶ್ರೀಮಾತೆ**

*

## ಆರ್ಥಿಕ ಸಮಸ್ಯೆಗೆ ಪರಿಹಾರ

**ಪ್ರಶ್ನೆ :** *ಮನುಷ್ಯನ ಪ್ರಜ್ಞೆಯನ್ನು ಉತ್ತಮಗೊಳಿಸುವುದರಿಂದ ಅವನ ಆರ್ಥಿಕ ಸ್ಥಿತಿ ಸ್ಥಿರಗೊಳ್ಳುವುದೆ?*

**ಶ್ರೀಮಾತೆ :** "ಪ್ರಜ್ಞೆಯನ್ನು ಉತ್ತಮಗೊಳಿಸುವುದು" ಎಂಬುದರ ಅರ್ಥ ಹೆಚ್ಚಿಸಿಕೊಂಡ, ಭವ್ಯವಾದ ಪ್ರಜ್ಞೆ, ಅದರ ಸಂಘಟನೆಯನ್ನು ಉತ್ತಮ–

ಗೊಳಿಸುವುದು ಎಂದಾದರೆ ಆಗ ಪರಿಣಾಮವಾಗಿ ಅಲ್ಲಿ ಸ್ವಾಭಾವಿಕವಾಗಿ ಬಾಹ್ಯ ವಸ್ತು–ವಿಷಯಗಳ ಮೇಲೆ, ಆರ್ಥಿಕ ಸ್ಥಿತಿಯನ್ನು ಒಳಗೊಂಡು, ಹೆಚ್ಚು ನಿಯಂತ್ರಣವಿರುತ್ತದೆ. ಹಾಗೆಯೇ ಸ್ವಾಭಾವಿಕವಾಗಿ, ಮನುಷ್ಯನಲ್ಲಿ ಪ್ರಜ್ಞೆ ಉತ್ತಮಗೊಂಡಿದ್ದರೆ ತನ್ನ ಆರ್ಥಿಕ ಪರಿಸ್ಥಿತಿಯಂತಹ ವಿಷಯಗಳನ್ನು ಕುರಿತು ಅವನು ಪೂರ್ವಮಗ್ನನಾಗಿರುವುದಿಲ್ಲ.

*

**ಆರ್ಥಿಕ ಪರಿಸ್ಥಿತಿಗೆ ಪರಿಹಾರ**

ಎರಡು ಸಮಸ್ಯೆಗಳ ಸಮನ್ವಯದತ್ತ ತಲುಪುವಿಕೆ:

1) ಆವಶ್ಯಕತೆಗಳಿಗೆ ಅನುಗುಣವಾಗಿ ಉತ್ಪಾದನೆಯನ್ನು ಸರಿಹೊಂದಿಸುವುದು;

2) ಉತ್ಪಾದನೆಗೆ ಆವಶ್ಯಕತೆಗಳನ್ನು ಸರಿಹೊಂದಿಸುವುದು.

**(CWM, 15/53)** **– ಶ್ರೀಮಾತೆ**

*

**ಹಣವನ್ನು ಕುರಿತು ಹೋರಾಟ**

ಹಣವನ್ನು ಕುರಿತು ಇರುವ ಹೋರಾಟವನ್ನು "ಒಡೆತನದ ಹೋರಾಟ" ಎಂದು ಕರೆಯಬಹುದು, ಆದರೆ ಇರುವ ಸತ್ಯವೆಂದರೆ ಹಣ ಯಾರಿಗೂ ಸೇರಿರುವುದಿಲ್ಲ. ಹಣವನ್ನು ವಶದಲ್ಲಿ ಇಟ್ಟುಕೊಳ್ಳುವ ವಿಚಾರ ಪ್ರತಿಯೊಂದನ್ನೂ ತಿರುಚಿ ಹಾಕಿದೆ. ಹಣ ವಶಪಡಿಸಿಕೊಳ್ಳುವಿಕೆಯ ವಿಷಯವಾಗಬಾರದು. ಸಾಮರ್ಥ್ಯದ ಹಾಗೆ ಅದು ಕ್ರಿಯೆಯ ಸಾಧನ, ಅದನ್ನು ನಿಮಗೆ ಕೊಡಲಾಗಿರುತ್ತದೆ. ಅದನ್ನು ನಿಮಗೆ ಕೊಟ್ಟವನ ಸಂಕಲ್ಪದ ಪ್ರಕಾರ ಉಪಯೋಗ ಮಾಡಬೇಕು ಎಂದರೆ ಅವ್ಯೈಯಕ್ತಿಕವಾಗಿ, ಜ್ಞಾನೋದಯ ಪಡೆದ ರೀತಿಯಲ್ಲಿ ಉಪಯೋಗಿಸಬೇಕು. ನೀವು ಹಣವನ್ನು ಪ್ರಸರಿಸುವ ಹಾಗೂ ಉಪಯೋಗ ಮಾಡುವ ಒಳ್ಳೆಯ ಉಪಕರಣವಾಗಿದ್ದರೆ ಆಗ ಅದು ನಿಮ್ಮ ಬಳಿ ಬರುತ್ತದೆ. ಅದನ್ನು ಹೇಗೆ ಉಪಯೋಗಿಸಬೇಕೆಂದಿರುತ್ತದೆಯೋ ಹಾಗೂ ಹಾಗೆ ಉಪಯೋಗಿಸಲು ನಿಮ್ಮಲ್ಲಿ ದಕ್ಷತೆಯಿರುವ ಪ್ರಮಾಣದಲ್ಲಿ ಅದು ಬರುತ್ತದೆ. ಅದು ನಿಜವಾದ ಯಾಂತ್ರಿಕ ವ್ಯವಸ್ಥೆ.

ಹೊಂದಿರಬೇಕಾದ ನಿಜವಾದ ಮನೋಭಾವ: ಪೃಥ್ವಿಯ ಮೇಲಿನ ಕಾರ್ಯ ನಿರ್ವಹಿಸುವುದಕ್ಕಾಗಿ ಒಂದು ಸಾಮರ್ಥ್ಯದ ರೂಪದಲ್ಲಿ ಹಣವಿದೆ. ಆ ಕಾರ್ಯ ದೈವೀಶಕ್ತಿಗಳನ್ನು ಸ್ವೀಕರಿಸಿ, ಪ್ರಕಟಿಸಲು ಪೃಥ್ವಿಯನ್ನು ತಯಾರು ಮಾಡುವುದಕ್ಕೆ ಅವಶ್ಯವಾಗಿದೆ ಮತ್ತು ಅದು ಎಂದರೆ ಅದನ್ನು ಉಪಯೋಗಿಸುವ ಸಾಮರ್ಥ್ಯ – ಅತ್ಯಂತ ಸ್ಪಷ್ಟವಾದ, ಹೆಚ್ಚಿನ ರೀತಿಯಲ್ಲಿ ಗ್ರಹಿಸಲು ಸಾಧ್ಯವಾಗುವ ಮತ್ತು ಸತ್ಯವಾದ ದರ್ಶನವಿರುವವರ ಕೈಗಳಲ್ಲಿ ಬರಬೇಕು.

ಪ್ರಾರಂಭದ ದಿಶೆಯಲ್ಲಿ ಗಮನಿಸಬೇಕಾದ ವಿಷಯ, ಆದರೆ ಇದು ಪ್ರಾಥಮಿಕ ಸ್ವರೂಪದ್ದು: ಹಣವನ್ನು ವಶದಲ್ಲಿ ಇಟ್ಟುಕೊಳ್ಳುವ ಭಾವನೆಯನ್ನು ಹೊಂದದೆ ಇರುವುದಾಗಿದೆ – ಅದರ ಅರ್ಥವೇನು? “ಅದು ನನ್ನದು” ಎಂದು ಹೇಳುವುದಾಗಿದೆ. ಈಗ ನನಗೆ ಸರಿಯಾಗಿ ಅರ್ಥವಾಗುತ್ತಿಲ್ಲ. ಜನರು ಅದು ತಮಗೆ ಸೇರಿರಲಿ ಎಂದು ಏಕೆ ಬಯಸುತ್ತಾರೆ? ಅದರಿಂದಾಗಿ ಅವರು ಅದನ್ನು ತಮಗೆ ಇಷ್ಟವಾದ ರೀತಿಯಲ್ಲಿ ಉಪಯೋಗಿಸಬಹುದು, ಅದರೊಂದಿಗೆ ಏನು ಬೇಕಾದದ್ದನ್ನು ಮಾಡಬಹುದು, ತಮ್ಮದೇ ಕಲ್ಪನೆಗಳ ಪ್ರಕಾರ ಅದರ ನಿರ್ವಹಣೆ ಮಾಡಬಹುದು ಎಂದೇ? ಅದಿರುವುದು ಹಾಗೆ. ಇನ್ನೊಂದೆಡೆಗೆ ಕೆಲವು ಜನರಿರುತ್ತಾರೆ, ಅವರು ಹಣವನ್ನು ಸಂಗ್ರಹಿಸಿ ಎಲ್ಲಿಯೋ ಒಂದೆಡೆಯಲ್ಲಿ ಇಡಲು ಇಷ್ಟಪಡುತ್ತಾರೆ. ಆದರೆ ಅದೊಂದು ರೋಗ, ಯಾವಾಗಲೂ ತಮ್ಮ ಬಳಿ ಸ್ವಲ್ಪ ಹಣವಿರಲಿ ಎಂಬುದನ್ನು ನಿಶ್ಚಿತಪಡಿಸಿಕೊಳ್ಳಲು ಅವರು ಅದನ್ನು ಕೂಡಹಾಕು(hoard)ತ್ತಾರೆ. ಮನುಷ್ಯ ಸ್ವೀಕರಿಸುವ ಹಾಗೂ ಕಳಿಸಿಕೊಡುವ ಸ್ಥಿರಸ್ಥಾನ(station)ದ ಹಾಗಿರಬೇಕು, ವ್ಯಾಪ್ತಿ ಹೆಚ್ಚು ವಿಸ್ತಾರವಾದಂತೆ (ವ್ಯಕ್ತಿವಿಶಿಷ್ಟತೆ[personal]ಗೆ ವಿರುದ್ಧವಾದದ್ದು), ಅವ್ಯೈಯಕ್ತಿಕವಾದಂತೆ, ಗ್ರಹಿಕೆ ಹೆಚ್ಚಾದಂತೆ, ವಿಸ್ತಾರವಾದಂತೆ ಅದು ಹೆಚ್ಚಿನ ಶಕ್ತಿಯನ್ನು ಹಿಡಿದುಕೊಳ್ಳಬಲ್ಲದು ಎಂಬುದನ್ನು ಜನರು ಅರಿತುಕೊಳ್ಳುವರು. (“ಶಕ್ತಿ” ಶಬ್ದವನ್ನು ಪ್ರಾಪಂಚಿಕ ರೀತಿಗೆ ಹೊಂದಾಣಿಕೆಯಾಗುವಂತೆ ತರ್ಜುಮೆ ಮಾಡಿದರೆ ಅದು ನೋಟುಗಳು, ನಾಣ್ಯಗಳು ಇವುಗಳ ಅರ್ಥಕೊಡುತ್ತದೆ.) ಹಿಡಿದಿಟ್ಟುಕೊಳ್ಳುವ ಈ ಸಾಮರ್ಥ್ಯ ಹಣವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಉಪಯೋಗಿಸುವ ದಕ್ಷತೆಯ ಪ್ರಮಾಣದಲ್ಲಿರುತ್ತದೆ – “ಅತ್ಯಂತ ಒಳ್ಳೆಯದು” ಸರ್ವಸಾಧಾರಣ ಪ್ರಗತಿಯ ಪರಿಭಾಷೆಯಲ್ಲಿ ಹೇಳುವುದಾದರೆ ಅದು ಅತಿ ವಿಸ್ತಾರವಾದ ದೃಷ್ಟಿ, ಹೆಚ್ಚಿನ

ಮಟ್ಟದ ತಿಳಿವಳಿಕೆ ಮತ್ತು ಅತ್ಯಂತ ಜ್ಞಾನೋದಯ ಪಡೆದದ್ದು, ನಿಖರವಾದ ಹಾಗೂ ನಿಜವಾದ ಉಪಯೋಗ, ಅಹಂಕಾರದ ತಿರುಚಿಕೊಂಡ ಆವಶ್ಯಕತೆಗಳ ಪ್ರಕಾರವಲ್ಲ, ಆದರೆ ಪೃಥ್ವಿಯ ಉತ್ಕ್ರಾಂತಿ ಹಾಗೂ ಅಭಿವೃದ್ಧಿಗಳಿಗಾಗಿ ಸಾರ್ವತ್ರಿಕ ಆವಶ್ಯಕತೆಗನುಗುಣವಾಗಿ ಇರುವಂತಹದು ಎಂದರೆ ಅತ್ಯಂತ ವಿಸ್ತಾರವಾದ ದೃಷ್ಟಿಗೆ ಅತ್ಯಂತ ಭವ್ಯವಾದ ಯೋಗ್ಯತೆ ಇರುವಂತಹದು.

*

**ಹಣ ಖರ್ಚು ಮಾಡುವುದರ ಹಿಂದೆ ಇರುವ ನಿಜವಾದ ಚಲನೆ**

ತಪ್ಪಾದ ಎಲ್ಲ ಚಲನೆಗಳ ಹಿಂದೆ ಒಂದು ನಿಜವಾದ ಚಲನೆಯಿರುತ್ತದೆ, ಹಾಳಾಗುವುದು ಕನಿಷ್ಠ ಮಟ್ಟದಲ್ಲಿರುವಂತೆ, ಪರಿಣಾಮ ಗರಿಷ್ಠ ಮಟ್ಟದ್ದಾಗುವಂತೆ ನಿರ್ದೇಶನ ಮಾಡುವುದಕ್ಕೆ, ಉಪಯೋಗಿಸುವುದಕ್ಕೆ, ಸಂಘಟಿಸುವುದಕ್ಕೆ ಶಕ್ತರಾಗುವುದರಲ್ಲಿ ಸಂತೋಷವಿರುತ್ತದೆ. ಆ ದೃಷ್ಟಿಯನ್ನು ಹೊಂದುವುದು ಸ್ವಾರಸ್ಯಕರವಾಗಿರುತ್ತದೆ. ಹಣವನ್ನು ಸಂಗ್ರಹ ಮಾಡುವ ಜನರಲ್ಲಿ ಇದು ನಿಜವಾದ ಬದಿಯಾಗಿರುತ್ತದೆ. ಅದು ಹಣವನ್ನು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸುವುದಕ್ಕೆ ಇರುವ ಅರ್ಹತೆಯಾಗಿರುತ್ತದೆ. ಇನ್ನು ಬೇರೆ ಜನರಿದ್ದಾರೆ, ಅವರು ಹಣವನ್ನು ಹೊಂದಲು ಬಹಳ ಇಷ್ಟಪಡುತ್ತಾರೆ ಮತ್ತು ಖರ್ಚುಮಾಡಲು ಬಯಸುತ್ತಾರೆ; ಅದು ಬೇರೆ ವಿಷಯ. ಅವರದು ಉದಾರ ಸ್ವಭಾವ, ಕ್ರಮಬದ್ಧಗೊಳಿಸಿದ್ದಲ್ಲ ಇಲ್ಲವೆ ಸಂಘಟಿಸಿದ್ದಲ್ಲ. ಆದರೆ ನಿಜವಾದ ಎಲ್ಲ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದರಲ್ಲಿ ಸಂತೋಷ ಕಂಡುಕೊಳ್ಳುವುದು ಒಳ್ಳೆಯದು. ಅದು ಒಂದು ರೋಗದ ಸ್ಥಾನದಲ್ಲಿ ಬದಲಾದ ಆರೋಗ್ಯ ಕಂಡುಕೊಂಡ ಹಾಗಿರುತ್ತದೆ, ಮಿಥ್ಯೆಯೊಂದನ್ನು ಸತ್ಯವನ್ನಾಗಿ, ವೇದನೆಯನ್ನು, ಸಂತೋಷವನ್ನಾಗಿ ಬದಲಿಸಿದ ಹಾಗಿರುತ್ತದೆ. ವಿಷಯ ಅದೇ: ಸ್ವಾಭಾವಿಕವಾದ ಯಾವುದಕ್ಕೂ ಅನುಗುಣವಾಗಿರದ ಕೃತ್ರಿಮ ಹಾಗೂ ಮೂರ್ಖತನದ ಆವಶ್ಯಕತೆಯನ್ನು ಬಹಳ ಸ್ವಾಭಾವಿಕವಾದ ಏನೋ ಒಂದಾಗುವಂತೆ ಬದಲು ಮಾಡುವುದು. ಇದನ್ನು ಇಲ್ಲವೆ ಅದನ್ನು ಕೈಕೊಳ್ಳಲು ಇಷ್ಟೊಂದು ಹಣ ಬೇಕು, ಇದನ್ನು ಏರ್ಪಡಿಸಲು ಇಷ್ಟೊಂದು ಹಣ ಬೇಕು, ಅದನ್ನು ರಿಪೇರಿ ಮಾಡುವುದಕ್ಕೆ ಇಷ್ಟೊಂದು ಹಣ ಬೇಕು, ನಿರ್ಮಾಣ ಮಾಡುವುದಕ್ಕೆ, ಸಂಘಟಿಸುವುದಕ್ಕೆ ಅದು

ಒಳ್ಳೆಯದು. ನಿಖರವಾಗಿ ಆವಶ್ಯಕತೆ ಇದ್ದಲ್ಲಿ ಹಣ ಹೋಗುವುದಕ್ಕೆ ವಾಹಿನಿಗಳಾಗಲು ಜನರು ಇಷ್ಟಪಡುತ್ತಾರೆಂದು ನಾನು ತಿಳಿದಿದ್ದೇನೆ: ಸ್ವಾಧೀನಪಡಿಸಿಕೊಳ್ಳುವ ಆವಶ್ಯಕತೆಯಿಂದ ಅಹಂಕಾರದಲ್ಲಿ ರೂಪಾಂತರ–ಗೊಳಿಸಲು ಇಷ್ಟಪಡುವ ಜನರಲ್ಲಿ ಅದು ನಿಜವಾದ ಚಲನೆಯಾಗಬೇಕು.

ಸಂಗ್ರಹ ಮಾಡುವ ಆವಶ್ಯಕತೆ ಮತ್ತು ಖರ್ಚು ಮಾಡುವ ಆವಶ್ಯಕತೆ (ಅವೆರಡೂ ಕುರುಡಾದವುಗಳು ಹಾಗೂ ಅಜ್ಞಾನದವು) ಇವೆರಡರ ಸಂಯೋಜನೆ–ಯಾದಾಗ ಅವು ಒಂದು ಸ್ಪಷ್ಟ ದೃಷ್ಟಿಯತ್ತ ಅತ್ಯಂತ ಪರಿಣಾಮಕಾರಿ ಉಪಯುಕ್ತತೆಯತ್ತ ಕೊಂಡೊಯ್ಯಬಹುದು. ಅದು ಒಳ್ಳೆಯದು. ನಂತರ ಅದನ್ನು ಆಚರಣೆಯಲ್ಲಿ ತರುವ ಸಾಧ್ಯತೆ ನಿಧಾನಗತಿಯಿಂದ ಬರುತ್ತದೆ. ಆದರೆ, ಸ್ವಾಭಾವಿಕವಾಗಿ, ಎಲ್ಲೆಡೆಯಲ್ಲಿ ಒಂದೇ ಕಾಲಕ್ಕೆ ಇರುವುದರ ಮತ್ತು ಎಲ್ಲವನ್ನೂ ಒಂದೇ ವೇಳೆಯಲ್ಲಿ ಕೈಕೊಳ್ಳುವುದರ ಆವಶ್ಯಕತೆ ಸ್ಪಷ್ಟ ವಿಚಾರವಿದ್ದವರಿಗೆ ಹಾಗೂ ಅತ್ಯುಚ್ಚ ನಿಯತ್ತಿ(integrity)ಗೆ ಮಧ್ಯವರ್ತಿಗಳಾದವರಿಗೆ ಇರುತ್ತದೆ. ಆಗ ಹಣದ ಈ ಪ್ರಸಿದ್ಧ ಪ್ರಶ್ನೆ ಪರಿಹಾರ ಕಂಡುಕೊಳ್ಳುತ್ತದೆ.

ಹಣ ಯಾರೊಬ್ಬರಿಗೆ ಸೇರಿರುವುದಿಲ್ಲ. ಹಣ ಸಾಮೂಹಿಕ ಒಡೆತನಕ್ಕೆ ಸೇರಿರುತ್ತದೆ. ಅದನ್ನು ಸಮಗ್ರವಾಗಿ ಗ್ರಹಿಸಬಲ್ಲ ವಿಶ್ವಂಭರ ದೃಷ್ಟಿಯುಳ್ಳವರು ಉಪಯೋಗಿಸಬೇಕು. ಅದಕ್ಕೆ ನಾನು ಒಂದಿಷ್ಟನ್ನು ಅಧಿಕವಾಗಿ ಸೇರಿಸುತ್ತೇನೆ. ದೃಷ್ಟಿ ಸಮಗ್ರವಾಗಿ ಗ್ರಹಿಸಬಲ್ಲದ್ದಷ್ಟೇ ಅಲ್ಲ, ಆದರೆ ಸಾರಭೂತವಾಗಿ ಸತ್ಯವಾದದ್ದಿರಬೇಕು. ಆ ದೃಷ್ಟಿ ವಿಶ್ವಂಭರ ಪ್ರಗತಿಗೆ ಅನುಗುಣವಾದ ಉಪಯೋಗ ಮತ್ತು ಚಂಚಲ ಬುದ್ಧಿಯದು ಎಂದು ಹೇಳಬಹುದಾದುರಿಂದ ಕೈಕೊಂಡ ಉಪಯೋಗ ಇವುಗಳ ನಡುವಿರುವ ವ್ಯತ್ಯಾಸವನ್ನು ಹೇಳಬಲ್ಲದ್ದಾಗಿರಬೇಕು. ಆದರೆ ಇವೆಲ್ಲ ವಿವರಗಳು, ಏಕೆಂದರೆ ತಪ್ಪುಗಳೂ ಕೂಡ, ಒಂದು ವಿಶಿಷ್ಟ ದೃಷ್ಟಿಕೋನದಿಂದ ನಷ್ಟ ಕೂಡ ಸರ್ವಸಾಧಾರಣ ಪ್ರಗತಿಗೆ ನೆರವು ನೀಡಬಲ್ಲವು, ಈ ಪಾಠಗಳನ್ನು ಸುಲಭವಾಗಿ ಕಲಿತುಕೊಳ್ಳಲಾಗುವುದಿಲ್ಲ.

**(CWM, 13/269–71)** **– ಶ್ರೀಮಾತೆ**

*

**ಅಧಿಕೃತ ದಾಖಲೆಗಳು ಹಾಗೂ ಉಚ್ಚತರ ದೈವೀ ನೈಜತೆ**

1. ಇಲ್ಲಿ, ಆಶ್ರಮದಲ್ಲಿ ನಮ್ಮ ಗುರಿ ಉಚ್ಚತರ ದೈವೀಸತ್ಯವನ್ನು ಅಭಿವ್ಯಕ್ತ–ಗೊಳಿಸುವುದಾಗಿದೆ, ಸರ್ವಸಾಮಾನ್ಯ ಸಂಪ್ರದಾಯಬದ್ಧತೆಯನ್ನು ಅನುಸರಿಸುವುದಾಗಿಲ್ಲ. ಈ ಅಧಿಕೃತ ದಾಖಲೆಗಳಿಗೆ ಯೋಗ್ಯವಲ್ಲದ ಮಹತ್ವವನ್ನು ನಾನು ಕೊಡುವುದಿಲ್ಲ. ಅವು ಸದ್ಯದ ಜಗತ್ತಿನ ಪರಿಸ್ಥಿತಿಯಲ್ಲಿ ಕೇವಲ ಆವಶ್ಯಕತೆಗಳಾಗಿವೆ, ಆದರೆ ಆಳವಾದ ಯಾವುದೇ ನೈಜತೆಗೆ ಅನುಗುಣವಾಗಿರುವುದಿಲ್ಲ.
2. ಜೀವನದ ವಾಸ್ತವತೆಗಳಲ್ಲಿ ಮನುಷ್ಯನ ಸಾಮರ್ಥ್ಯ ಅಧಿಕೃತ ಹೆಸರಿನ ಮೇಲೆ ಅವಲಂಬಿಸಿರುವುದಿಲ್ಲ, ಆದರೆ ಅವನ ಆಂತರಿಕ ಪ್ರಜ್ಞೆಯ ಶಕ್ತಿ ಹಾಗೂ ಪ್ರಕಾಶಗಳ ಮೇಲೆ ಅವಲಂಬಿಸಿರುತ್ತದೆ.

**(CWM, 23/161)** **– ಶ್ರೀಮಾತೆ**

*



ಯಜ್ಞಾಹುತಿಯಾಗಲಿ ಇಲ್ಲವೆ ಪರಿತ್ಯಾಗವಾಗಲಿ ಇಲ್ಲವೆ ದೌರ್ಬಲ್ಯವಾಗಲಿ ವಿಜಯವನ್ನು ತರುವುದಿಲ್ಲ. ಕೇವಲ ದಿವ್ಯಾನಂದ; ಬಲ, ತಾಳ್ಮೆ, ಪರಮೋಚ್ಚ ಧೈರ್ಯ ಇವುಗಳಿರುವ ದಿವ್ಯಾನಂದ. ಆ ದಿವ್ಯಾನಂದವನ್ನು ಅತಿಮಾನಸ ಶಕ್ತಿ ತಂದುಕೊಡುತ್ತದೆ. ಅದು ಎಲ್ಲವನ್ನೂ ಬಿಟ್ಟುಕೊಟ್ಟು ದೂರ ಓಡಿಹೋಗುವುದಕ್ಕಿಂತ ಅತಿ ಹೆಚ್ಚು ಕಠಿಣವಾದದ್ದು, ಅದು ಅನಂತಪಟ್ಟು ಶ್ರೇಷ್ಠವಾದ ವೀರತನವನ್ನು ಒತ್ತಾಯದಿಂದ ಬೇಡುತ್ತದೆ – ಆದರೆ ವಿಜಯ ದೊರಕಿಸುವುದಕ್ಕಾಗಿ ಇರುವ ಮಾರ್ಗ ಅದೊಂದೇ.

**(CWM, 9/5)** **– ಶ್ರೀಮಾತೆ**

*

# ಹೊಸ ಪೃಥ್ವಿ

**ಸರಕಾರಗಳ ದೊಡ್ಡ ದೋಷ**

ನಾನು ಹೇಳುತ್ತಿರುವುದರ ಅರ್ಥ ಏನೆಂದರೆ – ಇಲ್ಲಿಯವರೆಗೆ ಯಾವಾಗಲೂ, ಈಗ ಹೆಚ್ಚು ಹೆಚ್ಚಾಗಿ – ಜನರು ತಮ್ಮ ಕಲ್ಪನೆಗಳು ಹಾಗೂ ಆದರ್ಶಗಳು ಇವುಗಳಿಗಾಗಿ ಮಾನಸಿಕ ನಿಯಮಗಳನ್ನು ವಿಧಿಸುತ್ತಾರೆ ನಂತರ (ಜಗತ್ತು ಮನಸ್ಸಿನ ಹಿಡಿತದಲ್ಲಿದೆ ಎಂಬುದನ್ನು ತೋರಿಸಲು ಶ್ರೀಮಾತೆಯವರು ತಮ್ಮ ಬಿಗಿದ ಮುಷ್ಠಿಯನ್ನು ಕೆಳಗೆ ತರುತ್ತಾರೆ) ಅವುಗಳನ್ನು ಅನ್ವಯಿಸುತ್ತಾರೆ ಮತ್ತು ಆ ಅನ್ವಯ ಪರಿಪೂರ್ಣವಾಗಿ ಮಿಥ್ಯೆಯದಾಗಿರುತ್ತದೆ, ಸ್ವೇಚ್ಛೆಯ–ದಾಗಿರುತ್ತದೆ, ನೈಜವಲ್ಲದ್ದಾಗಿರುತ್ತದೆ – ಮತ್ತು ಪರಿಣಾಮವಾಗಿ ವಿಷಯಗಳು ಬಂಡಾಯವೇಳುತ್ತವೆ ಇಲ್ಲವೆ ಕಳೆಗುಂದುತ್ತವೆ ಮತ್ತು ಮಾಯವಾಗುತ್ತವೆ. ಜೀವನದಲ್ಲಿ ನಿಯಮಗಳನ್ನು ನಿಧಾನಗತಿಯಲ್ಲಿ ವಿಸ್ತಾರವಾಗಿ ಬೆಳೆಸಬೇಕು, ಆ ನಿಯಮಗಳು ಸಾಧ್ಯವಿದ್ದಷ್ಟು ನಮ್ಯವಾಗಿರಬೇಕು, ವಿಶಾಲವಾಗಿರಬೇಕು, ಯಾವಾಗಲೂ ಪ್ರಗತಿಪರವಾಗಿರಬೇಕು ಎಂಬುದು ಜೀವನದಲ್ಲಿಯ ಅನುಭವವೇ ಆಗಿದೆ. ಯಾವುದನ್ನೂ ಸ್ಥಿರಗೊಳಿಸಬಾರದು. ಹಾಗೆ ಸ್ಥಿರಗೊಳಿಸುತ್ತಿರುವುದು ಸರಕಾರಗಳ ದೊಡ್ಡ ದೋಷವಾಗಿದೆ. ಅವರು ಆಧಾರ ಕಟ್ಟೊಂದನ್ನು ಮಾಡುತ್ತಾರೆ ಮತ್ತು ಹೇಳುತ್ತಾರೆ: "ನೀವಿಲ್ಲಿರುವಿರಿ, ನಾವಿದನ್ನು ಸ್ಥಾಪಿಸಿದ್ದೇವೆ ಮತ್ತು ನಾವು ಅದರ ಮೂಲಕ ಜೀವಿಸಬೇಕು." ಹಾಗಾಗಿ ಅವರು ಸ್ವಾಭಾವಿಕವಾಗಿ ಜೀವನ ಜಜ್ಜಿ ಹೋಗುವಂತೆ ಮಾಡುತ್ತಾರೆ ಮತ್ತು ಅದು ಪ್ರಗತಿ

ಹೊಂದುವುದಕ್ಕೆ ತಡೆಯನ್ನುಂಟು ಮಾಡುತ್ತಾರೆ. ಜೀವನವೇ ಸ್ವತಃ ದೈವೀ ಪ್ರಕಾಶ, ಜ್ಞಾನ ಹಾಗೂ ಸಾಮರ್ಥ್ಯಗಳತ್ತ ಪ್ರಗತಿಪರ ದಿಶೆಯಲ್ಲಿ ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಪಡೆಯಬೇಕು, ಅದನ್ನು ಸಾಧ್ಯವಿದ್ದಷ್ಟು ಸರ್ವಸಾಧಾರಣ ನಿಯಮಗಳನ್ನು ಸ್ವಲ್ಪ ಸ್ವಲ್ಪವಾಗಿ ಸ್ಥಾಪಿಸುವುದರ ಮೂಲಕ ಮಾಡಬೇಕು. ಅದರಿಂದಾಗಿ ಅವು ಬಹಳಷ್ಟು ನಮ್ಯ ಮತ್ತು ಆವಶ್ಯಕತೆಯೊಂದಿಗೆ ಬದಲಾಗುವಂತಹವು ಆಗುತ್ತವೆ ಮತ್ತು ಆವಶ್ಯಕತೆಗಳು ಹಾಗೂ ರೂಢಿಗಳು ಬದಲಾಗುವಷ್ಟು ತೀವ್ರಗತಿಯಲ್ಲಿ ಬದಲಾಗುತ್ತವೆ.

(ಮೌನ)

ಆ ಸಮಸ್ಯೆ ಕೊನೆಗೆ ತಾಳುವ ರೂಪವನ್ನು ಕುರಿತು ಹೀಗೆ ಹೇಳಬಹುದು: ಬೌದ್ಧಿಕತೆಯಿಂದ ರೂಪಿಸಿದ ಮಾನವ ಮಟ್ಟದ ಸರಕಾರದ ಸ್ಥಾನದಲ್ಲಿ ಆಧ್ಯಾತ್ಮೀಕರಣಗೊಂಡ ಪ್ರಜ್ಞೆಯ ಸರಕಾರ ಬರಬೇಕಾಗಿದೆ.

**(CWM, 13/267)** – **ಶ್ರೀಮಾತೆ**

*

**ರಾಜತಾಂತ್ರಿಕ** (diplomatic) **ಸಂಬಂಧಗಳಿಗೆ ನಿಷ್ಕಾಪಟ್ಯ ಆಧಾರವಾಗಿರಬೇಕು**

ಜಗತ್ತು ಮಿಥ್ಯೆಯಲ್ಲಿ ಜೀವಿಸುತ್ತಿದೆ, ಮನುಷ್ಯರ ನಡುವಿನ ಎಲ್ಲ ಸಂಬಂಧಗಳು ಇಲ್ಲಿಯವರೆಗೆ ಮಿಥ್ಯೆ ಹಾಗೂ ಮೋಸಗಳ ಆಧಾರ ಪಡೆದಿವೆ. ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಸಂಬಂಧಗಳು ಮಿಥ್ಯೆಯ ಆಧಾರ ಪಡೆದಿವೆ. ಆ ರಾಷ್ಟ್ರಗಳು ಶಾಂತಿ ಬೇಕೆನ್ನುವ ಹಕ್ಕು ಸಾಧಿಸುತ್ತವೆ, ಅದು ಹಾಗಿರುವಾಗ ಅವು ತಮ್ಮನ್ನು ಶಸ್ತ್ರಸಜ್ಜಿತಗೊಳಿಸಿಕೊಳ್ಳುತ್ತವೆ. ಮನುಷ್ಯನಲ್ಲಿ ಮತ್ತು ದೇಶಗಳ ನಡುವೆ ಪಾರದರ್ಶಕ ನಿಷ್ಕಾಪಟ್ಯ ಮಾತ್ರ ಪರಿವರ್ತನೆಗೊಂಡ ಜಗತ್ತಿನ ಆಗಮನವನ್ನು ಸೂಚಿಸಬಲ್ಲದು.

**(CWM, 13/268)** – **ಶ್ರೀಮಾತೆ**

*

**ಎರಡು ಬಗೆಯ ರಾಷ್ಟ್ರೀಯತೆ**

ಮಾನವ ಏಕತೆಗಾಗಿ ಪ್ರಜ್ಞೆಯ ಬೆಳವಣಿಗೆ ಹಾಗೂ ಅದು ಸ್ಥಾಪಿತ–ಗೊಳ್ಳುವಿಕೆ ಇವುಗಳ ಮೂಲಕ ಒಂದು ನಿಜವಾದ ಹಾಗೂ ಉಳಿದುಕೊಳ್ಳುವ

ಶಾಂತಿಯನ್ನು ಪೃಥ್ವಿಯ ಮೇಲೆ ಸಿದ್ಧಿಸಿಕೊಳ್ಳಬಹುದು. ಈ ಗುರಿಯತ್ತ ಕೊಂಡೊಯ್ಯುವ ಎಲ್ಲ ಸಾಧನಗಳಿಗೆ ಸ್ವಾಗತವಿದೆ, ಆದಾಗ್ಯೂ ಬಾಹ್ಯ ಸಾಧನಗಳಿಗೆ ಬಹಳ ಸೀಮಿತ ಪರಿಣಾಮವಿರುತ್ತದೆ, ಹಾಗಿದ್ದರೂ ಅತ್ಯಂತ ಮಹತ್ವದ್ದಾದ, ತುರ್ತಿನದಾದ ಹಾಗೂ ಎಲ್ಲದಕ್ಕಿಂತಲೂ ಅನಿವಾರ್ಯವಾದ ಸಾಧನ ಸ್ವತಃ ಮಾನವ ಪ್ರಜ್ಞೆಯ ಪರಿವರ್ತನೆ ಆಗಿದೆ, ಹಾಗೂ ಅದರ ಕಾರ್ಯದಲ್ಲಿ ಜ್ಞಾನೋದಯ ಹಾಗೂ ಪರಿವರ್ತನೆ ಅವಶ್ಯವಾಗಿವೆ.

ಈ ನಡುವೆ ಉಪಯುಕ್ತವಾಗುವಂತೆ ಹಲವು ಹೆಜ್ಜೆಗಳನ್ನಿರಿಸಬಹುದು, ಈ ಹೆಜ್ಜೆಗಳಲ್ಲಿ ಎರಡು ಬಗೆಯ ರಾಷ್ಟ್ರೀಯತೆಯ ತತ್ವ ಸ್ವೀಕರಿಸುವುದು ಒಂದು. ಎರಡು ಬಗೆಯ ರಾಷ್ಟ್ರೀಯತೆಯನ್ನು ಒಪ್ಪಿಕೊಂಡ ರಾಷ್ಟ್ರಗಳು ಯುದ್ಧದಲ್ಲಿ ತೊಡಗಿಕೊಂಡರೆ ಉಂಟಾಗಬಹುದಾದ ಸಂದಿಗ್ಧ ಪರಿಸ್ಥಿತಿ ಅದಕ್ಕೆ ಯಾವಾಗಲೂ ಪ್ರಧಾನವಾದ ಅಡ್ಡಿಯಾಗಬಹುದು. ಶಾಂತಿಯನ್ನು ನಿಷ್ಕಾಪಟ್ಯದಿಂದ ಬಯಸುವ ಎಲ್ಲರೂ ತಿಳಿದುಕೊಳ್ಳಬೇಕಾದುದೆಂದರೆ, ಯುದ್ಧ ಕುರಿತು ಯೋಚಿಸುವುದು, ಮಾತನಾಡುವುದು, ಮುನ್ಸೂಚನೆ ಹೊಂದಿರುವುದು ಇಂತಹ ಅಡ್ಡಿಗೆ ದ್ವಾರ ತೆರೆದಿರಿಸುತ್ತದೆ ಎಂಬುದಾಗಿದೆ.

ತದ್ವಿರುದ್ಧವಾಗಿ ಯುದ್ಧವನ್ನು ತೊಡೆದು ಹಾಕಬೇಕೆನ್ನುವುದರಲ್ಲಿ ಅತಿ ಮುಖ್ಯವಾದ ಆಸಕ್ತಿ ಹೊಂದಿದ ಜನರ ಸಂಖ್ಯೆ ಹೆಚ್ಚಿದ ಹಾಗೆ ಸ್ಥಿರಗೊಂಡ ಶಾಂತಿ ಸ್ಥಾಪಿಸುವ ಅವಕಾಶಗಳು ಹೆಚ್ಚು ಪರಿಣಾಮಕಾರಿಯಾಗುತ್ತವೆ, ಇದು ಯುದ್ಧ ಅಸಾಧ್ಯವೆಂದು ಮಾಡಬಹುದಾದ ಹೊಸ ಪ್ರಜ್ಞೆಯ ಆಗಮನ–ವಾಗುವವರೆಗೆ ಉಪಯುಕ್ತವಾಗಬಲ್ಲದು.

**(CWM, 15/59)** **– ಶ್ರೀಮಾತೆ**

*

**ಹೊಸ ಮಾದರಿಯ ಸರಕಾರ**

ದೇವರ ಹೆಸರಿನಲ್ಲಿ ಪುರೋಹಿತರು ನಡೆಸುವ ರಾಜ್ಯ (theocracy) ಶ್ರೀಮಂತರು ನಡೆಸುವ ರಾಜ್ಯ (aristocracy), ಪ್ರಜಾಪ್ರಭುತ್ವ ಇವೆಲ್ಲ ಅರ್ಹತೆ ಇಲ್ಲದವುಗಳು ಎಂದು ಸಿದ್ಧಮಾಡಿ ತೋರಿಸಿವೆ, ಅವೆಲ್ಲ ಸಂಪೂರ್ಣವಾಗಿ ವಿಫಲವಾಗಿವೆ. ಆ ಇನ್ನೊಂದು ಎಂದರೆ ಸಮಾಜವಾದಿ (socialist) ಇಲ್ಲವೆ ಸಮಾಜ ಸ್ವಾಮ್ಯದ (communist) ಸರಕಾರ ಕೂಡ ತನ್ನನ್ನು ವಿಫಲಗೊಳ್ಳಿಸಿಕೊಳ್ಳುತ್ತಿದೆ.

ಮೂಲಭೂತವಾಗಿ ಸಮಾಜವಾದ ಮತ್ತು ಸಮಾಜ ಸ್ವಾಮ್ಯದವಾದ ಇವು ಸರಕಾರ ಒಂದು ಬಗೆಯಲ್ಲಿ ಇಲ್ಲದೆ ಇರುವುದಕ್ಕೆ ಅನುಗುಣವಾಗಿವೆ, ಏಕೆಂದರೆ ಅವುಗಳಿಗೆ ಇತರರ ಮೇಲೆ ಆಳಿಕೆ ನಡೆಸುವ ಅಧಿಕಾರವಿರುವುದಿಲ್ಲ, ಅವರು ತಮ್ಮ ಅಧಿಕಾರವನ್ನು ಅಧಿಕಾರ ನಡೆಸುವವನೊಬ್ಬನಿಗೆ ವಹಿಸಿಕೊಡುವ ನಿರ್ಬಂಧಕ್ಕೊಳಗಾಗುತ್ತಾರೆ, ಉದಾಹರಣೆ ಲೆನಿನ್ ಅಂತಹ ಮನುಷ್ಯನಾಗಿದ್ದ, ಏಕೆಂದರೆ ಅವನೇ ಆ ವಾದದ ಮಿದುಳಾಗಿದ್ದ. ಇದೆಲ್ಲವನ್ನೂ ಪ್ರಯತ್ನಿಸಿ ನೋಡಲಾಗಿದೆ ಮತ್ತು ಅನರ್ಹವಾದದ್ದು ಎಂದು ಸಿದ್ಧಪಡಿಸಲಾಗಿದೆ. ಸಮರ್ಥವಾಗಬಹುದಾದ ಒಂದೇ ವಿಷಯ ಸತ್ಯ–ಪ್ರಜ್ಞೆ (ಋತ್–ಚಿತ್)ಯಾಗಿದೆ, ಅದು ಉಪಕರಣಗಳನ್ನು ಆಯ್ದುಕೊಳ್ಳಬಲ್ಲದು ಮತ್ತು ಏಕೈಕವಾದ ಒಂದು ಉಪಕರಣ ಉಪಸ್ಥಿತವಿರದಿದ್ದರೆ ಕೆಲವೊಂದು ಸಂಖ್ಯೆಗಳಲ್ಲಿರುವ ಉಪಕರಣಗಳ ಮೂಲಕ ಅದು ತನ್ನನ್ನು ಅಭಿವ್ಯಕ್ತಗೊಳಿಸಬಲ್ಲದು – ಒಂದು ಉಪಕರಣ ಸಾಕಾಗದು, ಒಂದು ಗುಂಪನ್ನು ಅವಶ್ಯವಾಗಿ ಆಯ್ದುಕೊಳ್ಳಬೇಕಾಗುತ್ತದೆ.

ಈ ಪ್ರಜ್ಞೆಯುಳ್ಳ ಜನರು ಸಮಾಜದ ಯಾವುದೇ ವರ್ಗಕ್ಕೆ ಸೇರಿರಬಹುದು, ಅದು ಜನ್ಮದಿಂದ ಬರುವ ಹಕ್ಕಲ್ಲ, ಆದರೆ ವೈಯಕ್ತಿಕ ಪ್ರಯತ್ನ ಹಾಗೂ ಅಭಿವೃದ್ಧಿಯಿಂದ ಬರುವಂತಹದು. ವಾಸ್ತವದಲ್ಲಿ ಅದು ಬಾಹ್ಯ ಚಿಹ್ನೆ, ರಾಜಕೀಯ ದೃಷ್ಟಿಕೋನದಿಂದ ಬದಲಾದ ಸ್ಪಷ್ಟ ಚಿಹ್ನೆ – ಅದು ಇನ್ನು ಮುಂದೆ ವರ್ಗಗಳ ಇಲ್ಲವೆ ಪಂಗಡಗಳ ಇಲ್ಲವೆ ಜನ್ಮಕ್ಕೆ ಸಂಬಂಧಿಸಿದ ವಿಷಯವಾಗಿರುವುದಿಲ್ಲ, ಅದೆಲ್ಲ ರೂಢಿ ತಪ್ಪಿ ಹೋದದ್ದು. ಒಂದು ಬಗೆಯ ಉಚ್ಚತರ ಪ್ರಜ್ಞೆಯನ್ನು ಸಿದ್ಧಿಸಿಕೊಂಡ ವ್ಯಕ್ತಿಗಳಿಗೆ ಆಳಿಕೆ ನಡೆಸುವ ಹಕ್ಕಿರುತ್ತದೆ – ಬೇರೆಯವರು ಯಾವುದೇ ಸಾಮಾಜಿಕ ವರ್ಗಕ್ಕೆ ಸೇರಿರಲಿ, ಅವರಿಗೆ ಆ ಹಕ್ಕಿರುವುದಿಲ್ಲ.

ಇದು ನಿಜವಾದ ದೃಷ್ಟಿ.

ಆ ಪ್ರಯೋಗದಲ್ಲಿ ಭಾಗವಹಿಸುವವರು ಅತ್ಯಂತ ಪ್ರಾಪಂಚಿಕ ವಿಷಯಗಳನ್ನು ಕುರಿತು ಅತ್ಯಂತ ಒಳ್ಳೆಯ ರೀತಿಯಲ್ಲಿ ತೀರ್ಮಾನ ಕೊಡಲು ಅತ್ಯುಚ್ಚ ಪ್ರಜ್ಞೆಗೆ ಮಾತ್ರ ಸಾಧ್ಯ ಎಂಬುದರ ಬಗ್ಗೆ ಪರಿಪೂರ್ಣವಾಗಿ ಮನವರಿಕೆ ಮಾಡಿಕೊಂಡಿರಬೇಕು. ಉಚ್ಚತರ ಪ್ರಜ್ಞೆ ಉಚ್ಚತರ ವಿಷಯಗಳೊಂದಿಗೆ ವ್ಯವಹರಿಸುತ್ತದೆ, ನಿಮ್ನತರ ವಿಷಯಗಳಲ್ಲಿ ಅದಕ್ಕೆ ಆಸಕ್ತಿ ಇರುವುದಿಲ್ಲ, ಅಂತಹ

ವಿಷಯಗಳಲ್ಲಿ ಅದು ಆಸಕ್ತಿ ಹೊಂದಿರುವುದೇ ಇಲ್ಲ ಎಂಬ ವಿಚಾರ ಭಾರತವನ್ನು ಹಾಳುಮಾಡಿದೆ. ಸರಿ, ಈ ದೋಷವನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು. ಅತ್ಯಂತ ಉಚ್ಚ ಪ್ರಜ್ಞೆ ಅತ್ಯಂತ ಪ್ರಾಪಂಚಿಕ ವಿಷಯಗಳ ಆವಶ್ಯಕತೆಗಳು ಏನಿರುತ್ತವೆ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ನೋಡುತ್ತದೆ –ಅತ್ಯಂತ ಸ್ಪಷ್ಟವಾಗಿ ಅದರೊಂದಿಗೆ ಹೊಸ ಬಗೆಯ ಸರಕಾರ ಇರುವಂತೆ ಪ್ರಯತ್ನ ಕೈಕೊಳ್ಳಬಹುದು.

**(CWM, 13/274)** **– ಶ್ರೀಮಾತೆ**

*

**ಪಕ್ಷಗಳಿಲ್ಲದ ಸರಕಾರ**

ವಿಷಯಗಳು ಭಿನ್ನ ರೀತಿಯಲ್ಲಿ ಸಂಘಟನೆಗೆ ಒಳಗಾಗಿರಬೇಕು ಎಂಬ ಯುಗದಲ್ಲಿ ನಾವು ಪ್ರವೇಶಿಸುತ್ತಿದ್ದೇವೆ, ಆ ಕಾರಣದಿಂದಾಗಿ ಅದು ಕಠಿಣ ಸಮಯವಾಗಿದೆ. ಏನು ಬರಲಿದೆ ಎಂಬುದು ನಮಗೆ ತಿಳಿದಿರುವುದರಿಂದ ಅದು ಕಡಿಮೆ ಗದ್ದಲದೊಂದಿಗೆ ಬೇಗ ಬರಲು ನಾವು ಸಹಾಯ ಮಾಡಬಹುದು, ಹಿಂದೆ ಸರಿದು ಹೋಗುವುದಕ್ಕೆ ಭರವಸೆ ಇಲ್ಲ, ಅದು ವಿಷಯಗಳು ಕೊನೆಯಿಲ್ಲದೆ ಉಳಿದುಕೊಳ್ಳುವಂತೆ ಮಾಡುವುದು. ನಾವು ಸಂಪೂರ್ಣವಾಗಿ ಮುನ್ನಡೆದು ಹೋಗಬೇಕು ಮತ್ತು ಆಚೆಗೆ ಸಾಗಿ ಹೋಗಬೇಕು, ಪಕ್ಷಗಳಾಚೆಗೆ ಸಾಗಿ ಹೋಗಬೇಕು. ಶ್ರೀ ಅರವಿಂದರ ಹೊರತಾಗಿ ಬೇರೆ ಯಾರೂ ಅದನ್ನು ಹೆಚ್ಚು ಒಳ್ಳೆಯ ರೀತಿಯಲ್ಲಿ ವಿವರಿಸಲಾರರು, ಏಕೆಂದರೆ ಅವರು ಎಷ್ಟೊಂದು ಹೆಚ್ಚಿನ ರೀತಿಯಲ್ಲಿ ಪಕ್ಷಾತೀತವಾಗಿದ್ದರು. ಅವರು ಎಲ್ಲ ಪಕ್ಷಗಳ ಅನುಕೂಲತೆ ಹಾಗೂ ಅನನುಕೂಲತೆಗಳನ್ನು ನೋಡಿದ್ದರು ಮತ್ತು ಅವುಗಳನ್ನು ನಿಖರವಾಗಿ ಹೇಳಿದ್ದರು. ಅವರು ಬರೆದದ್ದನ್ನು ಲಕ್ಷ್ಯಗೊಟ್ಟು ಓದಿದರೆ ನೀವು ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವಿರಿ ಮತ್ತು ಅದೇ ವೇಳೆಗೆ ಭಗವಂತನ ಸಾಮರ್ಥ್ಯದ ಪೂರ್ತಿ ಬೆಂಬಲವಿರುತ್ತದೆ ಎಂಬುದನ್ನು ತಿಳಿದುಕೊಳ್ಳುವಿರಿ. ಅವರ ಹಿಂದೆ ಇದ್ದ ದೈವೀ ಸಾಮರ್ಥ್ಯ ಈ ಪರಿವರ್ತನೆಯ ಹಿಂದಿದೆ. ಪರಿವರ್ತನೆಗಾಗಿ ಸಮಯ ಸನ್ನಿಹಿತವಾಗಿದೆ. ನಾವು ಗತಕಾಲಕ್ಕೆ ಅಂಟಿಕೊಳ್ಳಲಾರೆವು.

ಶ್ರೀ ಅರವಿಂದರ ಸಂದೇಶವನ್ನು ಪ್ರಸಾರ ಮಾಡುವುದು ರಾಜಕೀಯ–

ದಿಂದಾಚೆ ಹೋಗುವುದಾಗಿದೆ. ಏಕೆಂದರೆ ಅವರು ಇನ್ನು ಮುಂದೆ ಅಧಿಕಾರವನ್ನು ಕೈಗೆತ್ತಿಕೊಳ್ಳಲು ಬಯಸುವ ರಾಜಕೀಯ ಅಂಶವುಳ್ಳವರಾಗಿರುವುದಿಲ್ಲ, ಅಲ್ಲಿ ಅವರ ವಿಚಾರಗಳಿವೆ, ಆದರ್ಶಗಳಿವೆ ಮತ್ತು ಸಹಜವಾಗಿ ಅವರ ಕಾರ್ಯಕ್ರಮವನ್ನು ತಿಳಿದುಕೊಂಡರೆ ಹಾಗೂ ಸಿದ್ಧಿಸಿಕೊಂಡರೆ ದೇಶ ಬಹಳ ಬಲವತ್ತರವಾದದ್ದಾಗುವುದು. ಅವರ ಬೋಧನೆಯನ್ನು ಅರ್ಥಮಾಡಿಕೊಳ್ಳುವವರು ಸಂಘಟನೆ ಮಾಡುವ ಹಾಗೂ ಪ್ರಸಾರ ಮಾಡುವ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು.

**ಪ್ರಶ್ನೆ :** *ಆದರೆ ಶ್ರೀಮಾತೆಯವರೆ, ಮಕ್ಕಳು ಸರಕಾರದಲ್ಲಿ ಬರದೆ ಹೋದರೆ ...*

**ಶ್ರೀಮಾತೆ :** (ಶ್ರೀಮಾತೆಯವರು ನಗುತ್ತಾರೆ) ಅವರು ಮುರಿದು ಹಾಕುತ್ತಾರೆ ಮತ್ತು ಅವರೇ ಸ್ವತಃ ನಿರ್ಬಂಧಕ್ಕೆ ಒಳಗಾದ ಭಾವನೆ ತಂದುಕೊಳ್ಳುತ್ತಾರೆ.

ರಾಜಕೀಯದಲ್ಲಿ ಹೋಗಬೇಕೆಂಬ ಭಾವನೆ ತಂದುಕೊಳ್ಳುವ ಮನುಷ್ಯನಿದ್ದರೆ, ಅದು ಭಿನ್ನವಾಗಿರುತ್ತದೆ; ಆದರೆ ರಾಜಕೀಯದೊಳಗೆ ಇರದೆ ಇತರರು ಬಲಿಷ್ಠರಾಗುವರು.

**(CWM, 15/407)** **– ಶ್ರೀಮಾತೆ**

*

**ಬಂಡವಾಳಶಾಹಿ ಪದ್ಧತಿ ಹಾಗೂ ಸಮಾಜವಾದಿ ಪದ್ಧತಿ ಇವು ಗತಿಸಿಹೋಗುವವು**

ಬಂಡವಾಳಶಾಹಿ ಪದ್ಧತಿ ಮತ್ತು ವ್ಯವಹಾರ ಇವುಗಳ ಯುಗ ಕೊನೆಯನ್ನು ಸಮೀಪಿಸುತ್ತಿದೆ.

ಹಾಗೆಯೇ ಸಮಾಜವಾದಿ ಪದ್ಧತಿ ಕೂಡ ಗತಿಸಿಹೋಗುವುದು. ಏಕೆಂದರೆ, ಸಮಾಜವಾದಿ ಪದ್ಧತಿ, ಅದನ್ನು ಬೋಧಿಸಿದ ರೀತಿಯಲ್ಲಿ ರಚನಾತ್ಮಕವಾಗಿಲ್ಲ, ಅದು ಶ್ರೀಮಂತ ವರ್ಗದ ಆಡಳಿತದ ಜೊತೆಗೆ ಕಾದಾಡುವುದಕ್ಕೆ ಒಂದು ಆಯುಧದ ರೂಪದಲ್ಲಿದೆ. ಆ ಸಮರ ಮುಗಿದು ಹೋದ ನಂತರ ಮತ್ತು ನೌಕರಿಯಿಲ್ಲದ ಕಾರಣದಿಂದಾಗಿ ಸೈನ್ಯಗಳನ್ನು ವಿಸರ್ಜಿಸಲಾಗುವುದು, ಆಗ ಸಮಾಜವಾದಿ ಪದ್ಧತಿಗೆ ಉಪಯೋಗವಿಲ್ಲದಂತಾಗಿ ಇನ್ನೊಂದು ಏನೋ ಆಗಿ ಪರಿವರ್ತನೆಗೊಳ್ಳುವುದು ಮತ್ತು ಉಚ್ಚತರ ಸತ್ಯವನ್ನು ಅಭಿವ್ಯಕ್ತಗೊಳಿಸುವುದು.

ನಮಗೆ ಈ ಸತ್ಯ ತಿಳಿದಿದೆ, ನಾವು ಅದಕ್ಕಾಗಿ ಕಾರ್ಯ ಕೈಕೊಳ್ಳುತ್ತಿದ್ದೇವೆ ಅದರಿಂದಾಗಿ ಅದು ಪೃಥ್ವಿಯ ಮೇಲೆ ಆಳಿಕೆ ನಡೆಸಬಹುದು.

**(ಅನುಯಾಯಿಯೊಂದಿಗೆ ಮಾತುಕತೆ, ಮಾರ್ಚ 21, 1956) – ಶ್ರೀಮಾತೆ**

*

**ಭವಿಷ್ಯತ್ತಿನ ನೇತಾರರು**

ನಿಮಗೆ ತಿಳಿದ ಹಾಗೆ ನಾನು ಬಾಹ್ಯ ನಿರ್ಣಯಗಳಲ್ಲಿ ನಂಬಿಕೆಯನ್ನಿರಿಸು–ವುದಿಲ್ಲ. ನಾನು ನಂಬುವ ಒಂದೇ ಒಂದು ವಿಷಯವೆಂದರೆ ದೈವೀ ಪ್ರಜ್ಞೆಯ ಶಕ್ತಿ, ಅದು ಆ ಬಗೆಯ ಒತ್ತಡವನ್ನು ತರುತ್ತದೆ (ಜಜ್ಜಿ ಹಾಕುವ ಸಂಕೇತ) ಮತ್ತು ಆ ಒತ್ತಡ ಹೆಚ್ಚುತ್ತ ಹೋಗುತ್ತದೆ... ಅದರರ್ಥ ಅದು ಜನರ ಸ್ಥಾನವನ್ನು ಬದಲು ಮಾಡುತ್ತದೆ. ನಾನು ಕೇವಲ ದೈವೀ ಪ್ರಜ್ಞೆಯ ಒತ್ತಡವನ್ನು ನಂಬುತ್ತೇನೆ. ಉಳಿದವುಗಳೆಲ್ಲ ಜನರು ಕೈಕೊಳ್ಳುವ ಕಾರ್ಯಗಳಾಗಿರುತ್ತವೆ. ಅವರು ಹೆಚ್ಚು ಕಡಿಮೆ ಸರಿಯಾಗಿಯೇ ಕೈಕೊಳ್ಳುತ್ತಾರೆ ಮತ್ತು ನಂತರ ಅದು ಜೀವಿಸುತ್ತದೆ, ನಂತರ ಸಾವನ್ನಪ್ಪುತ್ತದೆ, ನಂತರ ಬದಲಾಗುತ್ತದೆ ಮತ್ತು ನಂತರ ವಿರೂಪಗೊಳ್ಳುತ್ತದೆ ... ನಂತರ ಅವರು ಕೈಕೊಂಡ ಎಲ್ಲದಕ್ಕೂ ಪರಿಸ್ಥಿತಿ ಅದೇ ಆಗಿರುತ್ತದೆ. ಅದು ಪ್ರಯತ್ನಕ್ಕಾಗಿ ಪಡುವ ತೊಂದರೆಗೆ ಯೋಗ್ಯವಾಗಿರುವುದಿಲ್ಲ. ಕಾರ್ಯ ನಿರ್ವಹಣೆಯ ಸಾಮರ್ಥ್ಯ ಮೇಲಿನಿಂದ ಬರಬೇಕು. ಹಾಗೆ ಆಜ್ಞಾರ್ಥಕವಾಗಿ ಬರಬೇಕು. (ಅವರೋಹಣದ ಸಂಕೇತ) ಮತ್ತು ಅದಕ್ಕಾಗಿ ಇದು, (ಶ್ರೀಮಾತೆಯವರು ತಮ್ಮ ಹಣೆಯತ್ತ ಬೊಟ್ಟುಮಾಡಿ ತೋರಿಸುತ್ತಾರೆ). ಅಚಂಚಲವಾಗಿ ಇರಬೇಕು. "ಓಹ್ ಅದಿರಲೇಬೇಕು, ಓಹ್ ಇದಿರಲೇಬೇಕು, ಓಹ್ ನಾವದನ್ನು ಕೈಕೊಳ್ಳಬೇಕು" ಎಂದು ಹೇಳುವುದಿರಬಾರದು. ಶಾಂತಿಃ, ಶಾಂತಿಃ, ಶಾಂತಿಃ ಅವಶ್ಯವಾದದ್ದನ್ನು ಕೈಕೊಳ್ಳುವುದನ್ನು ಭಗವಂತ ನಿಮಗಿಂತ ಬಹಳ ಒಳ್ಳೆಯ ರೀತಿಯಲ್ಲಿ ತಿಳಿದುಕೊಂಡಿರುತ್ತಾನೆ.

**(CWM, 13/307–08) – ಶ್ರೀಮಾತೆ**

*

ಕೈಕೊಳ್ಳಬೇಕಾದ ಮೊದಲ ಕಾರ್ಯವೆಂದರೆ ನಿಮಗಾಗಿಯೇ ನೀವು ಕಾರ್ಯನಿರತರಾಗಿರದೇ ಇರುವುದಾಗಿದೆ, ಆದರೆ ಭಗವಂತನಿಗೆ ವಿಧೇಯರಾಗಿ,

ದೈವೀ ಸಂಕಲ್ಪವನ್ನು ಅಭಿವ್ಯಕ್ತಪಡಿಸಬೇಕು. ನಿಮ್ಮ ವತಿಯಿಂದ ನೀಡಬೇಕಾದ ಆಜ್ಞೆಗಳಿರುವುದಿಲ್ಲ. ಅದು ವೈಯಕ್ತಿಕ ಸಂಕಲ್ಪವಾಗಿರುವವರೆಗೆ, ವೈಯಕ್ತಿಕ ಆಸೆಯಾಗಿರುವವರೆಗೆ ನಿಜವಾದ ವಿಷಯವಾಗಿರುವುದಿಲ್ಲ, ನೀವು ಏನನ್ನೂ ಮಾಡಲಾರಿರಿ.

... ಅದು ನಿಜವಾದ ವಿಷಯವಾಗಿರುವುದಿಲ್ಲ ಅಷ್ಟೇ ಅಲ್ಲ, ನೀವು ನಿಜವಾದ ವಿಷಯವನ್ನು ತಿಳಿದುಕೊಳ್ಳಲಾರಿರಿ! ಅದನ್ನು (ಏನೋ ಒಂದನ್ನು ಬಲವತ್ತರವಾಗಿ ಹೊರ ಹಾಕುವ ಸೂಚನೆ) ... ಹೊರಗೋಡಿಸಬೇಕು!

ಆ ಕಾರಣದಿಂದಾಗಿ ನಾವಷ್ಟೇ ಏನೂ ಅಲ್ಲವೇ ಅಲ್ಲ. ಇದು ಜೀವನ, ನಾವು ನಮಗಾಗಿ ಕೈಕೊಳ್ಳುವುದಿಲ್ಲ. ನಮ್ಮ ವೈಯಕ್ತಿಕ ಸಂಕಲ್ಪದಿಂದ ವೈಯಕ್ತಿಕ ಪರಿಣಾಮಕ್ಕಾಗಿ ಕಾರ್ಯಮಾಡುವುದಿಲ್ಲ, ನಾವು ಕೇವಲ ದೈವೀ ಸಂಕಲ್ಪದ ಮೂಲಕ ಹಾಗೂ ದೈವೀ ಸಂಕಲ್ಪಕ್ಕಾಗಿ ಕಾರ್ಯಕೈಕೊಳ್ಳುತ್ತೇವೆ. ಅದೆಷ್ಟರ–ಮಟ್ಟಿಗೆಂದರೆ ಪ್ರಯತ್ನಮಾಡದೆಯೆ, ಸ್ವಯಂಪ್ರೇರಣೆಯಿಂದ ನಮ್ಮ ಭೌತಿಕ ವೈರಿಯ ಬಗ್ಗೆ ನಾವು ಅತಿ ಹೆಚ್ಚಿನ ರೀತಿಯಲ್ಲಿ ಕೋಮಲತೆಯಿರುವ ಭಾವನೆ ತಂದುಕೊಳ್ಳುತ್ತೇವೆ. ನಿಮಗೆ ಅದರ ಭಾವನೆ ಬಂದಾಗ ನಿಮಗೆ ಅರ್ಥವಾಗುವುದು. ಅದೇ ಇಡೀ ಸೀಮಿತತೆಯಾಗಿದೆ.

ಸಂಘರ್ಷಗಳು ಮೇಲೆದ್ದು ಬರುತ್ತವೆ, ಅವು ಯಾವಾಗಲು ಮೇಲೆದ್ದು ಬರುತ್ತಿರುತ್ತವೆ – ಆಗ ಕೂಡಲೆ ಬರುವ ಭಾವನೆ ಮನುಷ್ಯ ತನ್ನ ಚರ್ಮದ ಒಳಗೆ ಹಿಂದೆ ಸರಿದು ಹೋಗುತ್ತಿದ್ದಾನೆಯೋ ಎನ್ನುವ ಹಾಗಿರುತ್ತದೆ. ಏಕೆಂದರೆ ಸಂಭವಿಸುವುದು ಅದೇ ಆಗಿದೆ. ಪ್ರತಿಯೊಬ್ಬನೂ ತನ್ನೊಳಗೆ ಹಿಂದೆಳೆದುಕೊಂಡು ಹೋಗುತ್ತಾನೆ, ಇರುವ ತೊಂದರೆ ಎಂದರೆ ಒಬ್ಬ ಮನುಷ್ಯನಲ್ಲಿ ಸಾಪೇಕ್ಷವಾಗಿ ಚಿಕ್ಕ ಪ್ರಮಾಣದ ವೈಯಕ್ತಿಕ ಸಂಕಲ್ಪವಿದ್ದಾಗ, ಅವನ ಮುಂದಿರುವ ಮನುಷ್ಯ ವೈಯಕ್ತಿಕ ಸಂಕಲ್ಪವನ್ನು ಅಭಿವ್ಯಕ್ತಪಡಿಸುತ್ತಿದ್ದರೆ, ಅದು ನಿಖರವಾಗಿ ... ಅದು ಪ್ರಪ್ರಥಮವಾಗಿ ಪ್ರತಿಕ್ರಿಯೆಯನ್ನು ಸೃಷ್ಟಿಸುತ್ತದೆ ಮತ್ತು ನಂತರ ಕೂಡ, ನೀವು ಹೆಚ್ಚು ಕಡಿಮೆ ಅದನ್ನು ಒಪ್ಪಿಕೊಂಡಿದ್ದರೆ, ನೀವು ಆ ಸಂಕಲ್ಪವನ್ನು ತೆಗೆದುಕೊಳ್ಳುತ್ತೀರಿ ಮತ್ತು ಅದನ್ನು ಸುತ್ತಲೂ ಎಲ್ಲೆಡೆಯಲ್ಲಿ ಪ್ರತಿಫಲಿಸಲು ಪ್ರಾರಂಭಿಸುತ್ತೀರಿ. ಹಾಗಾಗಿ ಸಂಭವಿಸುತ್ತಿರುವುದನ್ನು ನೀವು ನೋಡಬಲ್ಲಿರಿ.

ಮತ್ತು ಅದು ಎಲ್ಲ ಕಾಲದಲ್ಲಿ ಸಾಗಿ ಹೋಗುತ್ತಿರುತ್ತದೆ. ಮೊದಲು ಒಬ್ಬ ಮನುಷ್ಯನಲ್ಲಿ ಸಂಕಲ್ಪವಿರುತ್ತದೆ, ನಂತರ ಇನ್ನೊಬ್ಬನಲ್ಲಿ ಇತ್ಯಾದಿಯಾಗಿ ಕೊನೆಯಿಲ್ಲದೆ ಸಾಗಿ ಹೋಗುತ್ತದೆ. ಅದು ಎಲ್ಲೆಡೆಯಲ್ಲೂ ಸಂಭವಿಸುತ್ತದೆ, ಅತಿ ಬಲವತ್ತರವಾದ ಸಂಕಲ್ಪ ಜಯಶಾಲಿಯಾಗುತ್ತದೆ. ಅದು ಯೋಗ್ಯವಾದದ್ದಿರುವುದಿಲ್ಲ. "ನಾವು ಭಗವಂತನ ಸೇವೆ ಕೈಕೊಳ್ಳುತ್ತಿದ್ದೇವೆ" ಎಂದು ನಾವು ಹೇಳಿದಾಗ ಅದು ಕೇವಲ ಶಬ್ದಗಳಲ್ಲಿರುವುದಿಲ್ಲ. ಅವನೇ ನಮ್ಮ ಮೂಲಕ ಕಾರ್ಯಕೈಕೊಳ್ಳಬೇಕು, ನಾವೇ ಕೈಕೊಳ್ಳುವವರಲ್ಲ.

ಅತ್ಯಂತ ದೊಡ್ಡ ಅಡ್ಡಿ ಎಂದರೆ ಇದು: ನಾವು ಭಗವಂತನ ಸಂಕಲ್ಪವನ್ನು ತಿಳಿದುಕೊಳ್ಳುವುದು ಹೇಗೆ? ವಾಸ್ತವ ವಿಷಯವೆಂದು ನಾನು ಹೇಳುತ್ತೇನೆ: "ನೀವು ನಿಷ್ಕಾಪಟ್ಯದಿಂದ ನಿಮ್ಮ ಸಂಕಲ್ಪವನ್ನು ತ್ಯಜಿಸಿದರೆ, ಆಗ ನೀವು ತಿಳಿದುಕೊಳ್ಳುವಿರಿ."

**(CWM, 13/332–33)** **– ಶ್ರೀಮಾತೆ**

*

**ಆಡಳಿತ ನಡೆಸುವ ಇಲ್ಲವೆ ನೇತೃತ್ವ ವಹಿಸುವ ಕಾರ್ಯವಿದ್ದವರಿಗೆ**

ನೀವು ಜನರನ್ನು ಸಂತೋಷಪಡಿಸಲು ಬಯಸಿದಾಗ, ವಿಷಯಗಳು ಅವಿದ್ದ ಹಾಗೆ ಇರಲು ಬಿಟ್ಟುಕೊಡುತ್ತೀರಿ, ಪ್ರಕೃತಿ ಮನುಷ್ಯರ ಮೇಲೆ ಪ್ರಗತಿಯನ್ನು ಹೇರಲಿ ಎಂದು ಕಾದುಕೊಂಡಿರುತ್ತೀರಿ. ಆದರೆ ಇದು ಸೃಷ್ಟಿಯ ಸತ್ಯವಲ್ಲ. ಮನುಷ್ಯನ ನಿಜವಾದ ಮಣಿಹ ಪ್ರಕೃತಿಯ ಮೇಲೆ ತನ್ನ ಪ್ರಗತಿಯನ್ನು ಹೇರುವುದಾಗಿದೆ.

ಜಗತ್ತನ್ನು ವಿವೇಕವಿದ್ದವರು ಆಳಬೇಕು ಎಂದು ನಾನು ಹೇಳಿದಾಗ, ನಾನು ರಾಜಕೀಯ ದೃಷ್ಟಿಕೋನದಿಂದ ಅದನ್ನು ಹೇಳುತ್ತಿರುವುದಿಲ್ಲ, ಆದರೆ ಆಧ್ಯಾತ್ಮಿಕ ದೃಷ್ಟಿಕೋನದಿಂದ ಹೇಳುತ್ತೇನೆ.

ಸರಕಾರದ ಅನೇಕ ರೂಪಗಳು ಅವಿದ್ದ ಹಾಗೆ ಉಳಿದುಕೊಳ್ಳಬಲ್ಲವು. ಅದರ ಮಹತ್ವ ಗೌಣವಾದದ್ದು. ಅಧಿಕಾರದಲ್ಲಿದ್ದ ಮನುಷ್ಯರ ಸ್ಥಾನಮಾನ ಏನೇ ಆಗಿದ್ದರೂ ಅವರು ದೈವೀಸತ್ಯವನ್ನು ಸಿದ್ಧಿಸಿಕೊಂಡವರಿಂದ ಮತ್ತು ಪರಮೋಚ್ಚನ ಸಂಕಲ್ಪವನ್ನಲ್ಲದೆ ಬೇರೆ ಸಂಕಲ್ಪವಿಲ್ಲದವರಿಂದ ಸ್ಫೂರ್ತಿ ಪಡೆಯಬೇಕು.

**(CWM, 15/55–56)** **– ಶ್ರೀಮಾತೆ**

*

**ಒಂದು ಅವಶ್ಯವಾದ ಷರತ್ತು**

ಗ್ರಹಿಸದೆ ಇದ್ದುದೆಲ್ಲ ಜಜ್ಜಿ ಹೋಗುತ್ತಿರುವ ಭಾವನೆ ತಂದುಕೊಳ್ಳುತ್ತದೆ, ಆದರೆ ತದ್ವಿರುದ್ಧವಾಗಿ ಗ್ರಹಿಸುವುದೆಲ್ಲ ಏನೇ ಆಗಿರಲಿ ಸಾಮರ್ಥ್ಯಪೂರ್ಣವಾಗಿ ವಿಸ್ತರಿಸಿಕೊಳ್ಳುತ್ತಿರುವಂತಹ ಏನೋ ಒಂದರ ಭಾವನೆ ತಂದುಕೊಳ್ಳುತ್ತದೆ.

ಅವೆರಡೂ ಒಂದೇ ಕಾಲಕ್ಕೆ ಆಗುತ್ತವೆ. ...

ಹೌದು, ಆದರೆ ಜಜ್ಜುವಿಕೆಗೆ ಈಡಾದದ್ದು ಪ್ರತಿರೋಧಿಸುವ ವಿಷಯ–ವಾಗಿರುತ್ತದೆ, ಅದು ಗ್ರಹಿಸುವುದಿಲ್ಲ. ಅದು ತನ್ನನ್ನು ತೆರೆದಿರಿಸಿಕೊಳ್ಳಬೇಕು ಮತ್ತು ಆಗ ಆ ವಿಷಯ ದಿಗಿಲು ಹುಟ್ಟಿಸುವ ವಿಷಯವಾಗುತ್ತದೆ. ಅದು ಅಸಾಧಾರಣ–ವಾದದ್ದು. ಅದು ಶತಮಾನಗಳ ಕಾಲದಿಂದ ಬಂದ ನಮ್ಮ ರೂಢಿ, ಅಲ್ಲವೆ? ಅದು ಪ್ರತಿರೋಧಿಸುತ್ತದೆ ಮತ್ತು ಈ ಭಾವನೆಯನ್ನು ತಂದುಕೊಡುತ್ತದೆ, ಆದರೆ ತೆರೆದುಕೊಂಡದ್ದೆಲ್ಲವೂ ಇದ್ದಾಗ ಮನುಷ್ಯ ಭವ್ಯವಾಗಿರುವ ಭಾವನೆ ತಂದುಕೊಳ್ಳುತ್ತಾನೆ. ಅದು ಭವ್ಯವಾದದ್ದು.

**(CWM, 11/314–18)** **– ಶ್ರೀಮಾತೆ**

*

**ಅಹಂಕಾರದ ಅಧಿಕಾರ ಮಾಯವಾಗುತ್ತಿದೆ**

ದೈವೀ ಕ್ರಿಯೆ ಸ್ಪಷ್ಟವಾಗಿ ಇದೆ... ಮತ್ತು ಮಾಯವಾಗುತ್ತಿರುವುದು ಅಹಂಕಾರದ ಅಧಿಕಾರ, ಅದು ಹೆಚ್ಚು ಹೆಚ್ಚಾಗಿ ಮಾಯವಾಗುತ್ತಿದೆ. ಇಡಿಯಾಗಿ ಗ್ರಹಿಸುವುದರೊಂದಿಗೆ, ನಿಮಗೆ ತಿಳಿದ ಹಾಗೆ, ಅದು ಅರ್ಥಮಾಡಿಕೊಳ್ಳುವ ಆವಶ್ಯಕತೆ ಇಲ್ಲದ ವಿಷಯ, ನಾವು ಯಾವಾಗಲೂ, ಹಳೆಯ ಮಾನಸಿಕ ರೀತಿಯಿಂದ ತಿಳಿದುಕೊಳ್ಳಲು ಬಯಸುತ್ತೇವೆ, – ತಿಳಿದುಕೊಳ್ಳುವ ಆವಶ್ಯಕತೆ ಇಲ್ಲ. ಈ ಬಗೆಯ ಗ್ರಹಿಸುವಿಕೆ (ಕೈಗಳನ್ನು ತೆರೆದಿರಿಸುವ ಸಂಜ್ಞೆ).

ದೈವೀ ಒತ್ತಡದಡಿಯಲ್ಲಿ ಅಧಿಕಾರದ ಅಲ್ಪಾವಶೇಷಗಳು ಮಾಯವಾಗಬೇಕು, ಮತ್ತು ಅದರ ಸ್ಥಾನದಲ್ಲಿ ಇದು ಬರಬೇಕು (ಅದೇ ಬಗೆಯ ಸಂಜ್ಞೆ, ಕೈಗಳನ್ನು ತೆರೆದಿರಿಸಿದ್ದು): ಗ್ರಹಿಸುವಿಕೆ ಮತ್ತು ವಿಧೇಯತೆ ("ವಿಧೇಯತೆಯಲ್ಲ ಏಕೆಂದರೆ ತಿಳಿದುಕೊಳ್ಳುವ ಆವಶ್ಯಕತೆ ಇರುವುದಿಲ್ಲ): ಭಗವಂತನ ಮೂಲಕ, ಪ್ರತ್ಯೇಕವಾಗಿ ಪ್ರಚೋದನೆಗೆ ಒಳಗಾಗುವುದು. ಇದು ಅಹಂಕಾರದ ಸ್ಥಾನದಲ್ಲಿರಬೇಕು.

ಅಹಂಕಾರದ ಕೊನೆಯ ಗುರುತುಗಳು ಅಳಿಸಿಹೋಗುತ್ತಿರಬೇಕು ಮತ್ತು (ಕೈಗಳನ್ನು ತೆರೆದಿರಿಸಿದ ಸಂಜ್ಞೆ) ಅದರ ಸ್ಥಾನದಲ್ಲಿ (ಅದೇ ಸಂಜ್ಞೆ).

ದಿನವೊಂದರಲ್ಲಿ ಐವತ್ತು ಸಲ ದೈವೀ ಶಕ್ತಿಗಳು ನನ್ನನ್ನು ಚಿಕ್ಕ ಶಿಶುವಿನ ರೀತಿಯಲ್ಲಿ ಒಳಗೆ ಸುತ್ತಿಕೊಂಡು, ಅತ್ತಿತ್ತ ತೂಗಾಡುತ್ತಿರುವ ಭಾವನೆ ಮುಂದುವರಿದುಕೊಂಡು ಹೋಗುತ್ತಿದೆ. (ನಗು), ನಿಖರವಾಗಿ ಅದು ಆ ರೀತಿಯದಾಗಿದೆ.

**(ಅನುಯಾಯಿಯೊಂದಿಗೆ ಮಾತುಕತೆ, June 24, 1972) – ಶ್ರೀಮಾತೆ**

*

**ಅಧಿಕಾರದ ಸಂಪೂರ್ಣ ಬದಲಾವಣೆ**

ದೇಶಗಳಿಗೆ ಹಾಗೂ ರಾಷ್ಟ್ರಗಳಿಗೆ ಅದೇ ಬಗೆಯದಾಗಿದೆ. ಅದೇ ಬಗೆಯ ಅಧಿಕಾರದ ಸಂಪೂರ್ಣ ಬದಲಾವಣೆ. ವ್ಯಕ್ತಿವಿಶಿಷ್ಟ ಅಧಿಕಾರಿಗಳ ಬದಲಾಗಿ ಅಲ್ಲಿ ದೈವೀ ಅಧಿಕಾರ ಬರಲಿದೆ ಮತ್ತು ಅಧಿಕಾರದ ಈ ಬದಲಾವಣೆಯೇ ಮಾತನಾಡಲಸಾಧ್ಯವಾದ ಅಸ್ತವ್ಯಸ್ತತೆಯನ್ನು ಸೃಷ್ಟಿಸುತ್ತದೆ, ಅದರಲ್ಲಿ ಜನರು ಈಗ ಜೀವಿಸುತ್ತಿದ್ದಾರೆ – ಅಸ್ತವ್ಯಸ್ತತೆ ಪ್ರತಿರೋಧದಿಂದ ಉಂಟಾಗಿದೆ.

ಸತ್ತೆಯ ಒಂದು ಭಾಗ (ಅದ್ಯಾವುದೇ ಆಗಿರಲಿ) ಸಂಕ್ರಮಣದ ಸ್ಥಿತಿಯನ್ನು ಹೆಚ್ಚು ಹೆಚ್ಚಾಗಿ ಸಮೀಪಿಸುತ್ತಿದ್ದ ಹಾಗೆ, ಎಂದರೆ ಈ ಸಂಕ್ರಮಣಕ್ಕೆ ಅದು ತಯಾರಾಗುತ್ತಿದ್ದ ಹಾಗೆ ಸೂಕ್ಷ್ಮ ಪರಿಜ್ಞಾನದಲ್ಲಿ ಅದು ಹೆಚ್ಚು ಹೆಚ್ಚಾಗಿ ಬೆಳೆಯುತ್ತದೆ. ಹಾಗಾಗಿ ಸಮಸ್ಯೆಗಳ ಹಂತದಿಂದ ಆಚೆಗೆ ಹೋಗಲು ಹಾಗೂ ವಿಶ್ವಂಭರ ದೃಷ್ಟಿಯಿಂದ ನೋಡಲು ಮನುಷ್ಯ ಶಕ್ತನಾದ ಸಮಯದಲ್ಲಿ ವೈಯಕ್ತಿಕ ಸೂಕ್ಷ್ಮ ಪರಿಜ್ಞಾನ ತೀಕ್ಷ್ಣ ಸೂಕ್ಷ್ಮಗ್ರಾಹಿತ್ವ(acuteness)ವನ್ನು ಪಡೆಯುತ್ತದೆ. ಇದನ್ನು ನಾನು ಮೊದಲು ಗಮನಿಸಿದ್ದೆ; ಈಗ ದೇಹದ ವಿಷಯದಲ್ಲಿ ಅದು ಪುನರುತ್ಪಾದನೆಯಾಗುವಂತೆ ಮಾಡುತ್ತದೆ. ಅದು ಒಂದು ಸೂಕ್ಷ್ಮ ಗ್ರಾಹಿತ್ವವಿರುವ ಲಾಭ ಪಡೆಯುತ್ತದೆ, ಸರಿ, ಅದು ಭಯ ತರಿಸುವಂತಹದು. ಅದು ಹಾಗೇಕಿರುತ್ತದೆ ಎಂಬುದನ್ನು ತಿಳಿದುಕೊಂಡಿರದ ಜನರು ನಿಜವಾಗಿ ಭಯಭೀತರಾಗುತ್ತಾರೆ ... ರೋಗಗ್ರಸ್ತರಾಗುವ ಸಾಧ್ಯತೆಯಿರುತ್ತದೆ. ಸಮಸ್ಯೆಗಳಿಗೂ ಕೂಡ ವಿಷಯ ಅದೇ ಆಗಿರುತ್ತದೆ. ತಿಳಿದುಕೊಂಡವರಿಗೆ ಮತ್ತು ಅರ್ಥಮಾಡಿಕೊಂಡವರಿಗೆ ಮಾತ್ರ

ಅದು ಕೊನೆಯ ಪ್ರಗತಿಯನ್ನು ಸಾಧಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ, ಇದನ್ನು ಕೈಕೊಳ್ಳಲು (ಶ್ರೀಮಾತೆಯವರು ಕೈಗಳನ್ನು ಮೇಲ್ಗಡೆಗೆ ತೆರೆದಿಡುತ್ತಾರೆ.) ಸಾರದಲ್ಲಿ ಇನ್ನೂ ಯಾವುದು ಪ್ರತ್ಯೇಕವಾಗಿದೆ ಎಂಬ ಭ್ರಮೆ ಹೊಂದಿರುತ್ತದೆಯೋ ಅದು ಕರಗಿ ಹೋಗಬೇಕು. ಅದು ತನಗೇ: "ಅದು ನನಗೆ ಸಂಬಂಧಿಸಿದುದಲ್ಲ, ನಾನು ಅಸ್ತಿತ್ವದಲ್ಲಿಲ್ಲ." ಎಂದು ಹೇಳಬೇಕು. ಇದು ಮನುಷ್ಯ ಹೊಂದಿರಬಹುದಾಗ ಅತ್ಯಂತ ಒಳ್ಳೆಯ ಮನೋಭಾವ. ನಂತರ ಶ್ರೇಷ್ಠ ವಿಶ್ವಂಭರ ಲಯಬದ್ಧತೆಯಲ್ಲಿ ಅದನ್ನು ಕೈಗೆತ್ತಿಕೊಳ್ಳಲಾಗುವುದು.

**(CWM, 11/221–23)** **– ಶ್ರೀಮಾತೆ**

*

| **ಒಪ್ಪೋಲೆ :<br>ಅಖಿಲ ಭಾರತ ಪತ್ರಿಕೆ, ಜನವರಿ 2016** | | |
|---|---|---|
| **ಪುಟ** | **ತಪ್ಪು** | **ಒಪ್ಪು** |
| 2 | ಟಿಪ್ಪಟಿ | ಟಿಪ್ಪಣಿ |

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 1ನೇ ಜನವರಿ 2016ರ ಶುಕ್ರವಾರದಂದು ಬೆಳಿಗ್ಗೆ 7 ಗಂಟೆಯಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ ಸಾಯಂಕಾಲ 5 ಗಂಟೆಯಿಂದ 6.15 ಗಂಟೆಯವರೆಗೆ "Aswapati and Sri Aurobindo in Savitri" by Georges Van Vrekhem ವಿರಚಿತ ವೀಡಿಯೋ ಚಿತ್ರ ತೋರಿಸಲಾಯಿತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 2ನೇ ಜನವರಿ 2016 ರ ಶನಿವಾರದಂದು "ಸಂಸ್ಥಾಪಕರ ದಿನ" ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10 ಗಂಟೆಯಿಂದ 10.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ ನಡೆದ ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್‌ರವರು ಶಾಲಾ ಶಿಕ್ಷಕ–ಶಿಕ್ಷಕಿಯರನ್ನು ಉದ್ದೇಶಿಸಿ ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಮತ್ತು ಮೀರಾಂಬಿಕ ಶಾಲೆಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 20ನೇ ಜನವರಿ 2016 ರ ಬುಧವಾರದಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ "ಶ್ರೀ ಚಂದ್ರಮಣಿ ಧತ್ತಿ ನಿಧಿ" ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಮೌಲ್ಯಾಧಾರಿತ ಕಿರು ಪ್ರಹಸನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಪ್ರಶಸ್ತಿಯನ್ನು ಶಾಲೆಯ ಶ್ರದ್ಧಾ ಗುಂಪು ಹಾಗೂ ಪೂರ್ಣ ಗುಂಪು ಪಡೆಯಿತು. ಶ್ರೀಮತಿ ಕಮಲಾ ಚಂದ್ರಮಣಿ ಬಹುಮಾನ ವಿತರಿಸಿದರು. ಸಂಸ್ಥೆಯ ಶಿಕ್ಷಕ ವಿದ್ಯಾರ್ಥಿ ವೃಂದ ಸಕ್ರಿಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ದಿನಾಂಕ 26/01/2016 ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ 67 ನೇ ಗಣರಾಜ್ಯೋತ್ಸವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಜೆ.ಪಿ. ನಗರ ಸಂಚಾರಿ ಪೋಲಿಸ್ ಸಬ್–ಇನ್‌ಸ್ಪೆಕ್ಟರ್ ಶ್ರೀ ಸಿದ್ದೇಗೌಡರವರು ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಅರವಿಂದರ ಐದು ಕನಸುಗಳ ಕರ್ತವ್ಯದ ಮಹತ್ವದ ಬಗ್ಗೆ ಬೆಳಕು ಚೆಲ್ಲಿದರು. ಶಾಲೆಯ ವಿದ್ಯಾರ್ಥಿಗಳು ಗಣರಾಜ್ಯೋತ್ಸವದ ಮಹತ್ವದ ಬಗ್ಗೆ ಭಾಷಣ ಮಾಡಿದರು. ದೇಶಭಕ್ತಿ ಗೀತೆಗಳನ್ನು ಹಾಡಿದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



*Keep only my soul to adore eternally*
*And meet Thee in each form*
*and soul of Thee.*

- Sri Aurobindo

**RNI No. 22511/1971**
No. of Pages **64 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.